ಬೆಲೆ: ಎರಡು ಆಣೆ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಕರ್ಮವೀರ

KARMAVEER
WEEKLY
HUBLI
*
APRIL 8
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.


ಸಂಪುಟ ೧೮] 卐 ಹುಬ್ಬಳ್ಳಿ ಸೋಮವಾರ ತಾರೀಖು ೮—೪—೧೯೪೬ 卐 [ಸಂಚಿಕೆ ೧

ಸ್ವಾತಂತ್ರ್ಯಪಿಪಾಸೆ ಭಾರತದಲ್ಲಿ ಯಾವಾಗಲೂ ಇತ್ತು

ಭಿನ್ನಭಿನ್ನ ಸತ್ವಗಳನ್ನು ಒಂದಾಗಿ ಎರಕ ಹೊಯ್ಯುವ ವೈಶಿಷ್ಟ್ಯ

(ಪಂ. ಜವಾಹರಲಾಲ ನೆಹರೂ ಅವರಿಂದ)

ಪಂಡಿತ ಜವಾಹರಲಾಲ ನೆಹರೂ ಅವರು ತಮ್ಮ ೧೯೪೨—೪೫ ರ ಬಂಧನಾವಧಿಯಲ್ಲಿ "ಡಿಸ್ಕವರೀ ಆಫ್ ಇಂಡಿಯಾ'' (ಭಾರತ ಅಂತರ್ದರ್ಶನ) ಎಂಬ ಗ್ರಂಥವನ್ನು ಬರೆದಿದ್ದರು. ಅದೀಗ ಅಮೇರಿಕೆಯಲ್ಲಿ ಪ್ರಸಿದ್ಧವಾಗಿದೆ. ಅದರ ಕೆಲ ಅಂಶಗಳನ್ನು "ಏಶಿಯಾ'' ಪತ್ರಿಕೆಯಿಂದೆತ್ತಿ ಇಲ್ಲಿ ಕೊಡಲಾಗಿದೆ.



ಹಿಂದುಸ್ತಾನದ ದೀರ್ಘ ಇತಿಹಾಸದಲ್ಲಿ ಅದು ಅನೇಕಾನೇಕ ಸಂಕಷ್ಟಮಯಕಾಲಗಳನ್ನು ಅನುಭವಿಸಿದೆ. ಅಗ್ನಿಬಾಧೆ, ಯುದ್ಧಬಾಧೆ, ಕ್ಷಾಮಬಾಧೆಗಳು ಅದನ್ನು ಧ್ವಂಸಗೊಳಿಸಿದ್ದುಂಟು. ಅಂತರಿಕ ಸುವ್ಯವಸ್ಥೆ ಕುಸಿದುಬಿದ್ದುದುಂಟು. ಆದರೂ ಈ ಇತಿಹಾಸವನ್ನು ವಿಶಾಲದೃಷ್ಟಿಯಿಂದ ಅವಲೋಕಿಸಿದಲ್ಲಿ ಹಿಂದುಸ್ತಾನ ಒಂದೇ ಉಸಿರಿಗೆ ಅನುಭವಿಸಿದ ದೀರ್ಘ ಶಾಂತಿ ಸುವ್ಯವಸ್ಥೆಗಳ ಕಾಲಾವಧಿಗಳು ಯುರೋಪಿಗೆ ಲಭಿಸಿದ್ದಕ್ಕಿಂತ ಹೆಚ್ಚಾಗಿದ್ದುದನ್ನು ಕಾಣಬಹುದು. ತುರ್ಕರ ಮತ್ತು ಅಫಗಾಣಿಗಳ ಅಭಿಯೋಗದ ನಂತರದ ಶತಮಾನಗಳಿಂದ ಮೊಗಲ ಸಾಮ್ರಾಜ್ಯದ ವಿನಾಶದ ವರೆಗಿನ ಕಾಲಕ್ಕೂ ಇದೇ ಅನ್ವಯಿಸುತ್ತದೆ. ಬ್ರಿಟನ್ ದೇವಿಯೇ ಹಿಂದುಸ್ತಾನಕ್ಕೆ ಮೊದಲನೆ ಬಾರಿ ಶಾಂತಿ ಸುವ್ಯವಸ್ಥೆಗಳನ್ನು ತಂದವಳೆಂಬುದು ಅತ್ಯಂತ ಅಸಾಧಾರಣ ಭ್ರಾಂತಿಗಳಲ್ಲಿ ಒಂದು. ಬ್ರಿಟಿಶರ ಆಳಿಕೆ ಹಿಂದುಸ್ತಾನದಲ್ಲಿ ಸ್ಥಾಪಿಸಲ್ಪಟ್ಟಾಗ ಈ ದೇಶದ ಅವಸ್ಥೆ ಅತ್ಯಂತ ಕೀಳ್ಮಟ್ಟದಲ್ಲಿದ್ದಿತೆಂಬುದೂ ಆಗ ರಾಜಕೀಯ ಮತ್ತು ಆರ್ಥಿಕ ಸಂಘಟನೆ ಚೂರುಚೂರಾಗಿತ್ತೆಂಬುದೂ ನಿಜ. ಆ ಆಳಿಕೆ ಇಲ್ಲಿ ಸ್ಥಾಪಿತವಾದ ಕಾರಣಗಳಲ್ಲಿ ಇದೂ ಒಂದಾಗಿತ್ತು.

"ದಾಳಿ ಬಂದೆರಗಿದರೆ ಬಾಗಿತ್ತು ಪೌರ್ವಾತ್ಯ,
ತಾಳಿತ್ತು ಗಾಢ ಧಿಕ್ಕಾರದಿಂದ;
ದಾಳಿಗಗೆ ಸರಿದು ಸಾಗಲು ದಾರಿಬಿಟ್ಟು ತಾ
ಮರಳಿತ್ತು ಚಿಂತನೆಗೆ ಮೊದಲಿನಂದ"

ಎಂದು ಕವಿ ಹೇಳುತ್ತಾನೆ. ಅವನ ಈ ಪದ್ಯವನ್ನು ಬಹಳ ಜನ ಉದಾಹರಿಸುತ್ತಾರೆ. ಪೌರ್ವಾತ್ಯ ದೇಶ, ಅಂತೂ ಅದರಲ್ಲಿ ಹಿಂದುಸ್ತಾನವೆಂದು ಹೆಸರಾದ ದೇಶ, ಚಿಂತನೆಯಲ್ಲಿಯೇ ಅನುರಕ್ತವಾಗಿತ್ತೆಂಬುದು, ಅದರ ಚಿಂತನೆಗಳು ಬಹುತೇಕ ವಾಸ್ತವವಾದಿಗಳು ಅಥವಾ ವ್ಯವಹಾರವಾದಿಗಳು ಎನಿಸಿಕೊಳ್ಳುವವರಿಗೆ ವ್ಯರ್ಥ, ಅರ್ಥರಹಿತವೆಂದು ಭಾಸವಾಗುವಂತಿವೆಯೆಂಬುದು ನಿಜ. ಹಿಂದುಸ್ತಾನ ಯಾವಾಗಲೂ ಚಿಂತನೆಗೂ ಚಿಂತಕರಿಗೂ ಗೌರವವೀಯುತ್ತ ಬಂದಿದೆ. ಯೋಧರಾಗಲಿ, ಧನಿಕರಾಗಲಿ ಚಿಂತಕರಿಗಿಂತ ಮೇಲೆಂದು ಅದು ಎಂದೆಂದೂ ಒಪ್ಪಿಕೊಂಡಿಲ್ಲ. ತನ್ನ ಅಧಃಪಾತದ ದಿನಗಳಲ್ಲಿ ಕೂಡ ಅದು ಚಿಂತನೆಯ ಮೋಹ ಬಿಡಲಿಲ್ಲ, ಅದರಲ್ಲೆ ಸಿಕ್ಕಿದಷ್ಟು ಸಮಾಧಾನವನ್ನು ಪಡೆಯುತ್ತ ಬಂದಿದೆ.

ಆದರೆ ಹಿಂದುಸ್ತಾನ ಯಾವಾಗಲೂ ದಾಳಿಗರೆದುರು ತಲೆವಾಗುತ್ತಲೆ ಬಂದಿದೆ, ಅಥವಾ ವಿದೇಶೀ ಸೈನ್ಯಗಳ ಅಭಿಯೋಗದತ್ತ ಉದಾಸೀನವಾಗಿಯೇ ಇತ್ತು ಎಂಬ ಮಾತು ನಿಜವಲ್ಲ. ಅದು ಯಾವಾಗಲೂ ಅವುಗಳನ್ನು ಪ್ರತಿಭಟಿಸಿದೆ—ಒಮ್ಮೊಮ್ಮೆ ಯಶಸ್ವಿಯಾಗಿ ಕೆಲವೊಮ್ಮೆ ವಿಫಲವಾಗಿ. ವಿಫಲವಾದಾಗಲೂ ಅದನ್ನು ನೆನಪಿನಲ್ಲಿಟ್ಟುಕೊಂಡು ಇನ್ನೊಂದು ಪ್ರಯತ್ನಕ್ಕೆ ಅದು ಸಿದ್ಧತೆನಡೆಸಿದ್ದನ್ನು ಕಾಣುತ್ತೇವೆ. ಹಿಂದುಸ್ತಾನದ ಕ್ರಮ ಇಬ್ಬಗೆಯಾಗಿತ್ತು—ಒಂದು, ಹೋರಾಡಿ ದಾಳಿಗರನ್ನು ಹೊರಗಟ್ಟುವುದು; ಇನ್ನೊಂದು ಹೊರಗಟ್ಟಲಾರದವರನ್ನು ತನ್ನೊಳಗೆ ಸೇರಿಸಿಕೊಂಡು ದಕ್ಕಿಸಿಕೊಳ್ಳುವದು ಸಿಕಂದರನ ಪಡೆಗಳನ್ನು ಸಾಕಷ್ಟು ಯಶಸ್ವಿಯಾಗಿ ಅದು ಎದುರಿಸಿತು. ಅವನು ಸತ್ತೊಡನೆ ಉತ್ತರದಲ್ಲಿದ್ದ ಗ್ರೀಕ ಆಕ್ರಮಣ ಸೇನೆಗಳನ್ನು ಹೊರಗೋಡಿಸಲಾಯಿತು. ಅದಾದ ಬಳಿಕ ಅದು ಹಿಂದೀ—ಗ್ರೀಕರನ್ನೂ ಹಿಂದೀ-ಸೀಥಿಯನ್ನರನ್ನೂ ತನ್ನಲ್ಲಿ ಅಟ್ಟಿಸಿಕೊಂಡು ಕೊನೆಗೆ ಪುನಃ ರಾಷ್ಟ್ರೀಯ ಮುಂದಾಳ್ತನವನ್ನು ಸ್ಥಾಪಿಸಿಕೊಂಡಿತು. ಹೂಣರನ್ನು ತಲೆಮಾರು-ತಲೆಮಾರುಗಳ ವರೆಗೆ ಹೋರಿ ಹೊರಗಟ್ಟುವದಾಯಿತು; ಅವರಲ್ಲಿ ಅಳಿದುಳಿದವರನ್ನು ದೇಶದಲ್ಲಿ ಸಾರೂಪ್ಯಕ್ಕೆ ತರುವದಾಯಿತು. ಅಫಘಾಣಿಗಳ ವ್ಯಾಪ ವಿಸ್ತರಿಸಿದ್ದು ಬಹಳ ಸಾವಕಾಶವಾಗಿ. ದಿಲ್ಲಿಯ ಗದ್ದುಗೆಯ ಮೇಲೇರಿದ ಅವರ ಸ್ಥಿತಿ ಭದ್ರವಾಗಬೇಕಾದರೆ ಶತಮಾನಗಳು ಹಿಡಿದವು. ಅದೊಂದು ಅವಿರತವಾದ, ದೀರ್ಘ ಕಾಲದ ಹೋರಾಟವಾಗಿತ್ತು. ಈ ಹೋರಾಟ ನಡೆದಿರುವಾಗಲೇ ಅತ್ತ ಸಾರೂಪ್ಯಕರಣ ಮತ್ತು ಹಿಂದೀಕರಣದ ಕ್ರಿಯೆ ಸಾಗಿಯೆ ಇತ್ತು. ಕೊನೆಯಲ್ಲಿ ಆಕ್ರಮಣಕಾರರೂ ಇತರರಷ್ಟೇ ಹಿಂದೀಯರಾಗಿ ಬಿಟ್ಟಿದ್ದರು.

ಅಕಬರನು ವಿವಿಧ ಸತ್ವಗಳನ್ನು ಎರಕಹೊಯ್ದು ಒಂದೇ ಹಿಂದೀ ರಾಷ್ಟ್ರವನ್ನಾಗಿ ರೂಪಿಸುವ ಹಳೆಯ ಭಾರತೀಯ ಧ್ಯೇಯದ ಪ್ರತಿನಿಧಿಯಾಗಿದ್ದನು. ಅವನು ಹಿಂದುಸ್ತಾನದೊಡನೆ ಒಂದಾಗಿದ್ದನಾಗಿ ಹಿಂದುಸ್ತಾನವೂ ಅವನನ್ನು ಹೊರಗಿನವನಾಗಿದ್ದರೂ ಆದರಿಸಿತು. ಇದೇ ಕಾರಣದಿಂದ ಅವನು ವೈಭವಶಾಲಿಯಾದ ಸಾಮ್ರಾಜ್ಯವೊಂದಕ್ಕೆ ಬಲವಾದ ನೆಲಗಟ್ಟನ್ನು ಹಾಕಬಲ್ಲವನಾದನು. ಎಲ್ಲಿವರೆಗೆ ಅವನ ಉತ್ತರಾಧಿಕಾರಿಗಳು ಆ ಧೋರಣೆಯನ್ನು ಅನುಸರಿಸಿ ಹಿಂದೀ ರಾಷ್ಟ್ರದ ಸ್ವಾಭಾವಿಕ ಜೀವಾಳದೊಡನೆ ಏಕರಸರಾಗಿದ್ದರೋ ಅಲ್ಲಿವರೆಗೆ ಅವರ ಸಾಮ್ರಾಜ್ಯ ತಾಳಿತು. ಆ ದಾರಿಯಿಂದ ಚ್ಯುತರಾಗಿ ರಾಷ್ಟ್ರೀಯ ವಿಕಾಸದ ಪ್ರವಾಹವನ್ನು ಎದುರಿಸತೊಡಗಿದೊಡನೆ ಅವರು ದುರ್ಬಲರಾದರು; ಅವರ ಸಾಮ್ರಾಜ್ಯ ಪುಡಿಪುಡಿಯಾಯಿತು, ಹೊಸ ಅಂದೋಲನಗಳು ಉಕ್ಕಿ ಬಂದವು. ಅವುಗಳ ದೃಷ್ಟಿಕೋನ ಸಂಕುಚಿತವಾಗಿದ್ದರೂ ಉದ್ರಿಕ್ತ ರಾಷ್ಟ್ರೀಯತೆಯನ್ನು ಅವುಗಳಲ್ಲಿ ಕಾಣಬಹುದಾಗಿತ್ತು. ಅವು ಶಾಶ್ವತವಾಗಿ ಕಟ್ಟಲಾರದೆ ಹೋದರೂ ಮೊಗಲ ಸಾಮ್ರಾಜ್ಯವನ್ನು ನಿರ್ನಾಮ ಮಾಡಲು ಸಮರ್ಥವಾದವು.

ಕೆಲಕಾಲದ ಮಟ್ಟಿಗೆ ಅವು ಯಶಸ್ವಿಯಾದವು. ಆದರೆ ಅವು ಭೂತಕಾಲದ ಮೇಲೆಯೇ ಅತಿರೇಕ ಗಮನವನ್ನಿತ್ತು ಅದನ್ನು ಇದ್ದಕ್ಕಿದ್ದಂತೆ ಪುನರುಜ್ಜೀವಿಸುವ ಹವ್ಯಾಸಕ್ಕೆ ಬಿದ್ದವು. ಭೂತಕಾಲವೆಂದಿಗೂ ವರ್ತಮಾನಕಾಲದ ಸ್ಥಾನವನ್ನು ಆಕ್ರಮಿಸಲಾರದು, ತಮ್ಮ ಆ ವರ್ತಮಾನಕಾಲದ ಹಿಂದುಸ್ತಾನದಲ್ಲಿ ಕೂಡ ನಿಂತ ನೀರಿನ ಕೊಳಕು ಒಟ್ಟಿತ್ತು ಎಂದು ಅವರಿಗೆ ಗೋಚರಕ್ಕೆ ಬರಲಿಲ್ಲ. ಬದಲಿಸುತ್ತಿರುವ ಜಗತ್ತಿನೊಡನೆ ಅವರ ಸಂಬಂಧ ತಪ್ಪಿ ಹೋಗಿತ್ತು. ಹಿಂದುಸ್ತಾನ ಬಹಳ ಹಿಂದುಳಿದು ಬಿಟ್ಟಿತ್ತು. ಪಶ್ಚಿಮದಲ್ಲಿ ಹೊಸ ದೃಷ್ಟಿ ಹೊಸತಂತ್ರಗಳನ್ನನುಸರಿಸಿ ಹೊಸ ಜಗತ್ತೊಂದು ಉದ್ಭವಿಸಿದ ಸಂಗತಿಯನ್ನು ಅವರು ಗಮನಿಸಲಿಲ್ಲ. ಬ್ರಿಟಿಶರು ಅವರಿಗೆ ಗೊತ್ತೇ ಇಲ್ಲದ ಆ ಹೊಸ ಜಗತ್ತಿನ ಪ್ರತಿನಿಧಿಗಳಾಗಿದ್ದರೆಂದೂ ಅವರು ಮನಗಾಣಲಿಲ್ಲ. ಬ್ರಿಟಿಶರೇನೋ ವಿಜಯಿಗಳಾದರು. ಆದರೆ ಅವರ ಗೆಲ್ಮೆ ಇನ್ನೂ ಪೂರ್ಣವಾಗಿ ಅವರು ಬಲವಾಗಿ ಬೇರೂರುವ ಮೊದಲೇ ಉತ್ತರದಲ್ಲಿ ದೊಡ್ಡ ದಂಗೆ ಎದ್ದು ಸ್ವಾತಂತ್ರ್ಯಯುದ್ಧದ ರೂಪ ಧರಿಸಿತು. ಬ್ರಿಟಿಶರ ಆಳಿಕೆಯ ಕೊನೆಯೇ ಆಗುವದಿತ್ತು, ಸ್ವಲ್ಪ ತಪ್ಪಿತು. ಸ್ವಾತಂತ್ರ್ಯ, ಸ್ವಾಧೀನತೆಗಳ ಪಿಪಾಸೆ ಹಿಂದುಸ್ತಾನದಲ್ಲಿ ಯಾವಾಗಲೂ ಇದ್ದೇ ಇತ್ತು.

ತಾಳುವ ಶಕ್ತಿ

ನಾವು ಹಿಂದೀಯರು ಮಡಿವಂತ ಜನಾಂಗ; ನಮ್ಮ ಇತಿಹಾಸ, ನಮ್ಮ ಸಂಪ್ರದಾಯಗಳ ಅಭಿಮಾನ ನಮಗೆ ಹೆಚ್ಚು. ಅವುಗಳನ್ನು ಅಚ್ಚಳಿಯದಂತೆ ಉಳಿಸಲು ನಾವು ನಮ್ಮ ಸುತ್ತ ಗೋಡೆಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದ್ದೇವೆ. ಹೀಗೆ ವರ್ಣಾಭಿಮಾನ ಮತ್ತು ಬಿಗಿಯಾಗುತ್ತ ಹೋಗುತ್ತಿದ್ದ ಜಾತೀಯ ನಿಯಮಗಳು ಇರುತ್ತಲೂ ವರ್ಣಪಾರಿಶುದ್ಧ್ಯದ ಹೆಮ್ಮೆ ಹೊತ್ತ ಬೇರೆ ಕೆಲ ಜನಾಂಗಗಳಂತೆ ನಮ್ಮದೂ ಅನೇಕ ಜನಾಂಗಗಳ—ಆರ್ಯ, ದ್ರವಿಡ, ಯಹೂದ್ಯ, ಮಂಗೋಲಿಯನ್, ಜನಾಂಗಗಳ ಕಲಸು ಮೇಲೋಗರವಾಗಿದೆ. "ಉಗ್ರ ಯುದ್ಧಪ್ರಿಯ ಜನಗಳು ಹಿಂದುಸ್ತಾನದ ಉತ್ತರದ ಸಮಭೂಮಿಗಳ ಮೇಲೆ ನುಗ್ಗಿ ಬಂದವು. ಅಲ್ಲಿನ ಅರಸರನ್ನು ಸೋಲಿಸಿದವು, ಅದರ ನಗರಗಳನ್ನು ಹಿಡಿದು ಸೂರೆ ಮಾಡಿದವು. ಹೊಸ ರಾಜ್ಯಗಳನ್ನೂ ಹೊಸ ರಾಜಧಾನಿಗಳನ್ನೂ ಕಟ್ಟಿದವು. ಆ ಮೇಲೆ ತೀವ್ರ ಗತಿಯಿಂದ ಹಿಂದುಸ್ತಾನದ ಜನಪ್ರವಾಹದಲ್ಲಿ ಲೀನವಾಗಿ ಬಿಟ್ಟವು. ಅವರ ವಂಶಜರಲ್ಲಿ ಹರಿಯುತ್ತಿದ್ದ ಅಲ್ಪಸ್ವಲ್ಪ ವಿದೇಶಿ ರಕ್ತ, ಕೆಲವೊಂದು ವಿದೇಶೀ ಪದ್ಧತಿಗಳು ಹೊರತು ಮತ್ತಾವುದನ್ನೂ ಅವರು ಬಿಟ್ಟು ಹೋಗಲಿಲ್ಲ. ಆ ಪದ್ಧತಿಗಳೂ ಸುತ್ತಣ ಪ್ರಚಂಡ ವಾತಾವರಣದ ಸೆಳವಿನಲ್ಲಿ ರೂಪಾಂತರ ಹೊಂದಿ ಸ್ವದೇಶಿಯಾಗಿಬಿಟ್ಟವು," ಎಂದು ಡಾಡ್ವೆಲ್ಲನು ತನ್ನ "ಹಿಂದುಸ್ತಾನ" ಎಂಬ ಪುಸ್ತಕದಲ್ಲಿ ಬರೆದಿದ್ದಾನೆ.

ಈ ಪ್ರಚಂಡ ವಾತಾವರಣದ ಅಸ್ತಿತ್ವಕ್ಕೆ ಕಾರಣವೇನು? ಕೆಲಮಟ್ಟಿಗೆ ಹಿಂದುಸ್ತಾನದ ಭೂಗೋಲ ಮತ್ತು ಹವಾಮಾನದ, ಹಿಂದುಸ್ತಾನದ ಆ ಗಾಳಿಯ ಪರಿಣಾಮವಿದು. ಆದರೆ ಅದಕ್ಕಿಂತಲೂ ಹೆಚ್ಚಾಗಿ, ತನ್ನ ಉಷಃಕಾಲದಲ್ಲಿ, ಹಿಂದುಸ್ತಾನ ಇನ್ನೂ ಬಹಳ ಎಳೆಯ ನಳನಳಿಸುವ ದೇಶವಾಗಿದ್ದಾಗ, ಅದರ ಮನಸ್ಸಿನಲ್ಲಿ ಅಚ್ಚೊತ್ತಿದ ಒಂದು ಪ್ರಬಲ ಪ್ರೇರಣೆ, ಒಂದು ಉತ್ಕಟ ಉತ್ಕಂಠೆ, ಅಥವಾ ಜೀವನದ ಒಳ ಅರ್ಥದ ಒಂದು ಕಲ್ಪನೆಯೋ ಇದಕ್ಕೆ ಕಾರಣವಾಗಿತ್ತೆನ್ನಬೇಕು. ಈ ಪ್ರೇರಣೆ ಪುನಃ ಪುನಃ ಜಾಗೃತವಾಗಿ ಅದರೊಡನೆ ಸಂಪರ್ಕ ಬಂದವರನ್ನೆಲ್ಲ ಪ್ರಭಾವಿತಗೊಳಿಸಿ, ಅವರು ಎಷ್ಟೇ ಭಿನ್ನರಾಗಿದ್ದರೂ ಅವರನ್ನು ಮಾರ್ಪಡಿಸಿಕೊಂಡು ತನ್ನವರನ್ನಾಗಿ ಮಾಡಿಕೊಳ್ಳುವ ಸಾಮರ್ಥ್ಯವನ್ನು ತೋರಿಸಿದೆ.

ಹಿಂದೀ ನಾಗರಿಕತೆಯ ಬೆಳವಣಿಗೆಯ ಬೇರಿನಲ್ಲಿ ಒಂದು ಪ್ರೇರಣೆ, ಒಂದು ಉತ್ಕಂಠೆ, ಒಂದು ಕಲ್ಪನೆಯಿದೆಯೆಂದು ಹೇಳುವದು ಅರ್ಥರಹಿತ ಅಹಂಕಾರವೆಂದು ತೋರಬಹುದು. ಒಬ್ಬ ವ್ಯಕ್ತಿಯ ಜೀವನ ಕೂಡ ನೂರಾರು ಕಡೆಗಳಿಂದ ಸ್ಫೂರ್ತಿಯನ್ನು ಪಡೆದಿರುತ್ತದೆ. ಒಂದು ರಾಷ್ಟ್ರದ ಅಥವಾ ನಾಗರಿಕತೆಯ ಜೀವನ ಇನ್ನಷ್ಟು ಕ್ಲಿಷ್ಟವಾಗಿರಬೇಕು. ಹಿಂದುಸ್ತಾನದ ಸಾಗರ ತರಂಗಗಳ ಮೇಲೆ ಅಸಂಖ್ಯ ವಿಚಾರಗಳು ತೇಲುತ್ತಿವೆ. ಅವುಗಳಲ್ಲೆಷ್ಟೊ ಪರಸ್ಪರವಿರುದ್ಧರೂಪದವು ಒಂದು ವಿಶಿಷ್ಟ ವಾದದ ಸಮರ್ಥನೆಗಾಗಿ ಒಂದು ಗುಂಪಿನ ವಿಚಾರಗಳನ್ನೆತ್ತಿ ತೋರುವದೆಷ್ಟು ಸುಲಭವೋ ಅಷ್ಟೇ ಇನ್ನೊಂದು ಗುಂಪಿನ ವಿಚಾರಗಳನ್ನೆತ್ತಿ ಆ ವಾದವನ್ನು ನಿರಸ್ತಗೊಳಿಸುವದೂ ಸುಲಭ. ಇದು ಎಲ್ಲ ದೇಶಗಳಿಗೂ ಸ್ವಲ್ಪಮಟ್ಟಿಗೆ ಅನ್ವಯಿಸುತ್ತದೆ. ಸಜೀವವಾದುದಕ್ಕೆ ನಿರ್ಜೀವವಾದುದೆಷ್ಟೋ ಅಂಟಿಕೊಂಡಿರುವ ಹಿಂದುಸ್ತಾನದಂಥ ವಿಶಾಲ ದೇಶದಲ್ಲಿ ಅದು ಬಹಳ ಸುಲಭ.

ನಾವು ಯುಗಯುಗಾಂತರಗಳಿಂದ ಮಾರ್ಪಾಟು ಹೊಂದುತ್ತ ಬಂದಿದ್ದೇವೆ. ಯಾವುದೊಂದು ಕಾಲಾವಧಿಯಲ್ಲಿಯೂ ನಾವು ಅದರ ಹಿಂದಿನ ಅವಧಿಯಲ್ಲಿದ್ದಂತೆ ಇದ್ದುದಿಲ್ಲ. ಇಂದು ನಮ್ಮ

—೬ನೇ ಪುಟ ನೋಡಿರಿ

ಭಾರತದಲ್ಲಿಯ ಶಿಕ್ಷಣ

ಮೂಲ ಲೇಖಕರು :
ಶ್ರೀ. ಶಾಮಪ್ರಸಾದ ಮುಕರ್ಜಿ

ಕನ್ನಡಿಸಿದವರು :
ನೆಗಳೂರು ರಂಗನಾಥ

[ತಾ. ೧೮-೩-೪೭ರ ಸಂಚಿಕೆಯಿಂದ ಮುಂದರಿದುದು]

ತಂತ್ರ ಶಿಕ್ಷಣ

ತಂತ್ರಶಿಕ್ಷಣದ ಹಣೆಯ ಬರೆಹವಾದರೂ ಪ್ರಾಥಮಿಕ ಶಿಕ್ಷಣದಂತೆಯೆ ಆಯಿತು. ಸರಕಾರಕ್ಕೆ ಅನೇಕ ಸ್ಥಾಪತ್ಯ ಶಾಸ್ತ್ರವಿಶಾರದರ ಮೇಲ್ನೋಟಕರ ಅಗತ್ಯವಿದ್ದರೂ ದೊಡ್ಡ ಪ್ರಮಾಣದಲ್ಲಿ ದೇಶದ ಔದ್ಯೋಗೀಕರಣದ ಕಡೆಗೆ ಮನಸ್ಸು ಹಾಕಲಿಲ್ಲ. ತದ್ವಿರುದ್ಧವಾಗಿ ಇತಿಹಾಸದ ಸಂಗತಿಗಳನ್ನು ಮರೆಯಲ್ಲಿಟ್ಟು ಭಾರತವು ಯಾವಾಗಲೂ ಎಲ್ಲ ಕಾಲದಲ್ಲೂ ಕೃಷಿಪ್ರಧಾನ ದೇಶವೆಂದು ಸಾಧಿಸಿದರು; ಮತ್ತು ಒಕ್ಕಲುತನವೇ ಪ್ರಮುಖ ಉದ್ಯೋಗವಾಗಿ ಉಳಿಯಬೇಕೆಂದು ಬಯಸಿದರು. ಪರಿಸ್ಥಿತಿ ಹೀಗಿದ್ದಾಗ ತಂತ್ರಶಿಕ್ಷಣವು ಕುಂಠಿತವಾಗದೆ ಏನು? ನಿಜವಾದ ಪ್ರಗತಿ ತರುವುದೆಂತು?

ತಂತ್ರ ಶಿಕ್ಷಣ ಸಮಸ್ಯೆಗೆ ಸಂಬಂಧಿಸಿದುದು ಜನರ ಔದ್ಯೋಗೀಕೃತ ಜೀವನದ ಯೋಜನೆ ವ್ಯವಸ್ಥೆಯ ಸಮಸ್ಯೆಯು. ವ್ಯಾಪಾರ, ವ್ಯವಹಾರ, ಉದ್ಯೋಗಗಳ ಸಂಬಂಧೀಕರಣವಾಗದಿದ್ದರೆ ಬರಿಯ ತಂತ್ರಶಿಕ್ಷಣವು ಫಲಕಾರಿಯಾಗದು. ಈ ಬಗೆಯ ಸಂಬಂಧೀಕರಣದ ವ್ಯವಸ್ಥೆಯನ್ನು ಮಾಡುವುದು ಸರಕಾರದ ನಿಚ್ಚಳವಾದ ಕರ್ತವ್ಯವಾಗಿತ್ತು; ಆದರೆ ಸರಕಾರವು ಉದಾಸೀನವಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಸಿಕ್ಕುತ್ತಿದ್ದ ತಂತ್ರ ಶಿಕ್ಷಣವು ಕೂಡ ಫಲಕಾರಿಯಾಗದಂತಾಯಿತು. ಆದರೆ ಟಾಟಾನಂತಹ ವೈಯಕ್ತಿಕ ಮಹಾ ಉದ್ದಿಮೆಗಾರರ ಮೂಲಕ ತಂತ್ರಶಿಕ್ಷಣವು ತುಸು ತಲೆಯೆತ್ತಿದೆಯಾದರೂ ಅದೆಲ್ಲ ಕೇವಲ ಕೆಲ ವಿಭಾಗಗಳಲ್ಲಿ ಮಾತ್ರ.

ಈ ಕಾಲಾವಧಿಯಲ್ಲಿ ರೂಢಿಬದ್ಧವಾದ ಆ ಶಿಕ್ಷಣ ಕ್ರಮವೂ ಪ್ರಗತಿಹೊಂದುತ್ತಲಿದ್ದುದು ಕಂಡು ಬಂತು. ಹೆಚ್ಚು ಹೆಚ್ಚು ಮಾಧ್ಯಮಿಕ ಶಾಲೆಗಳು ಹಬ್ಬಿದವು; ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ವಿದ್ಯಾಪೀಠ ಸೇರಲು ತೊಡಗಿದರು. ಮಾಧ್ಯಮಿಕ ಶಾಲೆಯ ಶಿಕ್ಷಣ ಮುಗಿಸಿದವರಿಗೆ ಅದೊಂದೆ ಮಾರ್ಗವಿತ್ತು. ಹೊಸ ಹೊಸ ವಿದ್ಯಾಪೀಠಗಳು ಉದಯವಾಗಿ ಪ್ರತಿ ವರ್ಷ ಪದವೀಧರರ ಸಂಖ್ಯೆ ಹೆಚ್ಚತೊಡಗಿತು. ಹೀಗೆ ಪದವಿ ಪಡೆಯಬಂದವರಿಗೆ ಸರಕಾರದಲ್ಲಿ ನವಕರಿ, ಬೆಳೆಯುತ್ತಿದ್ದ ವ್ಯಾಪಾರಿಗರ ಸಂಸ್ಥೆಗಳಲ್ಲಿ ನವಕರಿ ಮೊನ್ನೆ ಮೊನ್ನಿನ ತನಕ ಸಿಕ್ಕುತ್ತಿದ್ದವು. ಕೆಲವರು ಸ್ವತಂತ್ರ ಉದ್ಯೋಗಗಳಲ್ಲಿ ಸೇರಿದರು. ಈ ಪದವೀಧರರಲ್ಲಿ ಬಹಳ ಜನರು ಹಳ್ಳಿಗಳಿಂದ ಬಂದವರಿದ್ದು ಶಿಕ್ಷಣದ ನಂತರ ಪಟ್ಟಣಗಳಲ್ಲಿ ಬೀಡಾರ ಮಾಡಿಕೊಂಡುದರಿಂದ ಸಮಾಜದಲ್ಲಿ ಮಧ್ಯಮ ವರ್ಗವೊಂದು ನಿರ್ಮಾಣವಾಗಿ ಬೆಳೆಯತೊಡಗಿತು. ಹಳ್ಳಿಗಳೆಲ್ಲ ಈ ರೀತಿಯಿಂದ ತಮ್ಮಲ್ಲಿಯ ಬೌದ್ಧಿಕ ದ್ರವ್ಯಗಳನ್ನು ಕಳೆದುಕೊಂಡುದರಿಂದ ಅವುಗಳ ಬಡತನ ಇನ್ನೂ ಹೆಚ್ಚಿತು.

ಪದವಿ ಪಾರಂಗತ ಅಭ್ಯಾಸದ ಸ್ಥಿತಿ

ಈ ಕಾಲವಧಿಯ ವಿದ್ಯಾಪಾಠಶಿಕ್ಷಣದ ವಿಶಿಷ್ಟ ಬೆಳವಣಿಗೆಯು ನಮ್ಮ ಮನ ಸೆಳೆವುದು. ೧೯೧೨ರ ತನಕ ಭಾರತದಲ್ಲಿ ಐದು ವಿದ್ಯಾಪೀಠಗಳು ಮಾತ್ರ ಇದ್ದುವು; ಅವು: ಕಲಕತ್ತಾ, ಮುಂಬಯಿ, ಮದ್ರಾಸ, ಪಂಜಾಬ, ಮತ್ತು ಅಲಾಹಾಬಾದ. ಇವೆಲ್ಲವೂ ಲಂಡನ ವಿದ್ಯಾಪೀಠದ ಮಾದರಿಯಲ್ಲಿ ಸಿದ್ಧವಾದವುಗಳು. ಇವೆಲ್ಲವೂ ಪರೀಕ್ಷಿಸುವ ವಿದ್ಯಾಪೀಠಗಳಾದುವು ಕಲಿಸುವುವು ಅಲ್ಲ. ಕಲಿಸುವ ಕೆಲಸವೆಲ್ಲ ವಿದ್ಯಾಪೀಠಕ್ಕೆ ಅಂಟಿಕೊಂಡ ಶಿಕ್ಷಣಾಲಯಗಳಲ್ಲಿ ನಡೆಯುತ್ತಿದ್ದು, ಅಭ್ಯಾಸ ಪತ್ರಿಕೆಯನ್ನು ಸಿದ್ಧಪಡಿಸುವುದು ಪರೀಕ್ಷೆಗಳನ್ನು ನಡೆಸುವದು ಅಷ್ಟೆ ವಿದ್ಯಾಪೀಠದ ಕಾರ್ಯ. ಪದವಿ ಪಾರಂಗತ ಅಭ್ಯಾಸವಾದರೂ ಉಚ್ಚ ಶಿಕ್ಷಣಾಲಯಗಳಲ್ಲಿಯೆ ನಡೆಯುತ್ತಿತ್ತು. ಈ ಶಿಕ್ಷಣಾಲಯಗಳಲ್ಲಿ ಒಳ್ಳೆಯ ರೀತಿಯ ಅಭ್ಯಾಸವಿರದ್ದರಿಂದ ಉಚ್ಚ ತರಗತಿಯ ಕೃತಿಗಳು ಬರುವ ಸಂಭವವಿದ್ದಿಲ್ಲ. ಆದುದರಿಂದ ವಿದ್ಯಾಪೀಠಗಳು ತಮ್ಮ ಕರ್ತವ್ಯಗಳಲ್ಲೊಂದಾದ ಜ್ಞಾನ ಪ್ರಗತಿಯನ್ನು ಸಾಧಿಸುವುದರಲ್ಲಿ ಅಷ್ಟು ಯಶಸ್ವಿಯಾಗಲಿಲ್ಲವೆಂದು ಹೇಳಬಹುದು.

ಈ ಮಟ್ಟಕ್ಕೆ ಬಂದಾಗ ದಿ. ಅಶುತೋಷ ಮುಕರ್ಜಿಯವರು ಕಲಕತ್ತಾ ವಿದ್ಯಾಪೀಠದಲ್ಲಿ ಮಹತ್ವದ ಸುಧಾರಣೆಗಳನ್ನು ತಂದರು. ಅವು ಉಳಿದವರಿಗೂ ಸ್ಫೂರ್ತಿದಾಯಕವಾದುವು. ಪದವಿ-ಪಾರಂಗತ ಅಭ್ಯಾಸದ ವಿಭಾಗವನ್ನು ಅನುಗೊಳಿಸಿ ಅದರ ಎಲ್ಲ ಅಭ್ಯಾಸವನ್ನು ವಿದ್ಯಾಪೀಠದಲ್ಲಿ ಕೇಂದ್ರೀಕರಿಸಿದ್ದರಿಂದ ವಿದ್ಯಾಪೀಠಗಳು ಉಚ್ಚ ತರಗತಿಯ ಕಲಿಸುವ ವಿದ್ಯಾಪೀಠಗಳಾಗಿ ಪರಿಣಮಿಸಿದುವು. ಸಂಸ್ಥಾಪಕನ ಆಕಾಂಕ್ಷೆಗಳನ್ನು ಆ ವಿಭಾಗವು ಪೂರೈಸಿದೆಯೆಂಬುದು ಈಗ ಹಳೆಯ ಮಾತು. ಜ್ಞಾನ ಕ್ಷೇತ್ರದ ವಿವಿಧ ಭಾಗಗಳಲ್ಲಿ ಉತ್ತಮ ಸಂಶೋಧಕರನ್ನು ಅದು ಸರಿಪಡಿಸಿದುದರಿಂದ ಭಾರತೀಯರು ಸಂಶೋಧನ ಕಾರ್ಯದಲ್ಲಿ ಅಸಮರ್ಥರು ಎಂಬ ಅಪವಾದವನ್ನು ಅಲ್ಲಗಳೆದಿದೆ.

ಹಳೆಯ ಇಂಗ್ಲಿಶ್ ವಿದ್ಯಾಪೀಠಗಳ ಮಾದರಿಯನ್ನನುಸರಿಸಿದ ಏಕತ್ರ ವಸತಿ ವಿದ್ಯಾಪೀಠಗಳು ಹಬ್ಬಿಬಂದುದು ವಿದ್ಯಾಪೀಠ ಶಿಕ್ಷಣ ಕ್ಷೇತ್ರದಲ್ಲಿ ಆದ ಮತ್ತೊಂದು ಮಹತ್ವದ ಬೆಳವಣಿಗೆ. ಬನಾರಸದ ಹಿಂದು ವಿದ್ಯಾಪೀಠವು ಈ ಮಾದರಿಯ ಮೊದಲನೆಯದು ಆ ಮೇಲೆ ಅಲೀಗಡ ವಿದ್ಯಾಪೀಠವೊಂದು ಬಂತು. ಆದರೆ ಬಡದೇಶವಾದ ಭಾರತದಲ್ಲಿ ಈ ಮಾದರಿಯ ವಿದ್ಯಾಪೀಠಗಳು ಹೆಚ್ಚುವುದರಿಂದ ಉಚ್ಚ ಶಿಕ್ಷಣದ ವೆಚ್ಚವು ತೀರ ಹೆಚ್ಚುವದೆಂಬುದರ ಅರಿವು ಬೇಗನೆ ಬಂತು. ಇತ್ತೀಚೆಗೆ ಸ್ಥಾಪಿತವಾದ ವಿದ್ಯಾಪೀಠಗಳು ಕಲಿಸುವ ಪರೀಕ್ಷಿಸುವ ಕಾರ್ಯಗಳನ್ನು ಹೊಂದಿಸಿಕೊಂಡುವು. ಸರ್ ಮಾಯಕೇಲ ಸಾಡ್ಲರ, ಇವರು ಅಧ್ಯಕ್ಷರಾದ ಕಲಕತ್ತಾ ವಿದ್ಯಾಪೀಠ ವಿಚಾರಣಾ ಸಮಿತಿಯು ೧೯೧೭-೧೯ ರಲ್ಲಿ ಮಾಧ್ಯಮಿಕ ಉಚ್ಚ ಶಿಕ್ಷಣದ ಸುಧಾರಣಾ ಸಮಸ್ಯೆಗಳ ಬಗ್ಗೆ ವಿಚಾರಿಸಿತು ಅದರ ಸೂಚನೆಗಳು ಭಾರತದಲ್ಲಿಯ ವಿದ್ಯಾಪೀಠ ಶಿಕ್ಷಣದ ಪ್ರಸಾರಕ್ಕೆ ಬಲವಾದ ಪುಷ್ಟಿ ಕೊಟ್ಟವು. ಅಲ್ಲದೆ ಬಂಗಾಲದಲ್ಲಿಯ ಟಾಗೋರರ ಶಾಂತಿನಿಕೇತನದ ಆಂತರ್‌ರಾಷ್ಟ್ರೀಯ ವಿದ್ಯಾಪೀಠವು ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಪ್ರಯೋಗವು. ಎಲ್ಲ ಕೃತ್ರಿಮ ಪ್ರಭಾವಗಳನ್ನು ಬದಿಗಿರಿಸಿ ಭಾರತೀಯ ಮನದ ಬುದ್ಧಿಮತ್ತೆಯ ಸರಿಯಾದ ಕಲ್ಪನೆ ಕೊಡಲು ಪ್ರಯತ್ನಿಸಿದೆ. ಮತ್ತು ಪೌರ್ವಾತ್ಯ ಪಾಶ್ಚಾತ್ಯ ಸಂಸ್ಕೃತಿಗಳ ಉತ್ತಮ ದ್ರವ್ಯಗಳು ಒಂದುಗೂಡುವಂತೆ ಮಾಡಿದೆ.

ಇಂಗ್ಲಿಶದ ಬದಲು ಭಾರತೀಯ ಭಾಷೆಗಳು

ಈ ಕಾಲಾವಧಿಯಲ್ಲಿ ನಮ್ಮೆಲ್ಲರ ಮನಸೆಳೆಯುವ ಮತ್ತೊಂದು ಮಹತ್ವದ ಸುಧಾರಣೆಯು ಹೆಜ್ಜೆ ಮುಂದಿಟ್ಟಿದೆ. ಭಾರತೀಯ ಭಾಷೆಗಳ ಬೆಳವಣೆಯು ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಅವು ಶಿಕ್ಷಣದ ಮಾಧ್ಯಮವಾದುದು. ಅನೇಕ ವರುಷಗಳಿಂದಲೂ ಈ ಬದಲಾವಣೆಯನ್ನು ಸೂಚಿಸುತ್ತ ಬಂದಿದ್ದ ಡಾ. ಟಾಗೋರ, ಸರ್ ಅಕಬರ ಹೈದರಿ, ಸರ್ ಆಶುತೋಷ ಮುಕರ್ಜಿ ಮೊದಲಾದವರ ಪ್ರಯತ್ನಗಳೆ ಈ ಸುಧಾರಣೆಗೆ ಕಾರಣ. ಆದರೆ ತಮ್ಮ ಕಲ್ಪನೆಗಳನ್ನು ಕಾರ್ಯರೂಪದಲ್ಲಿ ತರಲು ಬೇಕಾದ ಸ್ಥಾನಮಾನ ಬರುವ ತನಕ ಯಾವುದೂ ಸಾಧ್ಯವಾಗಿದ್ದಿಲ್ಲ. ೨೩ ವರುಷಗಳ ಹಿಂದೆ ಹಿಂದಿ ಮತ್ತು ಬಂಗಾಲಿ ಭಾಷೆಗಳನ್ನು ಕಲಕತ್ತಾ ವಿದ್ಯಾಪೀಠದ ಅಭ್ಯಾಸಪತ್ರಿಕೆಯಲ್ಲಿ ಸೇರಿಸಲಾಯಿತು. ೧೯೩೪ ರಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಬಂಗಾಲಿಯು ಶಿಕ್ಷಣದ ಮಾಧ್ಯಮ ಮಾಡಲ್ಪಟ್ಟಿತು. ಬನಾರಸ ಹಿಂದು ವಿದ್ಯಾಪೀಠವೂ ಅದರ ಸಂಸ್ಥಾಪಕರಾದ ಪಂಡಿತ ಮದನಮೋಹನ ಮಾಲವಿಯರ ಸ್ಫೂರ್ತಿದಾಯಕ ನೇತೃತ್ವದಲ್ಲಿ ಮಾತೃಭಾಷೆಯನ್ನು ಶಿಕ್ಷಣದ ಮಾಧ್ಯಮವೆಂದು ಒಪ್ಪಿಕೊಂಡಿತು. ದೇಶದ ಉಳಿದ ಭಾಗಗಳಲ್ಲಿಯೂ ಜನತೆಯ ಭಾಷೆಯ ಶಿಕ್ಷಣ ಪದ್ಧತಿಯು ತನ್ನ ನಿಜವಾದ ಸ್ಥಾನವನ್ನು ಸಾವಕಾಶವಾಗಿ ಪಡೆಯುತ್ತಲಿದೆ.

ದಿ. ಸರ್ ಅಕಬರ ಹೈದರಿಯವರ ಸ್ಫೂರ್ತಿದಾಯಕ ಸ್ವಭಾವದ ಮೂಲಕ ಹೈದರಾಬಾದದಲ್ಲಿ ಉರ್ದುವನ್ನು ಪಾಲಿಸಿ ಬೆಳೆಸುವುದರಲ್ಲಿ ಹೆಚ್ಚು ಪ್ರಗತಿಯಾಗಿದೆ; ಮತ್ತು ಅವರ ನಿಧನದಿಂದ ಭಾರತದ ಪ್ರಖ್ಯಾತ ಕುವರನೊಬ್ಬ ಕಣ್ಮರೆಯಾದಂತಾಯಿತು. ಮಾಡಬೇಕಾದುದು ಇನ್ನು ಬಹಳಿದೆ. ಹಲವೆಡೆಯಲ್ಲಿ ಇನ್ನು ಇಂಗ್ಲಿಶು ಶಿಕ್ಷಣದ ಮಾಧ್ಯಮವಿದೆ. ಭಾರತದ ಎಲ್ಲೆಡೆಯಲ್ಲಿಯೂ ಮ್ಯಾಟ್ರಿಕ್ಯುಲೇಶನ ನಂತರದ ಶಿಕ್ಷಣವೆಲ್ಲ ಇಂಗ್ಲಿಶಿನಲ್ಲಿಯೆ ನಡೆಯುವುದು. ಅಪೂರ್ಣವಾಗಿ ತಿಳಿಯುತ್ತಿರುವ ಪರಕೀಯ ಭಾಷೆಯಲ್ಲಿ ಶಾಲೆಯ ತರುಣ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆಯುವ ವಿಚಿತ್ರ ನೋಟವು ಈ ಜಗತ್ತಿನಲ್ಲಿ ಭಾರತದಲ್ಲಿ ಮಾತ್ರವೆ ಕಾಂಬುದು.

ಸುಧಾರಣೆಗಳ ಸೂಚನೆ

ಶಾಲೆ ಕಾಲೇಜುಗಳಲ್ಲಿ ಕಲಿತವರನ್ನು ಸಮಾಜದಲ್ಲಿ ಅಟ್ಟಿಸಿಕೊಳ್ಳುವ ಸಮಸ್ಯೆಯು ಈಗ ಸುಮಾರು ೨೦ ವರುಷಗಳ ಹಿಂದೆ ಇರಲಿಲ್ಲವೆಂಬುದನ್ನು ತೋರಿಸಲಾಗಿದೆ ಆಗಾಗ ಅಲ್ಲಲ್ಲಿ ವೃತ್ತಿಯಲ್ಲಿ ಅಸಮ ಹೊಂದಿಕೆ ಕಂಡುಬರುತಿದ್ದಿತಾದರೂ ಮುಂದಿನ ಕಾಲದಲ್ಲಿಯಷ್ಟು ಘನವಾಗಿರಲಿಲ್ಲ. ಪದವೀಧರರು ಹೆಚ್ಚುತ್ತ ನಡೆದಂತೆ ಪರಿಸ್ಥಿತಿಯು ಗಂಭೀರವಾಗುತ್ತ ನಡೆಯಿತು. ಶಿಕ್ಷಣ ಮುಗಿಸಿಕೊಂಡು ಬಂದವರಿಗೆ ಯೋಗ್ಯವಾದ ನೌಕರಿ ಸಿಗದಂತಹ ಸ್ಥಿತಿ ಹೆಚ್ಚಿದಂತೆ ಸಮಸ್ಯೆಯು ಜಟಿಲವಾಗತೊಡಗಿ, ಸಾಮಾಜಿಕ ಆರ್ಥಿಕ ತೂಕ ತಪ್ಪತೊಡಗಿತು. ವಾಡಿಕೆಯಂತೆ ಶಿಕ್ಷಣ ಪದ್ಧತಿಯು ಟೀಕೆಗೆ ಗುರಿಯಾಗತೊಡಗಿತು. ನಮ್ಮ ಶಿಕ್ಷಣ ಪದ್ಧತಿಯು ಇದಕ್ಕೆಲ್ಲ ಮೂಲವಾಗಿದೆಯೆಂದೂ ಅದನ್ನು ತಳಸೋಸಬೇಕೆಂದೂ ಸೂಚಿತವಾಯಿತು.

ಸಾಮಾನ್ಯ ಶಿಕ್ಷಣದ ಬೇರೆ ಬೇರೆ ಮಟ್ಟಗಳ ಪುನರ್ವ್ಯವಸ್ಥೆಯಾಗಬೇಕೆಂಬುದೆ ಸುಧಾರಣೆಯ ಮೂಲ ಸೂಚನೆ. ಮಾಧ್ಯಮಿಕ ಮಟ್ಟದಲ್ಲಿ ಅಭ್ಯಾಸಕ್ರಮದಲ್ಲಿ ವೈವಿಧ್ಯವಿರಬೇಕು : ಸಾಮಾನ್ಯ ಶಿಕ್ಷಣ, ವೃತ್ತಿಶಿಕ್ಷಣ, ವೃತ್ತಿಪೂರ್ವದ ಶಿಕ್ಷಣ, ಎಂದು ವಿಭಜಿತವಾಗಿರಬೇಕು. ಇದು ಮೇಲಿನ ಮೆಟ್ಟಲುಗಳಲ್ಲಿ ನಡೆಯುವ ಅಭ್ಯಾಸದ ಒತ್ತಡವನ್ನು ಕಡಿಮೆ ಮಾಡುವದು. ನಮ್ಮ ಶಿಕ್ಷಣ ಪದ್ಧತಿಯ ಸಂಕುಚಿತ ಸಾಹಿತ್ಯದ ಸ್ವರೂಪದ ಬೇನೆಯನ್ನು ಗುಣಪಡಿಸುವುದು ಮತ್ತು ಜೀವನದ ಅಗತ್ಯ ವಿಷಯಗಳಿಗೆ ಹೆಚ್ಚು ಸಮೀಪದ ಸಂಬಂಧ ಕಲ್ಪಿಸುವುದು. ಮೇಲಿನ ಯೋಜನೆಯು ೧೯೩೪ ರಲ್ಲಿ ಸೇರಿದ ಭಾರತೀಯ ವಿದ್ಯಾಪೀಠ ಸಮ್ಮೇಲನದಲ್ಲಿ ಸೂಚಿತವಾಯಿತು. ಮುಂದೆ ಕೆಲ ಕಾಲದ ನಂತರ ಸರಕಾರದ ಕೇಂದ್ರ ಶಿಕ್ಷಣ ಸಲಹೆಮಂಡಲದವರು ಒಪ್ಪಿಕೊಂಡರು. ಆದರೆ ಇದುವರೆಗೆ ಎಲ್ಲಿಯೂ ಕಾರ್ಯರೂಪದಲ್ಲಿ ಬಂದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಆದ ಯಾವದೇ ಸುಧಾರಣೆಯು ತನ್ನಷ್ಟಕ್ಕೆ ನಿರುದ್ಯೋಗ ಸಮಸ್ಯೆಯನ್ನು ಬಿಡಿಸದು. ಅದು ಸರಕಾರದ ಮೇಲಿರುವ ಹೊಣೆ. ಆರ್ಥಿಕ-ಔದ್ಯೋಗಿಕ ಪುನರುಜ್ಜೀವನದ ಯೋಜನೆಯುಳ್ಳ ರಾಷ್ಟ್ರೀಯ ಧೋರಣೆಗೆ ಶಿಕ್ಷಣದ ಪದ್ಧತಿಯು ಸರಿಯಾಗಿ ಸಂಬಂಧೀಕೃತವಾಗಬೇಕು.

ಸುಧಾರಣೆಯ ಮತ್ತೊಂದು ಯೋಜನೆಯು ಇನ್ನೊಂದು ಕಡೆಯಿಂದ ಬಂತು. ೧೯೩೭ ರಲ್ಲಿ ಒಂದು ಶಿಕ್ಷಣ ಸಮ್ಮೇಲನದ ಅಧ್ಯಕ್ಷಪೀಠದಿಂದ ಮಹಾತ್ಮಾ ಗಾಂಧಿಯವರು ಒಂದು ಯೋಜನೆಯ ವಿಚಾರವನ್ನು ಮಂಡಿಸಿದರು. ಅದೆ ಮುಂದೆ ಶಿಕ್ಷಣ ತಜ್ಞರ ಸಮಿತಿಯೊಂದರಿಂದ ವಿಶದೀಕರಿಸಲ್ಪಟ್ಟು ಮೂಲಶಿಕ್ಷಣದ ವರ್ಧಾಯೋಜನೆಯೆಂಬ ಹೆಸರು ಪಡೆಯಿತು. ಏಳನೆಯ ವಯಸ್ಸಿಗೆ ಪ್ರಾರಂಭವಾಗುವ ಏಳು ವರುಷದ ಶಿಕ್ಷಣದ ಅಭ್ಯಾಸಕ್ರಮವನ್ನು ಅದು ಮುಂದೆಮಾಡಿತು. ಶಿಕ್ಷಣವು ಮಾತೃಭಾಷೆಯ ಮುಖಾಂತರವೆ. ಶಕ್ಯವಿದ್ದ ಮಟ್ಟಿಗೆ ಒಂದು ಉತ್ಪಾದನ ಶಕ್ತಿಯುಳ್ಳ ವೃತ್ತಿಯನ್ನು ಕೇಂದ್ರ ಮಾಡಿಕೊಂಡು ಪಾಠ ಹೇಳಲಾಗುವದು. ಮತ್ತು ಅಭ್ಯಾಸಕ್ರಮದಲ್ಲಿ ಇಂಗ್ಲಿಶಕ್ಕೆ ಸ್ಥಾನವೆ ಇಲ್ಲ. ಆದರೆ ಮೇಲಿನ ವರ್ಗಗಳಲ್ಲಿ ರಾಷ್ಟ್ರೀಯ ಭಾಷೆಯೆಂದು ಹಿಂದುಸ್ತಾನಿಯನ್ನು ಒತ್ತಾಯವಾಗಿ ಕಲಿಸಲಾಗುತ್ತಿದೆ. ಸಾಮಾಜಿಕ ಸಾಹಕಾರಿಕ ಶಿಕ್ಷಣದ ಮೇಲೆ ಆ ಯೋಜನೆಯು ಜೋರುಕೊಡುತ್ತದೆ. ಒಟ್ಟಿನಲ್ಲಿ ಅದು, ಅಮೇರಿಕೆಯ ಪ್ರಸಿದ್ಧ ಶಿಕ್ಷಣಜ್ಞರಾದ ಡ್ಯೂಯಿ, ಕಿಲ್‌ಪ್ಯಾಟ್ರಿಕ್ ಮೊದಲಾದವರು ಪ್ರಚುರಗೊಳಿಸಿದ ಯೋಜನಾ ಪದ್ಧತಿ (Project method) ಯಿಂದ ವಿಶೇಷ ಬೇರೆಯಾಗಿಲ್ಲ. ಕೆಲವು ಮಟ್ಟಗಳಲ್ಲಿ ವರ್ಧಾಯೋಜನೆಯ ಅಭ್ಯಾಸ ಪತ್ರಿಕೆಯು ಉಳಿದ ಶಾಲೆಗಳಲ್ಲಿ ರೂಢಿಯಲ್ಲಿದ್ದುದರಕಿಂತಲೂ ಸುಧಾರಿಸಿದ ಸ್ವರೂಪವೆಂದು ಹೇಳಬಹುದು.

ವರ್ಧಾಯೋಜನೆಯ ತತ್ವಗಳನ್ನು ಸರಕಾರದ ಕೇಂದ್ರ ಸಲಹೆ ಮಂಡಲವು ಒಪ್ಪಿಕೊಂಡಿತು. ಕಾಂಗ್ರೆಸು ಮಂತ್ರಿಮಂಡಲ ರಚಿಸಿದಾಗ ಭಾರತದ ಕೆಲ ಪ್ರಾಂತಗಳಲ್ಲಿ ಕಾರ್ಯರೂಪದಲ್ಲಿ ತರಲಟ್ಟಿತು. ಆದರೆ ಕಾಂಗ್ರೆಸ ಮಂತ್ರಿಮಂಡಲಗಳು ಬೇಗನೆ ರಾಜಿನಾಮೆ ಕೊಟ್ಟದ್ದರಿಂದ ಅವರು ಪ್ರಾರಂಭಿಸಿದ ಮೂಲ ಶಿಕ್ಷಣದ ಪ್ರಯೋಗವು ಹಾಗೆಯೆ ಉಳಿದುದರಿಂದ ಪರಿಣಾಮದ ಬಗ್ಗೆ ಹೇಳುವಂತಹದೇನೂ ಬರಲಿಲ್ಲ.

ವಿದ್ಯಾರ್ಥಿಗಳ ಸಂಖ್ಯೆ

೧,೫೦೦,೦೦೦ ಚದುರ ಮೈಲುಗಳಲ್ಲಿ ವಿಸ್ತೃತವಾದ ೪೦ ಕೋಟಿ ಜನತೆಗಾಗಿ ಭಾರತದಲ್ಲಿ ಹದಿನೆಂಟು ವಿದ್ಯಾಪೀಠಗಳಿದ್ದು ಅವುಗಳಲ್ಲಿ ೧೨೦,೦೦೦ ವಿದ್ಯಾರ್ಥಿಗಳಿದ್ದಾರೆ. ಇವುಗಳಲ್ಲಿಯ ಮೂರು ವಿದ್ಯಾಪೀಠಗಳು ದೇಶೀಯ ಸಂಸ್ಥಾನಗಳಲ್ಲಿವೆ. ವಿದ್ಯಾಪೀಠಗಳೆಲ್ಲವೂ ಒಂದೆ ಮಾದರಿಯವಿಲ್ಲ. ಕೆಲವು ಕಲಿಸುವ ಮಾದರಿಯವು; ಕೆಲವು ಆಡಳಿತಕ್ಕೆ ಸೇರಿಸಿಕೊಳ್ಳುವ ಮಾದರಿಯವು; ಕೆಲವು ಈ ಎರಡೂ ಕಾರ್ಯವನ್ನು ಕೂಡಿ ಮಾಡುವಂತಹವು. ಕೆಲವು ನೇರವಾಗಿ ಕಲಿಸುವ ಕಾರ್ಯ ಕೈಕೊಂಡರೆ ಕೆಲವು ಕಲಿಸುವ ಹೊಣೆಯನ್ನು ತಮ್ಮ ಆಡಳಿತವನ್ನು ಒಪ್ಪಿಕೊಂಡ ಶಿಕ್ಷಣಾಲಯಕ್ಕೆ ಬಿಟ್ಟುಕೊಟ್ಟಿರುತ್ತವೆ.

ಉಚ್ಚ ಶಿಕ್ಷಣಾಲಯಗಳ ಸಂಖ್ಯೆ ಸುಮಾರು ೩೦೦ ಇದೆ. ಇವುಗಳೆಲ್ಲವೂ ಹೆಚ್ಚಾಗಿ ಕಲಾಶಿಕ್ಷಣಾಲಯಗಳೆ. ವೃತ್ತಿ, ಕಾನೂನು, ವೈದ್ಯಕ, ಶೈಕ್ಷಣಿಕ, ಕೃಷಿ, ವ್ಯಾಪಾರ, ಸ್ಥಾಪತ್ಯ, ಮತ್ತು ತಂತ್ರಶಿಕ್ಷಣಾಲಯಗಳ ಸಂಖ್ಯೆ ಸುಮಾರು ೪೦. ೧೯೩೮-೩೯ರಲ್ಲಿ ಬೇರೆ ಬೇರೆ ವಿದ್ಯಾ ವಿಭಾಗದ ಪದವೀಧರರ ಸಂಖ್ಯೆ ಹೀಗಿದೆ:- ೧೫,೫೭೬ ಕಲಾ ವಿಭಾಗ, ೨,೫೯೨ ಕಾನೂನು, ೭೫೬ ವೈದ್ಯಕ, ೩೨೬ ಸ್ಥಾಪತ್ಯ, ೧,೮೯೩ ಶೈಕ್ಷಣಿಕ, ೭೧೫ ವ್ಯಾಪಾರ ಮತ್ತು ೨೫೭ ಕೃಷಿ ವಿಭಾಗ.

ದೇಶದಲ್ಲಿ ಸುಮಾರು ೩೫೦೦ ಮಾಧ್ಯಮಿಕ ಶಾಲೆಗಳು ಇವೆ. ಅಲ್ಲಿ ಹೆಣ್ಣು—ಗಂಡು ಹುಡುಗರ ಸಂಖ್ಯೆ ೧,೧೭೪,೦೦೦ ಅವುಗಳಲ್ಲಿ ಹೆಣ್ಣು ಹುಡುಗರ ಸಂಖ್ಯೆ ೧,೫೫,೦೦೦ ಮಾತ್ರ. ಹೆಣ್ಣು-ಗಂಡು ಹುಡುಗರಲ್ಲಿಯ ಶೈಕ್ಷಣಿಕ ಬೆಳವಣಿಗೆ ಅಸಮವಾಗಿದ್ದುದರ ದ್ಯೋತಕವಿದು.

ಮಾಧ್ಯಮಿಕ ಮಟ್ಟದಲ್ಲಿ ವೃತ್ತಿಶಿಕ್ಷಣ ಕೊಡುವ ಶಾಲೆಗಳು ತೀರ ಕಡಿಮೆ. ಅಲ್ಲಿ ಮಾಧ್ಯಮಿಕ ಶಾಲೆಗಳನ್ನು ಸೇರುವ ವಿದ್ಯಾರ್ಥಿಗಳಲ್ಲಿಯ ತೀರ ಕಡಮೆ ವಿದ್ಯಾರ್ಥಿಗಳು ಕಲಿಯಲು ಅನುವಿವೆ. ಇಡಿ ಬ್ರಿಟಿಶ್ ಭಾರತದಲ್ಲಿ ೧೭ ಕಲಾಶಾಲೆಗಳಿವೆ; ೨೯ ವೈದ್ಯಕ ಶಾಲೆಗಳಿವೆ; ಹನ್ನೆರಡಕ್ಕೂ ಕಡಮೆ ಸ್ಥಾಪತ್ಯ ಶಾಸ್ತ್ರದ ಶಾಲೆಗಳು; ೨೦ರಷ್ಟು ಇಲ್ಲಿ ಕೃಷಿಶಾಲೆಗಳು. ಎಲ್ಲ ಮಾದರಿಯ ತಂತ್ರದ—ಔದ್ಯೋಗಿಕ ಶಾಲೆಗಳನ್ನು ಒಟ್ಟು ಸೇರಿಸಿದರೂ ೧೦೦೦ಕ್ಕೆ ಮಿಕ್ಕುವುದಿಲ್ಲ.

ಭಾರತದಲ್ಲಿ ಇನ್ನೊಂದು ಮಾದರಿಯ ಶಾಲೆಯಿದೆ; ಅದೆ ಮಧ್ಯಮ ಶಾಲೆ (Middle School) ಮಾಧ್ಯಮಿಕ ಶಾಲೆಗಳ ಸಂಖ್ಯೆಯಲ್ಲಿ ಅವುಗಳ ಸಮಾವೇಶವಾಗಿರುವುದು. ನಿಜವಾಗಿ ನೋಡಿದರೆ ಅವು ಮುಂಜಗ್ಗಿದ ಪ್ರಾಥಮಿಕ ಶಾಲೆಗಳೆ. ಬ್ರಿಟಿಶ ಭಾರತದಲ್ಲಿ-ಇಂತಹ ಮಧ್ಯಮ ಶಾಲೆಗಳ ಸಂಖ್ಯೆ ಸುಮಾರು ಹತ್ತು ಸಾವಿರ. ಅವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧,೩೩೦,೦೦೦. ಪ್ರಾಥಮಿಕ ಶಾಲೆಗಳಲ್ಲಿ ಅಭ್ಯಾಸ ಮುಗಿಸಿ ಬಡತನದ ಮೂಲಕವೊ ಏನೊ ಶಾಲೆ ಬಿಡುವ ಇಲ್ಲವೆ ಹೆಚ್ಚು ಹಣದ ದೊಡ್ಡ ಶಾಲೆಗಳನ್ನು ಸೇರಲಾಗದ ಪ್ರಸಂಗಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಅಭ್ಯಾಸಕ್ರಮವಿರುವುದು ಮಧ್ಯಮಶಾಲೆಗಳಲ್ಲಿ. ಪ್ರಾಥಮಿಕದ ನಂತರ ಒಂದೆರಡು ವರ್ಷ ನಡೆವುದು ಅಭ್ಯಾಸ.

(ಮುಂದುವರಿಯುವದು)

ಸಂಪಾದಕೀಯ

ಟೀಕೆ-ಟಿಪ್ಪಣೆಗಳು

ಮುಂಬಯಿ ಮಂತ್ರಿಮಂಡಳ

ಮುಂಬಯಿ ಶಾಸನ ಸಭೆಯಲ್ಲಿ ಬಹುಮತ ಪಡೆದ ಕಾಂಗ್ರೆಸ್ ಪಕ್ಷದ ಧುರೀಣರಾದ ಶ್ರೀ ಬಾಳಾಸಾಹೇಬ ಖೇರರು ಗವರ್ನರರ ಇಚ್ಛೆಯ ಮೇರೆಗೆ ತಮ್ಮ ಮಂತ್ರಿಮಂಡಳವನ್ನು ರಚಿಸಿಕೊಂಡಿರುವರು. ಆ ಮಂತ್ರಿಗಳ ಮತ್ತು ಅವರಿಗೆ ಸಹಾಯಕರಾಗಿರುವ ಪಾರ್ಲಿಮೆಂಟರಿ ಸೆಕ್ರೆಟರಿಗಳ ಹೆಸರುಗಳನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದ್ದೇವೆ. ೧೯೩೯ ನೆಯ ಇಸ್ವಿಯ ನವಂಬರದಲ್ಲಿ ಕಾಂಗ್ರೆಸ್ ಮಂತ್ರಿಮಂಡಳವು ರಾಜೀನಾಮೆ ಕೊಟ್ಟಂದಿನಿಂದ ಪ್ರಾಂತದಲ್ಲಿ ೯೩ನೆಯ ಕಲಮಿನನ್ವಯ ಗವರ್ನರರ ಆಡಳಿತೆ ನಡೆದಿದ್ದಿತು. ಇದೇ ಎಪ್ರಿಲ ೧ ನೆಯ ತಾರೀಕಿಗೆ ಖೇರ ಮಂತ್ರಿ ಮಂಡಳವು ಅಧಿಕಾರ ವಹಿಸಿಕೊಂಡದ್ದರಿಂದ ೯೩ ನೇ ಕಲಮಿನನ್ವಯ ನಡೆದಿದ್ದ ಆಡಳಿತೆ ಕೊನೆಗಂಡಿತು. ಹಿಂದಿನ ಮಂತ್ರಿಮಂಡಳದಲ್ಲಿ ಆರು ಜನ ಮಂತ್ರಿಗಳಿದ್ದರು. ಆದರೆ ಈಗ ಮಂತ್ರಿಗಳ ಖಾತೆ ಬಹಳ ಹೆಚ್ಚಿದ್ದರಿಂದ ಈಗಾಗಲೆ ೧೦ ಮಂತ್ರಿಗಳ ಹೆಸರು ಪ್ರಸಿದ್ಧವಾಗಿದ್ದು ಇನ್ನೂ ಓರ್ವನನ್ನು ಇಲ್ಲವೆ ಇಬ್ಬರನ್ನು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳಲಾಗುವದೆಂದು ತಿಳಿಯುತ್ತದೆ. ಈ ಸ್ಥಳಗಳು ಮುಸಲ್ಮಾನರಿಗಾಗಿ ಕಾದಿಡಲಾಗಿವೆ. ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿನ ಪರವಾಗಿ ಮುಸಲ್ಮಾನ ದ್ವಾರೂ ಆರಿಸಿಬಾರದ್ದರಿಂದ ವಿಧಿಮಂಡಳದಲ್ಲಿಯ ಡಾ. ಹಮೀದರನ್ನಾಗಲಿ ಬೇರೆ ಯಾರನ್ನಾದರೂ ತೆಗೆದುಕೊಳ್ಳಬಹುದೆಂದು ತೋರುತ್ತದೆ. ಮುಂಬಯಿಗೆ ೩, ಗುಜರಾಥ ೩, ಮಹಾರಾಷ್ಟ್ರ ೩ ಮತ್ತು ಕರ್ನಾಟಕ ೧ ಹೀಗೆ ಸ್ಥಳಗಳು ದೊರೆತಿವೆ. ಹರಿಜನರೊಬ್ಬರನ್ನು ಮಂತ್ರಿಮಂಡಳದಲ್ಲಿ ಸೇರಿಸಿಕೊಂಡಿದೆ. ಒಬ್ಬರನ್ನು ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನಾಗಿ ಆರಿಸಲಾಗಿದೆ. ಕರ್ನಾಟಕಕ್ಕೆ ಇನ್ನೊಂದು ಮಂತ್ರಿ ಸ್ಥಳವು ಬೇಕಿತ್ತೆಂದು ಅಪೇಕ್ಷಿಸಬಹುದಾಗಿದೆ. ಅದರಂತೆ ವಿಜಾಪೂರ ಜಿಲ್ಹೆಗೂ ಪಾರ್ಲಿಮೆಂಟರಿ ಸೆಕ್ರೆಟರಿಯ ಸ್ಥಳವೊಂದು ಬೇಕಿದ್ದಿತು. ಆದರೆ ಒಟ್ಟಾರೆ ನೋಡಿದರೆ ಸದ್ಯದ ಮಂತ್ರಿಮಂಡಳವು ಪ್ರಾತಿನಿಧಿಕ ಮತ್ತು ಸಮರ್ಥ ಜನರಿಂದ ಕೂಡಿದ್ದಾಗಿದೆಂದು ನಿರ್ವಿವಾದ ಹೇಳಬಹುದು. ೧೭೫ ಸ್ಥಳಗಳಲ್ಲಿ ೧೨೫ ಸ್ಥಳಗಳನ್ನು ಪಡೆದ ಕಾಂಗ್ರೆಸು ಇಂತು ಮತ್ತೆ ಅಧಿಕಾರವನ್ನು ವಹಿಸಿಕೊಂಡದ್ದರಿಂದ ಪ್ರಾಂತದ ಜನರೆಲ್ಲ ಸಂತುಷ್ಟರಾಗಿರುವರು. ಕಾಂಗ್ರೆಸ್ ಮಂತ್ರಿಗಳ ಆಳಿಕೆಯಲ್ಲಿ ಪ್ರಾಂತದ ಸಾರ್ವಾಂಗಿಕ ಉನ್ನತಿಯಾಗುವದೆಂಬಲ್ಲಿ ಸಂದೇಹವಿಲ್ಲ. ಜನಸೇವೆಗಾಗಿ ಅಧಿಕಾರ ವಹಿಸಿದ ಕಾಂಗ್ರೆಸ ಮಂತ್ರಿಗಳನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಜನತೆಗೆ ಆಶ್ವಾಸನ

ಶ್ರೀ ಬಾಳಾಸಾಹೇಬ ಖೇರರವರು ತಮ್ಮ ಮಂತ್ರಿಮಂಡಳ ರಚಿಸಿಕೊಂಡ ಕೂಡಲೆ ಜನತೆಯನ್ನುದ್ದೇಶಿಸಿ ಈ ರೀತಿ ಹೇಳಿರುವರು. ಆರು ವರ್ಷಗಳ ನಂತರ ಅಧಿಕಾರವಹಿಸಿಕೊಳ್ಳುತ್ತಿರುವ ನಮ್ಮಿಂದ ಕೂಡಲೆ ಎಲ್ಲ ಬಗೆಯ ಪರಿಹಾರ ಸಿಕ್ಕಬೇಕೆಂದು ಜನ ಅಪೇಕ್ಷಿಸುತ್ತಾರೆ. ಅವರ ಇಚ್ಛೆಯನ್ನು ನಾನು ನನ್ನ ಸಹಕಾರಿಗಳ ಸಹಾಯದಿಂದ ಆದಷ್ಟು ಬೇಗ ಪೂರೈಸುವೆನೆಂದು ಆಶ್ವಾಸನ ಕೊಡುತ್ತೇನೆಂದು ಹೇಳಿರುವರು. ಸದ್ಯದ ಪರಿಸ್ಥಿತಿಯಲ್ಲಿ ಪ್ರಾಂತಕ್ಕೆ ಮುಖ್ಯವಾಗಿ ಬೇಕಾದುದು ಆಹಾರ ಮತ್ತು ಬಟ್ಟೆ. ಇವೆರಡೂ ಪ್ರಶ್ನೆಗಳನ್ನು ತೆಗೆದುಕೊಳ್ಳುವೆವಲ್ಲದೆ ಆಡಳಿತೆಯಲ್ಲಿ ಹಬ್ಬಿದ ಲಂಚಗುಳಿತನವನ್ನು ಹೋಗಲಾಡಿಸಲು ಪ್ರಯತ್ನಿಸುವುದಾಗಿ ಆಶ್ವಾಸಿಸಿರುವರು. ಹೊಲಗಳಲ್ಲಿ ಸದ್ಯಕ್ಕೆ ಬರುವ ಧಾನ್ಯದ ಪ್ರಮಾಣವನ್ನು ಮುಮ್ಮಡಿ ಮಾಡುವಂತೆ ಪಡಬಿದ್ದ ಭೂಮಿಗಳನ್ನೆಲ್ಲ ಸಾಗುವಳಿ ಮಾಡುವಂತೆ ಧೋರಣ ವಹಿಸಿಕೊಳ್ಳುವುದಾಗಿಯೂ ಆಶ್ವಾಸಿಸಿರುವರು. ಇದಕ್ಕಾಗಿ ನೀರಾವರಿಯ ಯೋಜನೆಯನ್ನು ಹೆಚ್ಚಾಗಿ ಜಾರಿಯಲ್ಲಿ ತರಲಾಗುವುದು. ಈ ರೀತಿ ಜನರಿಗೆ ಆಹಾರ ಮತ್ತು ಬಟ್ಟೆಯ ಆಶ್ವಾಸನ ಕೊಟ್ಟ ಬಳಿಕ ಶ್ರೀ ಖೇರರು ಕುಡಿವ ನೀರಿನ ಪೂರಯಿಕೆಯ ಬಗ್ಗೆ ಆಶ್ವಾಸನ ಕೊಟ್ಟಿರುವರು ಹಳ್ಳಿಗಳಲ್ಲೆಲ್ಲ ಭಾವಿಗಳನ್ನು ಅಗಿಸಿ ಇಲ್ಲವೆ ನೀರಿನ ಕೆರೆಗಳ ದುರಸ್ತಿಮಾಡಿ ಕುಡಿವ ನೀರನ್ನು ಪೂರೈಸಲಾಗುವದೆಂದು ಹೇಳಿದರು. ಸದ್ಯಕ್ಕೆ ಕುಡಿವ ನೀರಿಗಾಗಿ ಜನವೆಷ್ಟೊಂದು ಬಳಲುತ್ತಿದೆಂಬುದು ಸರ್ವಶ್ರುತ. ಅದನ್ನು ಹೋಗಲಾಡಿಸಿದರೆ ಜನ ಕುಡಿವ ನೀರಿಗಾಗಿ ವ್ಯಯಮಾಡುವ ವೇಳೆ ಶ್ರಮ ಮುಂತಾದ್ದೆಲ್ಲ ಕಡಿಮೆಯಾಗುವದು. ಮದ್ಯ ಪ್ರತಿಬಂಧ ಕಾರ್ಯಕ್ರಮವನ್ನೂ ಕೈಕೊಳ್ಳಲಾಗುವದೆಂದು ಖೇರ ಸಾಹೇಬರು ಹೇಳಿರುವರು ಕೂಲಿಕಾರರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಸದ್ಯದ ಮಂತ್ರಿಮಂಡಳದಲ್ಲಿ ಶ್ರೀ ಗುಲಜರಿಲಾಲ ನಂದಾರಂಥ ತಜ್ಞರನ್ನು ತೆಗೆದುಕೊಳ್ಳಲಾಗಿದೆ. ಸ್ಥಾನಬದ್ಧರ ಬಿಡುಗಡೆ ಮಾಡುವುದು ಮತ್ತು ವಾರಂಟುಗಳನ್ನೆಲ್ಲ ರದ್ದುಪಡಿಸುವುದು ಸರಕಾರದ ಮೊದಲನೆಯ ಕೆಲಸವಾಗಿದೆ. ಪ್ರಾಥಮಿಕ ಶಿಕ್ಷಕರ ಸಮಸ್ಯೆಯನ್ನು ಬಗೆಹರಿಸಲು ಶಕ್ಯವಿದ್ದುದನ್ನೆಲ್ಲ ಮಾಡುವೆವಾದ್ದರಿಂದ ಅವರು ಕೂಡಲೆ ಸಂಪನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡಿರುವರು. ಮಾನ್ಯ ಮಂತ್ರಿಗಳು ಅಭಿಪ್ರಾಯ ಪಟ್ಟಂತೆ ಪ್ರಾಥಮಿಕ ಶಿಕ್ಷಕರು ಕೂಡಲೆ ಸಂಪನ್ನು ಹಿಂತೆಗೆದುಕೊಳ್ಳುವರೆಂದು ನಂಬುತ್ತೇವೆ. ಸದ್ಯದಂಥ ಗಂಡಾಂತರ ಪ್ರಸಂಗದಲ್ಲಿಯೂ ಲೋಕಪ್ರಿಯ ಮಂತ್ರಿಗಳು ಜನತೆಯ ಸಂಕಷ್ಟ ಪರಿಹಾರ ಮಾಡಲು ಸಮರ್ಥರಾಗುವರೆಂದು ನಂಬುತ್ತೇವೆ.

ಅಧಿಕಾರಿಗಳ ಕೈವಾಡ

ಚುನಾವಣೆಗಳಲ್ಲಿ ಅಧಿಕಾರಿಗಳು ಯಾವ ರೀತಿಯಿಂದಲೂ ಕೈವಾಡ ನಡೆಸಬಾರದೆಂದು ಹಿಂದುಸ್ತಾನ ಸರಕಾರದವರು ಎಚ್ಚರಿಕೆ ಕೊಟ್ಟಿದ್ದರೂ ಅಲ್ಲಲ್ಲಿನ ಪ್ರಾಂತಿಕ ಅಧಿಕಾರಿಗಳು ಚುನಾವಣೆಗಳಲ್ಲಿ ತಮ್ಮ ವರ್ಚಸ್ಸನ್ನು ಎಂತು ಉಪಯೋಗಿಸಿದರೆಂಬುದು ಪ್ರಸಿದ್ಧವಾಗಿದೆ. ರಾಷ್ಟ್ರಪತಿಗಳಾದ ಮೌಲಾನಾ ಅಬುಲ್‌ಕಲಂ ಆಜಾದರಂಥ ಹೊಣೆಗಾರ ಮುಖಂಡರು ಈ ಸಂಬಂಧದಲ್ಲಿ ದೂರಿಕೊಂಡಿರುವರೆಂದ ಬಳಿಕ ಅದೆಷ್ಟು ಸತ್ಯಪೂರ್ಣವಾಗಿರುವದೆಂಬದನ್ನು ಬೇರೆ ಹೇಳಬೇಕಿಲ್ಲ. ಕೇಂದ್ರ ಶಾಸನ ಸಭೆಯ ಚುನಾವಣೆಯಲ್ಲಿ, ಸರಹದ್ದ ಬಂಗಾಲ ಶಾಸನ ಸಭೆ ಚುನಾವಣೆಗಳಲ್ಲಿ ಅಧಿಕಾರಿಗಳು ಲೀಗಿನ ಪರವಾಗಿ ಯಾವ ರೀತಿ ಪ್ರಚಾರ ಮಾಡಿದರೆಂಬುದರ ಬಗ್ಗೆ ತಮ್ಮ ಕಡೆಗೆ ಸಾಕಷ್ಟು ಪುರಾವೆಗಳವೆಂದು ಮೌಲಾನಾ ಸಾಹೇಬರು ಸ್ಪಷ್ಟವಾಗಿ ಹೇಳಿದ್ದಾರೆ. ಸರಹದ್ದದಲ್ಲಿ ಸ್ವತಃ ಹಿಂದಿನ ಗವರ್ನರ ಸಾಹೇಬರು ಕೂಡ ಲೀಗಿನ ಪರ ಪ್ರಚಾರ ಮಾಡಿದರು. ಬಂಗಾಲದ ಕಥೆಯಂತೂ ಸುದೀರ್ಘವಾಗಿದೆಂದು ಅವರು ಹೇಳಿರುವರು. ಅಧಿಕಾರಿಗಳಲ್ಲಿಯೂ ವಿಶೇಷವಾಗಿ ಯುರೋಪಿಯನ ಅಧಿಕಾರಿಗಳು ತಮ್ಮ ಹಸ್ತಕ್ಷೇಪವನ್ನು ಹೆಚ್ಚಾಗಿ ಮಾಡಿರುವರೆಂದು ಅವರ ದೂರು. ಇಸ್ಲಾಮದ ಮೇಲಿನ ಮಮತೆಯಿಂದ ಯುರೋಪಿಯನ್ ಅಧಿಕಾರಿಗಳು ಲೀಗಿಗೆ ಸಹಾಯ ಮಾಡಿರದೆ ಹಿಂದುಸ್ತಾನದ ಸ್ವಾತಂತ್ರ್ಯ ಸಮಸ್ಯೆಯನ್ನು ಮುಂದಕ್ಕೆ ಹಾಕಬೇಕೆಂದು ಈ ರೀತಿ ಜನತೆಯನ್ನು ಅಡ್ಡ ಹಾದಿಗೆ ಹಿಡಿಸಿದ್ದಾರೆಂದು ಅವರು ಹೇಳಿದರು. ಬಂಗಾಲದಲ್ಲಿ ಲೀಗಿನವರು ಇಷ್ಟು ಬಹುಮತ ಪಡೆಯಬೇಕಾದರೆ ಅಧಿಕಾರಿಗಳ ಹಸ್ತಕ್ಷೇಪವೇ ಕಾರಣವಾಗಿರಬಹುದೆಂಬದನ್ನು ಬೇರೆ ಹೇಳಬೇಕಿಲ್ಲ. ಅಧಿಕಾರಿಗಳ ಈ ಅನಿಷ್ಟ ವರ್ತನದ ಬಗ್ಗೆ ವಿಚಾರಣೆಯಾಗಲೇಬೇಕೆಂದು ಆಗ್ರಹಪಡುತ್ತೇವೆ.

ರಾಷ್ಟ್ರೀಯ ಸಪ್ತಾಹ

ಇದೇ ೬ ರಿಂದ ೧೩ರ ವರೆಗೆ ಇಡೀ ಹಿಂದುಸ್ತಾನದಲ್ಲಿ ರಾಷ್ಟ್ರೀಯ ಸಪ್ತಾಹವು ಆಚರಿಸಲ್ಪಡುತ್ತಿದೆಂಬುದು ಸರ್ವಶ್ರುತ. ೧೯೧೯ ನೆಯ ಎಪ್ರಿಲದಲ್ಲಿ ಜನರಲ್ ಡಾಯರನು ಜಾಲಿಯನ್‌ವಾಲಾ ಬಾಗದಲ್ಲಿ ನಡೆಸಿದ ಹತ್ಯಾಕಾಂಡವನ್ನು ಭಾರತೀಯರು ಎಂದೂ ಮರೆಯರು. ಅಂದಿನಿಂದ ಅವರು ಈ ರಾಷ್ಟ್ರೀಯ ಸಪ್ತಾಹವನ್ನಾಚರಿಸುತ್ತ ಬಂದಿರುವರು. ಈ ಸಪ್ತಾಹವು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಕ್ಕಾಗಿಯೇ ಮೀಸಲೆಂದು ಬೇರೆ ಹೇಳಬೇಕಾಗಿಲ್ಲ. ನೂಲು ತೆಗೆಯುವುದು, ಖಾದೀ ಧಾರಣ, ಜಾತೀಯ ಐಕ್ಯ, ಹರಿಜನೋದ್ಧಾರ ಮುಂತಾದ ಗಾಂಧೀಜಿಯವರ ಚತುರ್ದಶ ವಿಧಾಯಕ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ಭಾರತೀಯ ತನ್ನ ಮನಸ್ಸನ್ನು ಹಾಕುವನು. ಇಂಥ ವಿಧಾಯಕ ಕಾರ್ಯಕ್ರಮದಿಂದಲೇ ಜನತೆ ಹೆಚ್ಚು ಸಂಘಟಿತ ಹಾಗು ಸ್ವಾವಲಂಬಿಯಾಗುವದು. ವಿಧಾಯಕ ಕಾರ್ಯಕ್ರಮವು ಪಕ್ಷಾತೀತವಾಗಿದೆ. ಸ್ವಾತಂತ್ರ್ಯ ಪ್ರೇಮಿಗಳೆಲ್ಲ ಈ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಮಾಡಬಹುದಾಗಿದೆ. ಆದುದರಿಂದ ಭಾರತೀಯರೆಲ್ಲ ಈ ಸಪ್ತಾಹವನ್ನು ಒಳ್ಳೆ ಉತ್ಸಾಹದಿಂದ ಆಚರಿಸಿ ಸ್ವಾತಂತ್ರ್ಯ ದೇವಿಯನ್ನು ಸಮೀಪಿಸುವರೆಂದು ನಂಬುತ್ತೇವೆ.

ಹಿಂದುಸ್ತಾನದಲ್ಲಿ ಮಂತ್ರಿತ್ರಯರು

ಬ್ರಿಟಿಶ್ ಮಂತ್ರಿಮಂಡಳದ ಮೂವರು ಮಂತ್ರಿಗಳಾದ ಸರ್ ಸ್ಟಾಫರ್ಡ ಕ್ರಿಪ್ಸ ಲಾರ್ಡ ಪೆಥಿಕ್ ಲಾರೆನ್ಸ ಮತ್ತು ಅಲೆಕ್ಸಾಂಡರರು ಹಿಂದುಸ್ತಾನಕ್ಕೆ ಬಂದಂದಿನಿಂದ ಇಲ್ಲಿನ ಪ್ರಮುಖರನ್ನು ಭೆಟ್ಟಿಯಾಗಿ ಹಿಂದುಸ್ತಾನದ ಸಮಸ್ಯೆಯ ಬಗ್ಗೆ ವಿಚಾರಣೆ ನಡೆಸುತ್ತಿರುವರು. ಅವರು ತಮ್ಮ ಮೊದಲನೆ ವಾರದ ಸಂದರ್ಶನದಲ್ಲಿ ಕೇವಲ ಅಧಿಕಾರಿಗಳನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದರು. ಅದರ ನಿಜ ಕಾರ್ಯಕ್ರಮವು ೧ ನೇ ತಾರೀಕಿನಿಂದ ಅಂದರೆ ಮಹಾತ್ಮಾ ಗಾಂಧಿಯವರೊಡನೆ ನಡೆಸಿದ ಅನೌಪಚಾರಿಕ ಚರ್ಚೆಯಿಂದ ಪ್ರಾರಂಭವಾಯಿತೆಂದು ಹೇಳಬಹುದು. ಅವರು ಹಿಂದುಸ್ತಾನದ ಸಮಸ್ಯೆ ಬಿಡಿಸುವಲ್ಲಿ ಮುಖಂಡರ ಅಭಿಪ್ರಾಯ ಕೇಳುವಾಗ ಕೆಲವು ವಿಶಿಷ್ಟ ಪ್ರಶ್ನೆಗಳನ್ನು ಹಾಕುವರೆಂದು ತಿಳಿಯುತ್ತದೆ. ತಮ್ಮ ಗುಟ್ಟನ್ನು ಸ್ವಲ್ಪವೂ ತಿಳಿಸದೆ ಪ್ರಜಾಪ್ರಮುಖರು ಮತ್ತು ಅಧಿಕಾರಿಗಳಿಂದ ಎಲ್ಲವನ್ನು ತಿಳಿದುಕೊಳ್ಳುವ ಸಾಹಸ ಮಾಡುತ್ತಿರುವರೆಂದು ತಿಳಿಯುತ್ತದೆ. ಪಾಕಿಸ್ತಾನದ ಸಂಬಂಧದಲ್ಲಿಯೂ ಅವರು ಎಲ್ಲರಿಗೂ ಪ್ರಶ್ನೆ ಹಾಕುವರಂತೆ. ಮಹಾತ್ಮಾ ಗಾಂಧಿ ಮತ್ತು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಆಝಾದರೊಡನೆ ನಡೆಸಿದ ಸಂಭಾಷಣೆ ಅತ್ಯಂತ ಮಹತ್ವದ್ದೆಂದು ಹೇಳಬಹುದು. ಕಾಂಗ್ರೆಸ್ಸು ಹಿಂದುಸ್ತಾನದ ವಿಭಜನೆಗೆ ಎಂದೂ ಒಪ್ಪದೆಂದೂ ಹಿಂದುಸ್ತಾನದ ಘಟನೆಯನ್ನು ಸಿದ್ಧಪಡಿಸಲು ಎರಡು ಘಟನಾ ಸಮಿತಿ ನೇಮಿಸಲು ಎಂದೂ ಸಮ್ಮತಿಸದೆಂದೂ ಮೌಲಾನಾ ಆಝಾದರು ಅಭಿಪ್ರಾಯ ಪಡುತ್ತಾರೆ. ಬ್ಯಾ. ಜಿನ್ನಾರವರನ್ನೂ ಮಂತ್ರಿತ್ರಯರು ಕಾಣಲಿರುವರು. ಜಿನ್ನಾರವರ ಇತ್ತೀಚಿನ ಪ್ರಕಟನೆ ಸಂದರ್ಶನ ಮುಂತಾದವುಗಳಲ್ಲಿ ಪಾಕಿಸ್ತಾನ ಪ್ರಶ್ನೆಯಲ್ಲಿ ಯಾವ ಬಗೆಯ ಒಡಂಬಡಿಕೆಯೂ ಸಾಧ್ಯವಿಲ್ಲೆಂದೂ ತಾವು 'ಹಿಂದೀಯರೆ' ಅಲ್ಲೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಹಿಂದೀಯರಲ್ಲದವರಿಂದ ಹಿಂದುಸ್ತಾನದ ಸಮಸ್ಯೆ ಅದೆಂತು ಬಗೆಹರಿಯುವದೋ ತಿಳಿಯದು. ಹಿಂದುಸ್ತಾನದಲ್ಲಿಯ ಮುಸಲ್ಮಾನರು ಜಿನ್ನಾರವರ ಇತ್ತೀಚಿನ ಮುಕ್ತಾಫಲದ ಬಗ್ಗೆ ನಿರ್ವಿಕಾರ ಮನಸ್ಸಿನಿಂದ ವಿಚಾರಮಾಡಿ ತಮ್ಮ ನಿರ್ಣಯ ಮಾಡಬೇಕಾಗಿದೆ. ವಿಶೇಷತಃ ಪಾಕಿಸ್ತಾನದ ಹೊರಗಿರುವ ಮುಸಲ್ಮಾನರು ತಮ್ಮ ಧೋರಣವನ್ನು ಎಂತು ಗೊತ್ತುಮಾಡಿಕೊಳ್ಳುವರೊ ನೋಡಬೇಕಾಗಿದೆ.

ಪಾಕಿಸ್ತಾನದ ಬಗ್ಗೆ ಜನಮತ ?

ಪಾಕಿಸ್ತಾನದ ಬಗ್ಗೆ ಮಂತ್ರಿತ್ರಯರು ಜನಮತವನ್ನು ತಿಳಿದುಕೊಳ್ಳಬೇಕೆಂದು ಮಾಡಿರುವರೆಂದು ತಿಳಿಯುತ್ತದೆ. ಅವರು ಈ ಸಂಬಂಧದಲ್ಲಿ ಕೆಲ ಪ್ರಶ್ನೆಗಳನ್ನು ಸಿದ್ಧಪಡಿಸಿದ್ದು ಅವುಗಳಿಗೆ ಹಿಂದೀ ಮುಖಂಡರ ಅಭಿಪ್ರಾಯ ತಿಳಿದುಕೊಳ್ಳುವರೆಂದು ತಿಳಿಯುತ್ತದೆ. ಪಾಕಿಸ್ತಾನ ಶಕ್ಯವಿದೆಯೊ ಹಿಂದುಸ್ತಾನದ ಸಮಸ್ಯೆ ಅದರಿಂದ ಬಗೆಹರಿಯುವದೋ ಎಂಬುದು ಮಹತ್ವದ್ದಾಗಿದೆ. ತಾತ್ಕಾಲಿಕ ಸರಕಾರ ಸ್ಥಾಪಿಸಬೇಕೊ, ಅವಶ್ಯವಿದ್ದರೆ ಅದನ್ನೆಂತು ಸ್ಥಾಪಿಸಬಹುದು? ಸದ್ಯದ ಪ್ರಾಂತಗಳನ್ನು ಪುನರ್ರಚಿಸಬೇಕೊ, ಅದಕ್ಕಾಗಿ ಯಾವ ತಳಹದಿಯನ್ನಿಟ್ಟುಕೊಳ್ಳಬೇಕು. ನಿರ್ಣಾಯಕ ಸಮಿತಿಯನ್ನು ನೇಮಿಸಬೇಕೊ, ಘಟನಾ ಸಮಿತಿಯನ್ನೆಂತು ನೇಮಿಸಬಹುದು, ಪ್ರಾಂತಿಕ ಮತ್ತು ಕೇಂದ್ರ ವಿಷಯಗಳ ವರ್ಗೀಕರಣವನ್ನೆಂತು ಮಾಡಬೇಕು. ಇವೇ ಮೊದಲಾದ ಪ್ರಶ್ನೆಗಳ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಳ್ಳುವರಂತೆ. ಪಾಕಿಸ್ತಾನದ ಸಂಬಂಧದಲ್ಲಿ ಮತ ತೆಗೆದುಕೊಳ್ಳುವಾಗ ಕೇವಲ ಮುಸಲ್ಮಾನರ ಮತಗಳನ್ನಷ್ಟೇ ತೆಗೆದುಕೊಳ್ಳಬೇಕೆಂದು ಬ್ಯಾ. ಜಿನ್ನಾ ಮೊದಲಾದ ಲೀಗ ಧುರೀಣರು ಅಭಿಪ್ರಾಯ ಪಡುತ್ತಿರುವರು. ಹೀಗೆ ಮಾಡಿದರೆ ಬಹುಸಂಖ್ಯಾಕ ಹಿಂದುಗಳ ಅಭಿಪ್ರಾಯವನ್ನಲಕ್ಷಿಸಿದಂತಾಗುವದು. ಹೀಗೆಮಾಡುವುದು ಅತ್ಯಂತ ಅನ್ಯಾಯದ ಸಂಗತಿಯೆಂದು ಲೀಗೇತರರಷ್ಟೆ ಅಲ್ಲದೆ ಸಮಂಜಸ ಬುದ್ಧಿಯ ಲೀಗ ಮುಖಂಡರು ಕೂಡ ಅಭಿಪ್ರಾಯ ಪಡಬಹುದಾಗಿದೆ ಪಾಕಿಸ್ತಾನದ ಪ್ರಶ್ನೆಯ ಮೇಲೆಯೆ ಸದ್ಯದ ಚುನಾವಣೆಗಳನ್ನು ಹೋರಾಡಿದ್ದು ಬಹುಸಂಖ್ಯಾಕ ಲೀಗ ಪ್ರತಿನಿಧಿಗಳು ಆರಿಸಿ ಬಂದದ್ದರಿಂದ ಪಾಕಿಸ್ತಾನಕ್ಕೆ ಅನುಕೂಲ ಅಭಿಪ್ರಾಯ ದೊರೆತಂತಾಗಿದೆಂದು ಬ್ಯಾ. ಜಿನ್ನಾ ಪ್ರಭೃತಿಗಳು ಹೇಳುತ್ತಿರುವರು. ಸದ್ಯದ ಚುನಾವಣೆಗಳಲ್ಲಿ ಅಧಿಕಾರಿಗಳು ಲೀಗದವರನ್ನು ಆರಿಸಿ ತರಲು ಎಷ್ಟೊಂದು ಹಸ್ತಕ್ಷೇಪ ಮಾಡಿದರೆಂಬುದನ್ನು ರಾಷ್ಟ್ರಪತಿಗಳು ಸ್ಪಷ್ಟ ಶಬ್ದಗಳಲ್ಲಿ ಹೇಳಿದ್ದಾರೆ. ಈ ಪರಿಸ್ಥಿತಿಯಲ್ಲಿ ಸದ್ಯದ ಚುನಾವಣೆಗಳು ಅದೆಂತು ಪಾಕಿಸ್ತಾನ ಪ್ರಶ್ನೆಗೆ ನಿರ್ಣಾಯಕವಾಗುವವೊ ತಿಳಿಯದು ? ಅದರೂ ಸರಹದ್ದದಲ್ಲಿ ಕಾಂಗ್ರೆಸ್ಸು ಪ್ರಚಂಡ ಬಹುಮತದಿಂದ ಆರಿಸಿ ಬಂದದ್ದರಿಂದ ಸರಹದ್ದದ ಪಠಾಣರು ಪಾಕಿಸ್ತಾನಕ್ಕೆ ಸಂಪೂರ್ಣ ವಿರುದ್ಧವಿರುವದೆಂದು ಜಗಜ್ಜಾಹೀರವಾಗಿದೆ. ಪಾಕಿಸ್ತಾನದ ಅಡಿಗಲ್ಲಾದ ಸರಹದ್ದ ಪ್ರಾಂತವೆ ಜಿನ್ನಾರವರಿಗೆ ವಿರುದ್ಧವಾದ್ದರಿಂದ ಅವರು ಬಹಳಮಟ್ಟಿಗೆ ನೊಂದುಕೊಂಡಿರುವರು. ಅದೇನೇ ಇದ್ದರೂ ಪಾಕಿಸ್ತಾನದಂಥ ಪ್ರಶ್ನೆಯನ್ನು ನಿರ್ಣಯಿಸಬೇಕಾದರೆ ಆಯಾ ಪ್ರಾಂತಗಳಲ್ಲಿಯ ಜನತೆಯ ಸಾರ್ವತ್ರಿಕ ಅಭಿಪ್ರಾಯ ಪಡೆಯುವದೆ ನ್ಯಾಯ್ಯವಾಗಿದೆಯಲ್ಲದೆ ಕೆಲವೊಂದು ಜಾತಿಯ ಜನರ ಮತಗಳಿಂದ ಅದನ್ನೆಂದಿಗೂ ಬಗೆಹರಿಸಲಾಗದೆಂಬುದು ಸುಸ್ಪಷ್ಟವಿದೆ.

ಜವಾಹರರ ಮಲಯ ಸಂಚಾರ

ಪಂಡಿತ ಜವಾಹರಲಾಲರು ಮಲಯದಲ್ಲಿ ಸಂಚಾರ ಮಾಡಿ ಅಲ್ಲಿನ ಜನರಿಗೆ ಭಾರತದ ಬೆಂಬಲದ ಆಶ್ವಾಸನ ಕೊಟ್ಟು ಬಂದರು. ಅವರು ಈ ಸಂಚಾರದಿಂದ ಮರಳಿ ಬಂದಬಳಿಕ ಹೊರಡಿಸಿದ ಪ್ರಕಟನೆಯಲ್ಲಿ ಭಾರತ ಸಮಸ್ಯೆಯನ್ನು ನಾನು ಏಶಿಯದ ಹಿನ್ನೆಲೆಯಲ್ಲಿ ಅದೇಕೆ ಅಲ್ಪಮಟ್ಟಿಗೆ ಜಗತ್ತಿನ ಹಿನ್ನೆಲೆಯಲ್ಲಿಯೆ ಕಂಡುಕೊಂಡೆನೆಂದು ಅಭಿಪ್ರಾಯಪಟ್ಟಿರುವರು. ಜವಾಹರರು ಮಲಯದಲ್ಲಿ ೭ ದಿನ ಕಳೆದರು. ಇಂಡೋನೇಶಿಯದ ಸ್ವಾತಂತ್ರ್ಯ ಸಮರದಲ್ಲಿ ಮಲಯದ ಜನರು ಹೆಚ್ಚು ಆಸ್ಥೆ ವಹಿಸಿರುವರು. ಮಲಯದಲ್ಲಿನ ಹಿಂದೀಯರು ಅನ್ನ ಆಶ್ರಯ ಬಟ್ಟೆಗಳ ಕೊರತೆಯಿಂದ ಬಳಲುತಿರುವರು. ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಶಿಸ್ತುಸಂಘಟನೆಯಿಂದ ಮುಂದೆ ಸಾಗಬೇಕೆಂದು ಅವರು ನಿರ್ಧರಿಸಿದ್ದಾರೆ. ಹಿಂದಿನಂತೆ ಈಗ ಕುರಿಗಳಾಗಿ ಬಾಳಲು ಅವರು ಒಪ್ಪುವುದಿಲ್ಲ. ಏಶಿಯದಲ್ಲಿಯ ಜನರಿಗೆ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತಿದ್ದಾರೆ. ಯುರೋಪಿನವರು ಈ ಮೊದಲಿನಂತೆ ತಮ್ಮ ವರ್ಚಸ್ಸನ್ನು ಅವರ ಮೇಲೆ ಹೇರಲು ಪ್ರಯತ್ನಿಸಿದರೆ ಅವರಿಗೆ ಯಶಸ್ಸು ಸಿಕ್ಕದು. ಏಶಿಯದ ಬೇರೆ ಬೇರೆ ಭಾಗಗಳಲ್ಲಿರುವ ಭಾರತೀಯರು ಅಲ್ಲಿನ ಜನರ ಸ್ವಾತಂತ್ರ್ಯ ಸಮರದಲ್ಲಿ ಹಿಂದೆ ಬಿದ್ದಿಲ್ಲ. ತಮ್ಮ ವಿಶಿಷ್ಟ ಹಕ್ಕುಗಳನ್ನು ಕಾಯ್ದುಕೊಂಡು ಅವರು ಆಯಾ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೆರವಾಗುತಿರುವರು. ಆಯಾ ದೇಶಗಳಲ್ಲಿರುವ ಭಾರತೀಯರ ಹಿತ ನೋಡಿಕೊಳ್ಳುವದು ಭಾರತ ಸರಕಾರದ ಕರ್ತವ್ಯವಾಗಿದೆಂದು ಬೇರೆ ಹೇಳಬೇಕಿಲ್ಲ.

ರೇಲ-ಸಾರಿಗೆ ಬೇಡಿಕೆ ನಿರಾಕೃತವಾಯಿತು

ಕೇಂದ್ರ ಶಾಸನ ಸಭೆಯ ಚರ್ಚೆ

ಅಝಾದ ಹಿಂದ ಸೈನಿಕರ ಕೂದಲೆಳೆಗೆ ಧಕ್ಕೆ ಹತ್ತಬಾರದು

ರೇಲ್ವೆಯವರಿಗೆ ತುಟ್ಟಿ ಭತ್ತೆ

ಕೇಂದ್ರ ಶಾಸನ ಸಭೆಯ ಅಧಿವೇಶನವು ಮೊದಲು ನಿರೀಕ್ಷಿಸಿದಂತೆ ಎಪ್ರಿಲ ಮೊದಲನೆಯ ವಾರದಲ್ಲಿ ಕೊನೆಗೊಳ್ಳದೆ ೧೮ ನೇ ತಾರೀಕಿನ ವರೆಗೆ ನಡೆಯುವುದೆಂದು ಗೊತ್ತಾಗುತ್ತದೆ.

೨೯ನೆಯ ತಾರೀಕಿನ ದಿನ ಕಾಂಗ್ರೆಸ್ ಪಕ್ಷದವರು ಕಡಿತದ ಸೂಚನೆಯೊಂದನ್ನು ತಂದು ರೇಲ್ವೆ ಖಾತೆಯಲ್ಲಿ ೧೦೦೦ ರೂಪಾಯಿಗಳಿಗಿಂತ ಹೆಚ್ಚಿನ ಸಂಬಳದವರಿಗೆ ತುಟ್ಟಿಭತ್ತೆ ಮತ್ತು ಇತರ ಭತ್ತೆ ಎಂದು ಕೊಡಲಾಗುತ್ತಿದ್ದ ೧೧೬೦೦೦ ರೂಪಾಯಿಗಳನ್ನು ನಿಲ್ಲಿಸಿಬಿಡಬೇಕೆಂದು ಕೇಳಿದರು. ಆದರೆ ಲೀಗಿನವರು ಆ ಪ್ರಶ್ನೆಗೆ ವಿರುದ್ಧ ಮತ ಕೊಟ್ಟದ್ದರಿಂದ ಅದು ೪೧ ವಿರುದ್ಧ ೫೧ ಮತಗಳಿಂದ ಬಿದ್ದುಹೋಯಿತು. ಸರಕಾರವು ರಸ್ತೆ ಸಾರಿಗೆಗಾಗಿ ಕೇಳಿದ್ದ ೫೭೩೭೫೨ ರೂಪಾಯಿಗಳ ಬೇಡಿಕೆ ಕೇಂದ್ರ ಶಾಸನ ಸಭೆಯಲ್ಲಿ ನಿರಾಕೃತವಾಯಿತು.

ಶ್ರೀ ಅನಂತಶಯನಂ ಅಯ್ಯಂಗಾರ್ಯರು ತಮ್ಮ ಕಡಿತದ ಸೂಚನೆಯನ್ನು ಮಂಡಿಸುತ್ತ ೧೦೦೦ ರೂ. ಸಂಬಳ ಪಡೆಯುತಿರುವವರಿಗೆ ತುಟ್ಟಿಭತ್ತೆಯ ಅವಶ್ಯಕತೆಯಿಲ್ಲ, ಅವರಿಗೆ ಪೆಟ್ರೋಲ ದೊರೆಯುವದಿಲ್ಲೆಂದಬಳಿಕ ಕಾರಿನ ವೆಚ್ಚವಿಲ್ಲ. ಬಟ್ಟೆಯ ಕೊರತೆಯಿದ್ದುದರಿಂದ ಹೆಂಡಂದಿರಿಗೆ ಸೀರೆ ಕೊಂಡುಕೊಳ್ಳಲಾರರು, ೫೦ ಜನರಿಗಿಂತ ಹೆಚ್ಚಿಗೆ ಜನರನ್ನು ಊಟಕ್ಕೆ ಕರೆಯುವಂತಿಲ್ಲವಾದ್ದರಿಂದ ಮದುವೆ ಮೊದಲಾದ ಶುಭಕಾರ್ಯಗಳನ್ನು ಮಾಡಲಾರರು ಎಂದರು. ಪ್ರೊ. ರಂಗಾ ಇವರು ಈ ಸೂಚನೆಯನ್ನು ಸಮರ್ಥಿಸಿದರು.

ಒಂದೇ ಖಾತೆಯಲ್ಲಿಯ ಅಧಿಕಾರಿಗಳ ತುಟ್ಟಿ ಭತ್ತೆಯನ್ನು ಹೀಗೆ ಟೀಕಿಸಬಾರದು ಸರಕಾರಿ ಸೇವೆಯಲ್ಲಿರುವ ಅಧಿಕಾರಿಗಳೆಲ್ಲರ ತುಟ್ಟಿಭತ್ತೆಯ ವಿಚಾರ ನಡೆಸಬೇಕು ಎಂದು ಲೀಗಿನ ಸರ್ ಮಹಮ್ಮದ ಯಾಮಿನಖಾನ ಮತ್ತು ಸರ್ ಜಿಯಾಉದ್ದೀನ ಅಹಮ್ಮದರು ಮಾತಾಡಿದರು. ಶ್ರೀ ಮೋಹನಲಾಲ ಸಕ್ಸೇನಾರವರು ಮಾತಾಡುತ್ತ ರೇಲ್ವೆ ಖಾತೆಯಲ್ಲಿ ಆಹಾರ ಮೊದಲಾದವು ಅಗ್ಗದರದಿಂದ ದೊರೆಯುತಿರುವದರಿಂದ ಆ ಖಾತೆಯವರಿಗಂತೂ ಈ ಭತ್ತೆಗಳು ತೀರ ಅನವಶ್ಯಕವೆಂದರು. ಅರ್ಥಿಕ ಕಮೀಶನರರು ಉತ್ತರಿಸುತ್ತ ೪೦೦ ರೂಪಾಯಿಗಿಂತ ಹೆಚ್ಚು ಸಂಬಳ ಪಡೆವವರಿಗೆ ಅಗ್ಗದರದಿಂದ ಧಾನ್ಯ ಮೊದಲಾದವನ್ನು ಪೂರಯಿಸುವದಿಲ್ಲೆಂದರು.

ರಸ್ತೆ ಸಾರಿಗೆ ಬೇಡಿಕೆ

ಸರಕಾರವು ರಸ್ತೆ ಸಾರಿಗೆಗಾಗಿ ೫೭೩೭೫೨ ರೂ.ಗಳ ಬೇಡಿಕೆ ಮಾಡಿದ್ದು ಆ ಹಣವನ್ನು ಕೊಡಬಾರದೆಂದು ಶ್ರೀ. ಅನಂತಶಯನಂ ಅಯ್ಯಂಗಾರರು ಸೂಚಿಸಿದರು. ಸರ್ ಮಹಮ್ಮದ ಯಾಮಿನ ಖಾನ, ಪಿ. ಬಿ. ಗೋಳೆ, ಡಿ. ಕೆ ಸಾಳ್ವೆಯವರು ಸಮರ್ಥಿಸಿದರು. ಈಗ ಹಣ ವೆಚ್ಚ ಮಾಡಿ ಸ್ಥಾಪಿಸಲ್ಪಟ್ಟ ರಸ್ತೆ ಸಾರಿಗೆಯ ಎರಡು ಕಂಪನಿಗಳನ್ನು ಮುಚ್ಚಿ ಬಿಡಬೇಕೆಂದರು. ರೇಲ್ವೆ ಕಮೀಶನರರಾದ ಟೆರ್ನರರು ಈ ಸೂಚನೆಯನ್ನು ವಿರೋಧಿಸುತ್ತ ಪ್ರಾಂತಗಳಲ್ಲಿ ಹೊಸ ಸರಕಾರಗಳು ಸ್ಥಾಪಿತವಾದ ನಂತರ ಈ ವಿಷಯವನ್ನು ಪರಿಶೀಲಿಸಲಾಗುವದೆಂದು ಹೇಳಿದರು. ಬೇಡಿಕೆಯನ್ನು ಮತಕ್ಕೆ ಹಾಕಲಾಗಿ ೩೮ ವಿರುದ್ಧ ೭೪ ಮತಗಳಿಂದ ನಿರಾಕೃತವಾಯಿತು.

ವರ್ಷಕ್ಕೆ ೩೫ ಲಕ್ಷ ಟನ್ ಧಾನ್ಯ ಹಾಳು!

ಭಾರತದ ಆಹಾರ ಶಿಷ್ಟಮಂಡಳದಲ್ಲಿ ಸರ್ ಜ್ವಾಲಾಪ್ರಸಾದರನ್ನು ಅನುಸರಿಸಬೇಕೆಂದು ಯಾವ ಸರಕಾರೇತರರನ್ನು ಕೇಳಿಕೊಳ್ಳಲಾಗಿತ್ತು, ಅವರಲ್ಲಿ ಆಮಂತ್ರಣವನ್ನು ಒಪ್ಪದಿದ್ದವರು ಯಾರು ಅವರು ಯಾವ ಕಾರಣಗಳನ್ನು ಕೊಟ್ಟಿರುವರು ಎಂದು ಸೇಟ ಗೋವಿಂದದಾಸರು ಕೇಳಿದ ಪ್ರಶ್ನೆಗೆ ಈಗ ಅದನ್ನು ಬಹಿರಂಗಪಡಿಸುವದು ಸಾರ್ವಜನಿಕರ ಹಿತದ್ದಲ್ಲೆಂದು ಆಹಾರ ಖಾತೆಯ ಕಾರ್ಯದರ್ಶಿ ಸೇನರು ಹೇಳಿದರು. ಈ ಶಿಷ್ಟಮಂಡಳದವರೊಡನೆ ಸಹಕರಿಸದಿದ್ದ ನಮ್ಮ ಕಾಂಗ್ರೆಸ ಮಿತ್ರರಂಥವರ ವಿರುದ್ಧ ಭಾರತ ಸರಕಾರವು ಉಪಾಯಗಳನ್ನು ಕೈಕೊಳ್ಳುವದೇ ಎಂದು ಅಹಮ್ಮದ ಜಾಫರರು ಕೇಳಿದರು (ನಗು) ಸೇನರು ಮಾತಾಡುತ್ತ ಧಾನ್ಯಕ್ಕೆ ನುಸಿಹತ್ತಿ ಇಲಿ ಮುಂತಾದ ಕಾರಣಗಳಿಂದ ಪ್ರತಿವರ್ಷ ೩೦—೩೫ ಲಕ್ಷ ಟನ್ ಧಾನ್ಯ ಹಾಳಾಗುತ್ತವೆ. ಈ ನಾಶ ತಡೆಯಲು ತಜ್ಞ ಅಧಿಕಾರಿಗಳನ್ನು ನೇಮಿಸಲಾಗುವದೆಂದು ಹೇಳಿದರು.

ತುಟ್ಟಿಭತ್ತೆ ಕೊಡಕೂಡದು

ಕೇಂದ್ರಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ೧೦೦೦ ರೂಪಾಯಿ ಅಥವಾ ಅದಕ್ಕೂ ಹೆಚ್ಚಿನ ಸಂಬಳದವರಿಗೆ ಹಿಂದಿನ ತಾರೀಕಿನಿಂದ ತುಟ್ಟಿಭತ್ತೆ ಕೊಡುವದಕ್ಕೆ ಅಸಮ್ಮತಿ ಪ್ರದರ್ಶಿಸಿ ಜಕಾತಿ ಬೇಡಿಕೆಯಲ್ಲಿ ೨ ಲಕ್ಷ ರೂಪಾಯಿ ಕಡಿತ ಸೂಚಿಸಿದರು. ಅದು ೭೨ ವಿರುದ್ಧ ೩೧ ಮತಗಳಿಂದ ಸ್ವೀಕೃತವಾಯಿತು. ಮೋಹನಲಾಲ ಸಕ್ಸೇನಾರವರು ಇದನ್ನು ಮಂಡಿಸಿದರು. ಮನು ಸುಭೇದಾರ ದಿವಾಣ ಚಮನಲಾಲ ಪ್ರೊ. ರಂಗಾ, ಗಾಡಗೀಳ ಅಂಥನಿ, ನವಾಬಜಾದಾ ಲಿಯಾಕತ ಅಲಿಖಾನ ಮೊದಲಾದವರು ಬೆಂಬಲ ಕೊಟ್ಟರು. ಯುರೋಪಿಯನ್ ಗುಂಪಿನ ಲೆಸ್ಲಿ ಗ್ವಿಲ್ಟರು ಗೃಹಮಂತ್ರಿ ಸ್ಪೋನರು ಅರ್ಥಿಕ ಮಂತ್ರಿ ರೌಲಂಡ್ಸರು ಇದನ್ನು ವಿರೋಧಿಸಿದರು. ೧೦೦೦ ರೂಪಾಯಿ ಹಾಗು ಅದಕ್ಕಿಂತ ಹೆಚ್ಚಿನ ಸಂಬಳದವರಿಗೆ ತುಟ್ಟಿಭತ್ತೆ ಕೊಡುವದು ನ್ಯಾಯ್ಯವಾಗಿಲ್ಲ. ಅದರ ಬದಲು ಕೆಳಗಿನ ಸಂಬಳದವರ ತುಟ್ಟಿ ಭತ್ತೆ ಹೆಚ್ಚಿಸಬೇಕೆಂದು ಅನುಕೂಲ ಮಾತಾಡಿದವರು ಅಭಿಪ್ರಾಯಪಟ್ಟರು. ಲೀಗಿನ ಸರ್ ಝಿಯಾಉದ್ದೀನರು ಜೀವನವೆಚ್ಚವು ೩೦೦ ಪಟ್ಟು ಹೆಚ್ಚಾದ್ದರಿಂದ ಯುದ್ಧಕ್ಕಿಂತ ಮೊದಲು ೧ ರೂ. ಕೊಡುತ್ತಿದ್ದವರಿಗೆ ೩ ರೂ. ಭತ್ತೆ ಕೊಡಬೇಕೆಂದು ಸೂಚಿಸಿದರು. ಅರ್ಥಸಚಿವರು ನಡುವೆ ಬಾಯಿ ಹಾಕಿ ಕಾರ್ಯಕಾರೀ ಮಂಡಳದವರಿಗೂ ಇದು ಅನ್ವಯಿಸುವದೋ ಎಂದು ಕೇಳಿದರು. (ನಗು) ಸರ್ ಝಿಯಾಉದ್ದೀನರು ಉತ್ತರ ಕೊಡುತ್ತ ವಾಯಿಸರಾಯರಿಗೂ ಅನ್ವಯಿಸುವದು ಎಂದು ಹೇಳಿದರು [ಹೆಚ್ಚು ನಗು] ಯುರೋಪಿಯನ ಗುಂಪಿನ ಗ್ವಿಲ್ಟರು ವಿರೋಧಮಾಡಿ ಹೆಚ್ಚಿನ ಸಂಬಳದ ಸರಕಾರಿ ನೌಕರರಿಗೆ ಏನೂ ಕೊಡದ ಹೋದರೆ ಅವರು ನೌಕರಿ ಬಿಟ್ಟು ಉದ್ಯೋಗದಲ್ಲಿ ಸೇರುವರು ಎಂದು ನುಡಿದರು.

ಅರ್ಥಮಂತ್ರಿಗಳು ಮಾತಾಡುತ್ತ ಯುದ್ಧದ ಭತ್ತೆಯನ್ನು ವಿವಾಹಿತರಿಗಷ್ಟೆ ಕೊಡುತ್ತದೆಂದೂ ಅದು ಕೇವಲ ೧೫ ಸಾವಿರ ರೂಪಾಯಿ ಆಗುವದೆಂದೂ ಜೀವನ ವೆಚ್ಚ ೩೦೦ ಪಟ್ಟು ಹೆಚ್ಚಾಗಿದ್ದರೂ ಭತ್ತೆ ಪ್ರಮಾಣ ಕೇವಲ ೧೭॥ ಯಷ್ಟಿರುವದೆಂದೂ ಹೇಳಿದರು. ಅರ್ಥಿಕ ಸದಸ್ಯರ ಹೇಳಿಕೆಯನ್ನನುಲಕ್ಷಿಸಿ ನವಾಬಜಾದಾ ಲಿಯಾಕತ ಅಲಿಯವರು ಕಡಿತವನ್ನು ೧೦೦ ರೂಪಾಯಿಗೆ ತರುವ ತಿದ್ದುಪಡಿ ಮಂಡಿಸಿ ಸರಕಾರದ ಕೃತಿಗೆ ಅಸಮ್ಮತಿ ಪ್ರದರ್ಶಿಸುವದೆ ತಮ್ಮ ಉದ್ದೇಶವಾಗಿದೆಂದು ತಿಳಿಸಿದರು. ಮತಗಣನೆ ಮಾಡಲಾಗಿ ತಿದ್ದುಪಡಿಯೊಂದಿಗೆ ಕಡಿತದ ಸೂಚನೆ ೨೨ ವಿರುದ್ಧ ೩೧ ಮತಗಳಿಂದ ಸ್ವೀಕೃತವಾಯಿತು.

ಅಝಾದ ಸೈನಿಕರನ್ನು ಬಿಡಬೇಕು

ಅಝಾದ ಹಿಂದ ಸೈನಿಕರ ಮೇಲೆ ಹೂಡಲಾದ ಖಟ್ಲೆಗಳನ್ನು ಹಿಂತೆಗೆದುಕೊಂಡು ಅವರನ್ನು ಮತ್ತು ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದು ಪಂ. ಗೋವಿಂದ ಮಾಲವೀಯವರು ಮಂಡಿಸಿದ ಗೊತ್ತುವಳಿಯ ಚರ್ಚೆ ೧ ನೇ ತಾರೀಕಿಗೆ ಮತ್ತೆ ಮುಂದರಿಯಿತು. ಶ್ರೀ ಶರಚ್ಚಂದ್ರ ಬೋಸ, ಶ್ರೀ ಪ್ರಕಾಶ, ಕರಮರಕರ ಮೊದಲಾದವರು ಭಾಷಣ ಮಾಡಿ ಸರಕಾರದ ಧೋರಣವನ್ನು ಕಟುವಾಗಿ ಟೀಕಿಸಿದರು. ಅಝಾದ ಸೈನಿಕರ ಕೂದಲೆಳೆಗೆ ಕೂಡ ಧಕ್ಕೆಯಾಗತಕ್ಕದ್ದಲ್ಲವೆಂದು ಶರಚ್ಚಂದ್ರರು ಹೇಳಿದರು.

ಆಹಾರ ಶಿಷ್ಟಮಂಡಳದ ಅಪಯಶಸ್ಸಿನ ಬಗ್ಗೆ ತಂದ ನಿಲುವಳಿ ಸೂಚನೆ ಮಾತಿನಲ್ಲಿಯೆ ಮುಕ್ತಾಯವಾಯಿತು.

ಮುಂಬಯಿ, ಯುಕ್ತಪ್ರಾಂತ, ಬಿಹಾರಗಳಲ್ಲಿ ಕಾಂಗ್ರೆಸ ಮಂತ್ರಿಮಂಡಳ

ಜನಸೇವೆಗಾಗಿ ಅಧಿಕಾರ ವಹಿಸಿದರು

ಮುಂಬಯಿ ಮಂತ್ರಿಮಂಡಳ

ಮುಂಬಯಿ ಪ್ರಾಂತದಲ್ಲಿ ಕಾಂಗ್ರೆಸು ಪ್ರಚಂಡ ಬಹುಮತ ಪಡೆದು ಆರಿಸಿ ಬಂದದ್ದರಿಂದ ಅದರ ಧುರೀಣರಾದ ಶ್ರೀ ಬಾಳಾಸಾಹೇಬ ಖೇರರು ಗವ್ಹರ್ನರರ ಆಮಂತ್ರಣದ ಮೇರೆಗೆ ಮಂತ್ರಿಮಂಡಳ ರಚಿಸಿರುವರು. ಅವರು ಮಂತ್ರಿಮಂಡಳ ರಚಿಸುವ ಮೊದಲು ಸರದಾರ ವಲ್ಲಭಭಾಯಿ ಪಟೇಲ, ಶಂಕರರಾವ ದೇವ ಮತ್ತು ಶ್ರೀ ರಂಗರಾವ ದಿವಾಕರ ಮೊದಲಾದ ಧುರೀಣರೊಡನೆ ಮಾತುಕತೆಯಾಡಿದರು. ಖೇರ ಸಾಹೇಬರ ಮಂತ್ರಿಮಂಡಳಕ್ಕೆ ಗವರ್ನರ ಸಾಹೇಬರ ಒಪ್ಪಿಗೆ ದೊರೆತಿದ್ದು ಪಾರ್ಲಮೆಂಟರಿ ಸೆಕ್ರೆಟರಿಗಳನ್ನೂ ಅವರು ಆರಿಸಿಕೊಂಡಿದ್ದಾರೆ.

ಮಂತ್ರಿಮಂಡಳ

೧) ಶ್ರೀ ಬಿ. ಜಿ. ಖೇರ, ಮುಂಬಯಿ ಮುಖ್ಯಮಂತ್ರಿ ರಾಜಕೀಯ ನೋಕರಿಖಾತೆ;

೨) ಮುರಾರಜಿ ದೇಸಾಯಿ ಅಹಮದಾಬಾದ (ಪೋಲೀಸ, ಕಂದಾಯ)

೩) ಡಾ. ಡಿ. ಡಿ. ಗಿಲ್ಡರ ಮುಂಬಯಿ (ಸಾರ್ವಜನಿಕ (ಆರೋಗ್ಯ; ಲೋಕೋಪಯೋಗಿ)

೪) ಶ್ರೀ ದಿನಕರರಾವ ದೇಸಾಯಿ ಭಡೋಚ (ಕಾಯದೆ ಮತ್ತು ಪೂರೈಕೆ)

೫) ವೈಕುಂಠಲಾಲ ಮೇಥಾ ಮುಂಬಯಿ (ಹಣಕಾಸು, ಗ್ರಾಮೋದ್ಯೋಗ, ಸಹಕಾರ)

೬) ಎಲ್. ಎಂ. ಪಾಟೀಲ ಅಹಮ್ಮದನಗರ (ಸ್ಥಾನಿಕ ಸ್ವರಾಜ್ಯ)

೭) ಗುಲಜಾರಿಲಾಲ ನಂದಾ ಅಹಮ್ಮದಾಬಾದ (ಕೂಲಿಕಾರ)

೮) ಎಂ ಪಿ. ಪಾಟೀಲ ಬೆಳಗಾವಿ (ಅರಣ್ಯ, ಒಕ್ಕಲತನ)

೯) ಗೋವಿಂದ ಡಿ ವರ್ತಕ ಠಾಣೆ (ಅಬಕಾರಿ ಪುನರ್ರಚನೆ)

೧೦) ಜಿ. ಡಿ. ತಪಾಸೆ (ಹರಿಜನ ಸಾತಾರಾ) ಉದ್ಯೋಗ ಮೀನಗಾರಿಕೆ ದಲಿತವರ್ಗ)

ಮುಸಲ್ಮಾನ ಮಂತ್ರಿಯ ಅಥವಾ ಮಂತ್ರಿಗಳ ಹೆಸರುಗಳನ್ನು ಅನಂತರ ಪ್ರಸಿದ್ಧಿಸಲಾಗುವದು.

ಪಾರ್ಲಮೆಂಟರಿ ಸೆಕ್ರೆಟರಿಗಳು

೧) ಕೆ. ಎಫ್. ಪಾಟೀಲ (ಧಾರವಾಡ)
೨) ಎಸ್. ಪಿ. ಗಾಂವಕರ (ಉತ್ತರ ಕನ್ನಡ)
೩) ಬ್ಯಾ. ಮಾನೆ ಬೆಳಗಾವಿ (ಹರಿಜನ)
೪) ಬಿ. ಎಂ. ಗುಪ್ತೆ (ಪುಣೆ)
೫) ಮಿಸ್ ಇಂದುಮತಿ ಶೇಟ (ಅಹಮದಾಬಾದ)
೬) ಯಶವಂತರಾವ ಚವ್ಹಾಣ (ಸಾತಾರಾ)
೭) ಡಿ. ಕೆ. ಕುಂಟೆ (ಕುಲಾಬಾ)
೮) ಡಿ. ಎನ್. ವಾಂಡ್ರೇಕರ (ಮುಂಬಯಿ)

ಇನ್ನೊಬ್ಬರನ್ನು ಹಿಂದಗಡೆ ನೇಮಿಸಿಕೊಳ್ಳಲಾಗುವದು. ಮಂತ್ರಿಗಳು ಯುಗಾದಿಯ ಶುಭ ಮುಹೂರ್ತದಲ್ಲಿ ಅಧಿಕಾರ ವಹಿಸಿಕೊಂಡರು. ಮೇಲಿನ ಯಾದಿಯನ್ನು ನೋಡಿದರೆ ಮಂತ್ರಿಮಂಡಳದಲ್ಲಿ ಮುಂಬಯಿಗೆ ೩ ಗುಜರಾಥಕ್ಕೆ ೩ ಮಹಾರಾಷ್ಟ್ರಕ್ಕೆ ೩ ಮತ್ತು ಕರ್ನಾಟಕಕ್ಕೆ ೧ ಹೀಗೆ ಸ್ಥಳಗಳು ದೊರೆತಂತಾಗಿದೆ ಪಾರ್ಲಮೆಂಟರಿ ಸ್ಥಳಗಳಲ್ಲಿ ಕರ್ನಾಟಕಕ್ಕೆ ೩ ಮಹಾರಾಷ್ಟ್ರಕ್ಕೆ ೩ ಮುಂಬಯಿಗೆ ೧ ಮತ್ತು ಗುಜರಾಥಕ್ಕೆ ೧ ಹೀಗೆ ದೊರತಿವೆ.

ಸಂಯುಕ್ತಪ್ರಾಂತ

ಸಂಯುಕ್ತಪ್ರಾಂತದಲ್ಲಿ ಗವರ್ನರರ ಇಚ್ಛೆಯ ಮೇರೆಗೆ ಕಾಂಗ್ರೆಸ ಪಕ್ಷದ ಧುರೀಣರಾದ ಪಂಡಿತ ಗೋವಿಂದ ವಲ್ಲಭಪಂತರು ಕೆಳಗಿನಂತೆ ಮಂತ್ರಿಮಂಡಳ ರಚಿಸಿಕೊಂಡಿರುವರು.

೧) ಪಂ. ಗೋವಿಂದ ವಲ್ಲಭಪಂತ ಮುಖ್ಯಮಂತ್ರಿ, ಸಾಮಾನ್ಯ ಆಡಳಿತೆ ಹಣಕಾಸು ಪೂರೈಕೆ ಸೀದಾ

೨) ರಫಿ ಅಹಮ್ಮದ ಕಿದ್ವಾಯಿ ಕಂದಾಯ ಜೇಲು, ಪೋಲೀಸ

೩) ಡಾ. ಕೈಲಾಸನಾಥ ಕಟಜೂ ನ್ಯಾಯ ಅಬಕಾರಿ ಉದ್ಯೋಗ, ಒಕ್ಕಲತನ, ಸಹಕಾರ, ಪಶುಸಂವರ್ಧನ ಅಭಿವೃದ್ಧಿ

೪) ಶ್ರೀಮತಿ ವಿಜಯಲಕ್ಷ್ಮಿ ಪಂಡಿತ ಸ್ಥಾನಿಕ ಸ್ವರಾಜ್ಯ ಆರೋಗ್ಯ

೫) ಹಾಫೀಜ ಅಹಮ್ಮದ ಇಬ್ರಾಹಿಮ ಅರಣ್ಯ ಹಾಗು ಮಾರ್ಗ ಸೌಕರ್ಯ

೬) ಸ್ವಾಮಿ ಸಂಪೂರ್ಣಾನಂದ ಶಿಕ್ಷಣ ಹಾಗು ಅರ್ಥಿಕ

ಎಪ್ರಿಲ ೧ ನೇ ತಾರೀಖಿನ ದಿನ ಈ ಮಂತ್ರಿಗಳು ಅಧಿಕಾರ ವಹಿಸಿಕೊಂಡರು.

ಬಿಹಾರ

ಬಿಹಾರ ಶಾಸನ ಸಭೆಯಲ್ಲಿ ಕಾಂಗ್ರೆಸ ಪಕ್ಷದ ಧುರೀಣರಾದ ಶ್ರೀ ಶ್ರೀಕೃಷ್ಣಸಿಂಹರು ಗವರ್ನರರ ಇಚ್ಛೆಯ ಮೇರೆಗೆ ತಮ್ಮ ಮಂತ್ರಿಮಂಡಳವನ್ನು ರಚಿಸಿಕೊಂಡರು.

೧) ಶ್ರೀಕೃಷ್ಣಸಿಂಹ
೨) ಶ್ರೀ ಅನುಗ್ರಹನಾರಾಯಣಸಿಂಹ
೩) ಡಾ. ಸಯ್ಯದ ಮಹಮ್ಮೂದ
೪) ಜಗಲಾಲ ಚೌಧರಿ

ಇದರಲ್ಲಿ ಮೊದಲಿನ ಮೂವರು ಕೂಡಲೆ ಅಧಿಕಾರ ವಹಿಸಿದರು. ಕೊನೆಯವರಾದ ಶ್ರೀ ಜಗಲಾಲ ಚೌಧರಿಯವರು ತುರಂಗದಿಂದ ಬಿಡುಗಡೆ ಹೊಂದಿದ ಬಳಿಕ ಅಧಿಕಾರ ವಹಿಸಿಕೊಂಡರು.

ಕಾಂಗ್ರೆಸ್ ಚುನಾವಣೆಗಳ ಕಾರ್ಯದ ನಿಮಿತ್ತ ಬೆಂಗಳೂರಿಗೆ ಬಂದಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಂ ಪಿ ಪಾಟೀಲರು ಬೆಂಗಳೂರಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಒತ್ತಿ ಹೇಳಿ ಅದಕ್ಕೆ ಪತ್ರಿಕೆಗಳೂ ಸಾರ್ವಜನಿಕರೂ ಸಹಕಾರ ನೀಡಬೇಕೆಂದು ಕೇಳಿಕೊಂಡರು. ಮೈಸೂರು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಹೊಣೆಗಾರ ಸರಕಾರದ ಬೇಡಿಕೆಯನ್ನು ಕುರಿತು ಮಾತಾಡಿದರು. ಸಭೆಯ ಅಧ್ಯಕ್ಷರಾಗಿದ್ದ "ತಾಯಿನಾಡು" ಪತ್ರಿಕೆಯ ಶ್ರೀ. ಪಿ ಆರ್ ರಾಮಯ್ಯನವರು ಪತ್ರಿಕೆಗಳ ಸಹಕಾರದ ಭರವಸೆಯನ್ನು ಶ್ರೀ ಪಾಟೀಲರಿಗಿತ್ತರು.

ಬೆಂಗಳೂರಿನ ಶ್ರೀ ಚಾಮರಾಜೇಂದ್ರ ವೇದ ಮಹಾಪಾಠ ಶಾಲೆಯ ಗೀರ್ವಾಣ ವಿದ್ಯಾಭಿವೃದ್ಧಿನೀ ಸಭೆಯ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನದಿಂದ ಶ್ರೀ ಜಿ ವಿ ಗುಂಡಪ್ಪನವರು ಸಂಸ್ಕೃತ ವಿದ್ಯೆಯನ್ನು ಅಭಿವೃದ್ಧಿಗೊಳಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಬೇಸಿಗೆಯಲ್ಲಿ ಅಲ್ಪಾವಧಿಯಲ್ಲಿ ಬೆಳೆ ಬಿಡತಕ್ಕಗಿಡ್ಡ ರಾಗಿ, ಜೋಳ ಮೊದಲಾದವುಗಳನ್ನು ಹೆಚ್ಚಾಗಿ ಬೆಳೆಸುವ ರೈತರಿಗೆ ಬೋನಸ್ ಕೊಡುವ ವಿಚಾರ ಸರಕಾರದ ಪರಿಶೀಲನೆಯಲ್ಲಿರುವದೆಂಬ ಅಂಶವನ್ನು ಮೈಸೂರು ಸಂಸ್ಥಾನದ ಆಹಾರ ಪೂರೈಕೆಯ ನಿರ್ದೇಶಕ ಶ್ರೀ ಜಿ. ಸುಂದರರಾಯರು ಬೆಂಗಳೂರು ಜಿಲ್ಹಾ ಸಮ್ಮೇಲನದಲ್ಲಿ ನಡೆದ ಆಹಾರ ಚರ್ಚೆಯ ಕಾಲಕ್ಕೆ ಹೊರಗೆಡಹಿದರು.

ಅಂತರ್‌ರಾಷ್ಟ್ರೀಯ

ರಶಿಯಾದ ಸಭಾತ್ಯಾಗ

ಹಿಂದುಸ್ಥಾನದ ಶಾಸನ ಸಭೆಗಳಲ್ಲಿ ಒಮ್ಮೊಮ್ಮೆ ಕಾಣಬರುವ ಸಭಾತ್ಯಾಗದ ದೃಶ್ಯ ಕಳೆದವಾರ ಅಂತರ್‌ರಾಷ್ಟ್ರೀಯ ಭದ್ರತಾ ಮಂಡಲದ ಸಭೆಯಲ್ಲಿಯೂ ಅಭಿನಯಿಸಲ್ಪಟ್ಟಿತು. ಇರಾಣ-ರಶಿಯಾಗಳಲ್ಲಿ ಒಪ್ಪಂದವಾಗಿದೆಯೆಂಬ ಹೇಳಿಕೆ ಕೊಟ್ಟು, ಆ ಪ್ರಶ್ನೆಯ ಚರ್ಚೆಯನ್ನೇ ನಿಲ್ಲಿಸಬೇಕೆಂಬ ಪ್ರಯತ್ನದಲ್ಲಿ ಸೋತ ಸೋವಿಯಟ್ ಪ್ರತಿನಿಧಿ ಗ್ರೋಮಿಕೋ ಅವರು ಈ ವಿಷಯದ ಚರ್ಚೆಯನ್ನು ಎಪ್ರಿಲ ೧೦ ರ ವರೆಗಾದರೂ ಮುಂದಕ್ಕೆ ಹಾಕಬೇಕೆಂಬ ರಶಿಯಾದ "ಕನಿಷ್ಠ ಬೇಡಿಕೆ"ಗೂ ಸಮ್ಮತಿಯನ್ನು ಗಳಿಸಲು ಅಸಮರ್ಥರಾದ ಮೇಲೆ, ರಶಿಯನ್ ಪ್ರತಿನಿಧಿಗಳು ಭದ್ರತಾ ಮಂಡಲದ ಸಭೆಯಿಂದ ಸಾಲಾಗಿ ಹೊರಬಿದ್ದರು. ಯುಕ್ತರಾಷ್ಟ್ರ ಸಂಘದಿಂದಲೇ ರಶಿಯಾ ಹೊರಬಿದ್ದುಹೋಗಬಹುದೆಂಬ ಭೀತಿಗೆ ಪುಷ್ಟಿ ದೊರೆತಿಲ್ಲವಾದರೂ ಇರಾಣ ಪ್ರಶ್ನೆಯ ಚರ್ಚೆ ನಡೆದಿರುವಾಗ ಅದು ಮಂಡಲದಲ್ಲಿ ಭಾಗವಹಿಸುವದಿಲ್ಲೆಂದು ನಿರ್ಧರಿಸಿದೆ. ಆದರೆ ಆಂಗ್ಲೋ ಅಮೇರಿಕನ್ನರು ಈ ಬೆದರಿಕೆಗೆ ಜಗ್ಗಲಿಲ್ಲ. ಇರಾಣ ಪ್ರತಿನಿಧಿಯಾದ ಡಾ. ಹುಸೇನ ಅಲಾ ಅವರನ್ನು ಪ್ರಶ್ನೆಯನ್ನು ಮುಂದೆಹಾಕಲು ಆಕ್ಷೇಪವಿದೆಯೇನೆಂದು ಕೇಳಲಾಯಿತು. "ವಿಷಯ ಅವಸರದ್ದು", ರಶಿಯನ್ ಸೇನೆಗಳ ಅಸ್ತಿತ್ವದಿಂದ ಇರಾಣದ ಆಂತರಿಕ ಪರಿಸ್ಥಿತಿ ಬಿಕ್ಕಟ್ಟಿಗ ಬಂದಿದೆ, ಪರಿಸ್ಥಿತಿ "ಸ್ಫೋಟೋನ್ಮುಖವಾಗಿದೆ" ಎಂದು ಡಾ. ಅಲಾ ಹೇಳಿದರು. ಇರಾಣ — ಸೋವಿಯೆಟ್ ಒಪ್ಪಂದವಾದ ವಿಚಾರ ಅವರಿಗೆ ಗೊತ್ತಿದ್ದಿಲ್ಲ. ಆದುದರಿಂದ ರಶಿಯಾ-ಇರಾಣ ಪ್ರಶ್ನೆಯ ಚರ್ಚೆಯಲ್ಲಿ ಅನುಸರಿಸಬೇಕಾದ ಕ್ರಮವನ್ನು ಭದ್ರತಾ ಮಂಡಳ ಗುಟ್ಟಿನ ಅಧಿವೇಶನವೊಂದರಲ್ಲಿ ನಿರ್ಣಯಿಸಲಾಯಿತು. ದಂಡನಾಯಕ ಸ್ಟಾಲಿನ್ನರಿಗೆ ಭದ್ರತಾ ಮಂಡಲದ ವಿನಂತಿಗಳು ಹೋಗಿವೆ. ಉಭಯ ಪಕ್ಷದವರೂ ಇದೇ ಬುಧವಾರ (ತಾ. ೩) ದೊಳಗೆ ಪರಸ್ಪರ ಒಪ್ಪಂದದ ಮಾತುಕತೆಗಳ ವಿವರಗಳನ್ನು, ಲಂಡನ್ ಅಧಿವೇಶನದಲ್ಲಿ ಭದ್ರತಾ ಮಂಡಲ ಮಾಡಿದ ನಿರ್ಣಯದ ಪ್ರಕಾರ, ವರದಿ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ಅಷ್ಟರಲ್ಲಿ ರಶಿಯಾ ಉತ್ತರ ಕಳಿಸದಿದ್ದರೆ, ಏಕಪಕ್ಷೀಯವಾಗಿ ವಿಚಾರ ಮಾಡಿ ರಶಿಯನ್ ಕ್ರಿಯೆಯನ್ನು ಖಂಡಿಸುವ ಗೊತ್ತುವಳಿಯೊಂದನ್ನು ಭದ್ರತಾ ಮಂಡಲ ಪಾಸುಮಾಡಬಹುದು. ಆ ಮೇಲೆ ಏನು ?— ಯಾರಿಗೂ ಗೊತ್ತಿಲ್ಲ.

ಈ ನಡುವೆ ಭದ್ರತಾಮಂಡಲದವರು ಅತಿರೇಕಕ್ಕೆ ಹೋಗಬಾರದೆಂಬ ಎಚ್ಚರಿಕೆಗಳು ಅನೇಕ ಕಡೆಗಳಿಂದ ಬರತೊಡಗಿವೆ. ಆಸ್ಟ್ರೇಲಿಯಾದ ಮುಖ್ಯಮಂತ್ರಿ ಡಾ. ಇವಾಟರು ರಶಿಯಾವನ್ನು ಅಪರಾಧಿಯ ಕಟಾಂಜನದಲ್ಲಿ ನಿಲ್ಲಿಸಿ ಭದ್ರತಾಮಂಡಲದಲ್ಲಿ ಒಡಕುಂಟುಮಾಡಬಾರದೆಂದು ಪ್ರಾರ್ಥಿಸಿಕೊಂಡಿದ್ದಾರೆ. ರಶಿಯಾಕ್ಕೆ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದು ಅವರು ಕೇಳಲಿಲ್ಲ. ಆದರೆ ಈ ಮಹಾಯುದ್ಧದ ಇತರ ಮಿತ್ರ-ಸಹಯೋಗಿಗಳಿಗಿತ್ತಷ್ಟನ್ನಾದರೂ ರಶಿಯಾಕ್ಕೆ ಕೊಡಬೇಕೆಂದು ಅವರು ಅಭಿಪ್ರಾಯಪಟ್ಟಿರುವರು.

ವಿರೋಧಾಭಾಸ

ಇರಾಣ ಸರಕಾರ ಕೈಕೊಂಡ ವೃತ್ತಿಯಲ್ಲಿ ಒಂದು ಬಗೆಯ ವಿರೋಧಾಭಾಸ ಕಾಣಬರುತ್ತದೆ. ರಶಿಯನ್ ಪಡೆಗಳು ವೇಗವಾಗಿ ರಶಿಯಾದಿಂದ ಹಿಂದೆ ಹೋಗುತ್ತಿವೆಯೆಂದು ಅಧಿಕೃತವಾಗಿ ಇರಾಣ ವರ್ಗಗಳು ಹೇಳುತ್ತಿವೆ. ಅನೇಕ ಪ್ರಮುಖ ನಗರಗಳನ್ನು ಅವು ಈಗಾಗಲೆ ತೆರವು ಮಾಡಿರುವವಲ್ಲದೆ ಅಝುರಬೈಜಾನದ ರಾಜಧಾನಿ ತಾಬ್ರಿಝು ನಗರವನ್ನು ತೆರೆವುಮಾಡುವ ಸಿದ್ಧತೆ ಸ್ಪಷ್ಟವಾಗಿ ಗೋಚರಿಸುತ್ತಿವೆಯೆಂದು ಇರಾಣದಲ್ಲಿನ ಅಮೇರಿಕನ್ ರಾಯಭಾರಿಗೃಹದ ವಕ್ತಾರನು ಒಪ್ಪಿಕೊಂಡಿದ್ದಾನೆ. ಆದರೆ ಭದ್ರತಾ ಮಂಡಲದಲ್ಲಿ ಇರಾಣದ ಪ್ರತಿನಿಧಿಯಾಗಿರುವ ಅಮೇರಿಕದಲ್ಲಿನ ರಾಯಭಾರಿ ಡಾ. ಹುಸೇನ ಅಲಾ ಹೇಳುವರೆ- ರಶಿಯನ್ ಪಡೆಗಳನ್ನು ತೆರವು ಮಾಡಲು ಅವಧಿಯನ್ನೇನೂ ಹಾಕಿಕೊಂಡದ್ದು ತನಗೆ ಗೊತ್ತಿಲ್ಲವೆಂದು. ರಶಿಯನ್ನರ ವಿರುದ್ಧವಾಗಿ ಭದ್ರತಾ ಮಂಡಲದ ಮುಂದೆ ಆಲಾ ಅವರು ಮಂಡಿಸಿದ ಕೆಲ ವಿಧಾನಗಳನ್ನು ಇರಾಣದ ಸರಕಾರಿ ವಕ್ತಾರ-

-ರಾದ ರಾಜಕುಮಾರ ಮುಝಪ್ಫರ ಫಿರೋಜರು ಅಲ್ಲಗಳೆದಿದ್ದಾರೆ. ಇದರಿಂದ ಭದ್ರತಾ ಮಂಡಲದವರ ಮನಸ್ಸಿನಲ್ಲಿಯೇ ಆಲಾ ಅವರ ಸ್ಥಾನಮಾನದ ಬಗ್ಗೆ ಸಂಶಯ ಹುಟ್ಟುವಂತಾಗಿ ಅವರು ವಿವರಕ್ಕಾಗಿ ಇರಾಣ ಮುಖ್ಯಮಂತ್ರಿ ಸುಲ್ತಾನೆಗೆ ಬರೆದರು. ಸುಲ್ತಾನೆಯವರು ಆಲಾ ಅವರ ಅಧಿಕೃತ ಸ್ಥಾನಮಾನವನ್ನು ಪುನರುಲ್ಲೇಖಿಸಿ ಉತ್ತರ ಬರೆದಿರುವರೆಂದು ತಿಳಿಯುತ್ತದೆ. ಒಟ್ಟಿನಮೇಲೆ ಇರಾಣದ ರಾಜಕಾರಣಿಗಳಲ್ಲಿ ಈಗಾಗಲೆ ರಶಿಯಾ ಬಿತ್ತಿದ ಭಿನ್ನತೆ ಫಲಬಿಡುವಂತೆ ತೋರುತ್ತದೆ.

ರಶಿಯಾ ಬೇಡಿದ್ದೇನು ?

ಇರಾಣದಿಂದ ರಶಿಯಾ ಏನು ಬೇಡಿತ್ತು ಮತ್ತು ಏಕೆ ರಶಿಯಾ-ಇರಾಣ ಒಪ್ಪಂದ ಪ್ರಯತ್ನ ವಿಫಲವಾಯಿತು ? ಎಂಬುದಕ್ಕೆ ಹುಸೇನ ಆಲಾ ಅವರ ಭದ್ರತಾ ಮಂಡಲದ ಮುಂದೆ ಮಾಡಿದ ಹೇಳಿಕೆಯಿಂದ ಕೆಲಮಟ್ಟಿಗೆ ಉತ್ತರ ದೊರೆತಿದೆ. ಉತ್ತರ ಇರಾಣದ ಎಣ್ಣೆಗಳಿಗಳ ಬೇಡಿಕೆಯನ್ನು ರಶಿಯಾ ಬಿಟ್ಟುಕೊಟ್ಟು ರಶಿಯಾ-ಇರಾಣ ಪಾಲುಗಾರಿಕೆಯ ಎಣ್ಣೆ ಕಂಪನಿಯನ್ನು ಸ್ಥಾಪಿಸಬೇಕು, ಅದರಲ್ಲಿ ೧೦೦ ಕ್ಕೆ ೪೯ ಪಾಲುಗಳು ಇರಾಣಕ್ಕೆ, ೫೧ ಪಾಲು ರಶಿಯಾಕ್ಕಿರಬೇಕು. ಇರಾಣದ ಕೆಲ ಭಾಗಗಳಲ್ಲಿ ಒಂದು ನಿರ್ದಿಷ್ಟ ಅವಧಿಯ ವರೆಗೆ ರಶಿಯನ್ ಪಡೆಗಳು ಇರಲು ಬಿಡಬೇಕು ಮತ್ತು ಅಝುರಬೈಜಾನದ ಸ್ವಾಯತ್ತತೆಯನ್ನು ಅಂಗೀಕರಿಸಬೇಕು. ಇವು ರಶಿಯಾದ ಪ್ರಮುಖ ಬೇಡಿಕೆಗಳಾಗಿದ್ದವು. ಇವು ಇರಾಣದ ಸಾರ್ವಭೌಮಾಧಿಕಾರಕ್ಕೆ ವಿರುದ್ಧವಾಗಿರುವವರಿಂದ ಅವುಗಳನ್ನು ನಿರಾಕರಿಸಲಾಯಿತೆಂದು ಡಾ. ಆಲಾ ಅವರು ತಿಳಿಸಿದರು.

ಜರ್ಮನಿಯಲ್ಲಿ ನಾಜೀ ಒಳಸಂಚು

ನ್ಯುರೆಂಬರ್ಗದಲ್ಲಿ ನಾಜೀ ಪ್ರಮುಖರ ಹಿರಿ— ವಿಚಾರಣೆ ನಡೆಯುತ್ತಿರುವಾಗಲೆ ಜರ್ಮನಿಯ ಮೇಲೆ ಮಿತ್ರ ದಂಡುಗಳ ಉಕ್ಕಿನ ಹಿಡಿ ಜಡಿದಿರುವಾಗಲೆ, ಸತ್ತು ಮಣ್ಣು ಮುಕ್ಕಿದೆಯೆಂದು ನಂಬಲಾಗಿದ್ದ ಜರ್ಮನ್ ನಾಜೀ ಪಕ್ಷ ಸಜೀವವಾಗಿದ್ದು ಮುಷ್ಟಿ ಬೀಸುತಿರುವ ಸಂಜ್ಞೆಗಳು ಕಳೆದ ವಾರ ಕಾಣಿಸಿಕೊಂಡವು. ಅಮೇರಿಕನ್ ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆ ಹಂಚಿದ ಸುದ್ದಿಗನುಸಾರವಾಗಿ "ಒಂದು ಪ್ರಬಲ, ವಿಪುಲ ಧನಸಹಾಯವುಳ್ಳ ಒಳಸಂಚಿನ ಪ್ರಯತ್ನವನ್ನು" ಜರ್ಮನ್ ನಾಜಿಗಳು ನಡೆಸಿದ್ದರು. ಬ್ರಿಟಿಶ, ಅಮೇರಿಕನ್, ರಶಿಯನ ಪಡೆಗಳ ವಿರುದ್ಧ ಗುರಿಯಿಟ್ಟು ಆ ಒಳಸಂಚು ನಡೆದಿತ್ತು. ಇದನ್ನು ಕಂಡುಹಿಡಿದು ಮಿತ್ರ ಪಡೆಗಳು ಆಸ್ಟ್ರಿಯಾ ಜರ್ಮನಿಗಳಲ್ಲಿ ಮಾಡಿದ ಝಡತಿ ಸತ್ರದ ಫಲವಾಗಿ ೧೦೦೦ ಕ್ಕಿಂತಲೂ ಮಿಕ್ಕಿ ಜರ್ಮನ ನಾಜಿಗಳು ಸೆರೆಸಿಕ್ಕಿದ್ದಾರೆ. ಒಳಸಂಚಿನಲ್ಲಿ ಜರ್ಮನ್ ಹುಡಿಗಿಯರ ಚಳವಳಿಯ ಸಂಸ್ಥೆಯ ಕೈಯೂ ಇರುವಂತೆ ಕಾಣುತ್ತದೆ. ಬಂಧಿಸಲ್ಪಟ್ಟವರಲ್ಲಿ ೨೦೦ ಜನ ಸೂತ್ರಚಾಲಕ ನಾಜೀ ಪ್ರಮುಖರೂ ಇರುವರೆಂದು ತಿಳಿದುಬಂದಿದೆ. ಈ ಒಳಸಂಚುಗಾರರೊಡನೆ ನೂರಾರು ಸಶಸ್ತ್ರ ಮೋಟರವಾಹನಗಳೂ ಇದ್ದುದು ಕಂಡುಬಂದಿದೆ.

ಕೆಲ ವಾರಗಳ ಹಿಂದೆ ಅಮೇರಿಕನ್ ಪತ್ರಿಕೆಗಳಲ್ಲಿ ಬವೇರಿಯನ್ ಆಲ್ಪ್ಸ ಪರ್ವತಗಳ ಒಂದು ಇಕ್ಕಟ್ಟಿನ ಗುಡ್ಡದ ಮೇಲೆ ನಾಜೀ ಹಟವಾದಿಗಳ ಪ್ರಬಲ ಸೈನ್ಯವೊಂದು ಇನ್ನೂ ಶರಣಾಗತವಾಗದೆ ಉಳಿದಿದೆಯೆಂದೂ ಅದು ವ್ಯಾಪಿಸಿರುವ ಗುಡ್ಡ ಬಹಳ ಆಯಕಟ್ಟಿನದಿದ್ದುದರಿಂದ ಮಿತ್ರರು ಅದನ್ನು ವಿಮಾನ ಮೂಲಕ ಕೂಡ ಹಣಿಯಲಾರದೆ ಹೋಗಿರುವರೆಂದೂ ಪ್ರಸಿದ್ಧವಾಗಿತ್ತು. ಜರ್ಮನಿಯಲ್ಲಿ ನಾಜಿಗಳ ಗುಪ್ತ ಚಳವಳಿ ಇನ್ನೂ ಅಳಿದಿಲ್ಲ. ಹಿಟ್ಲರನು ಇನ್ನೂ ಜೀವಂತನಾಗಿರುವನೆಂಬ ನಂಬಿಕೆ ಆ ಚಳವಳಿಗೆ ಇನ್ನಷ್ಟು ಧೈರ್ಯವನ್ನು ಕೊಟ್ಟಿದೆ.

ಇಂಡೋನೇಶಿಯಾದಲ್ಲಿ ಒಪ್ಪಂದ ?

ದೀರ್ಘ ಕಾಲದ ಮಾತುಕತೆಗಳ ನಂತರ ಇಂಡೋನೇಶಿಯನ್ ಮುಂದಾಳುಗಳಿಗೂ ಡಚ್ ಗವರ್ನರ ಡಾ. ವಾನ ಮೂಕರಿಗೂ ಸಾಧಾರಣ ಒಡಂಬಡಿಕೆಯಾಗಿದೆಯೆಂದು ವರದಿಗಳು ಹೇಳುತ್ತವೆ. ಇಂಡೋನೇಶಯನ್ ತೀವ್ರಗಾಮಿಗಳು ಬ್ರಿಟಿಶ ಮತ್ತು ಡಚ್ ಪಡೆಗಳ ಮೇಲೆ ಆಗಾಗ ಎರಗಿ ಹೋಗುತ್ತಿದ್ದರೂ ಡಚ್-ಇಂಡೋನೇಶಿಯನ್ ಮಾತುಕತೆಗಳ ಪ್ರಗತಿ ಕುಂಠಿತವಾಗದೆ ಈಗ ಒಂದು ಔಪಚಾರಿಕ ಐಕಮತ್ಯವುಂಟಾಗಿದೆ. ಪರಿಣಾಮತಃ ಈ ಮಾತುಕತೆಗಳಿಗೆ ಮೂರ್ತರೂಪವನ್ನು ಕೊಡಲು ಡಚ್ ಗವರ್ನರ ಡಾ. ವಾನ್ ಮೂಕರು ಹಾಲಂಡಿಗೆ ಹೊರಟು ನಿಂತಿದ್ದಾರೆ. ಅವರ ಜತೆ ಬ್ರಿಟಿಶ ಪ್ರತಿನಿಧಿ ಆರ್ಚಿಬಾಲ್ಡ ಕ್ಲಾರ್ಕ ಕರ್‌ರೂ ಮೂವರು ಇಂಡೋನೇಶಿಯನ್ ಮಂತ್ರಿಗಳೂ ಹಾಲಂಡಿಗೆ ತೆರಳುವವರಿದ್ದಾರೆ. ಇಂಡೋನೇಶಿಯನ್ ಮಂತ್ರಿಮಂಡಲದ ಪ್ರತಿನಿಧಿಗಳಿಗೆ ಡಾ. ಸುಲ್ತಾನ ಶರೀಫ-ಹಮೀದರು ಪ್ರಮುಖರಾಗುವರು. ಅವರಿಗೆ ಡಚ್ ರಾಣಿಯೊಡನೆ ಯಾವ ಒಪ್ಪಂದ ಮಾಡಿಕೊಳ್ಳುವ ಅಧಿಕಾರವನ್ನೂ ಕೊಡಲಾಗಿಲ್ಲ. ಅವರು ಇಂಡೋನೇಶಿಯನ್ ದೃಷ್ಟಿಕೋನವನ್ನಷ್ಟೆ ಡಚ್ ರಾಣಿಯ ಮುಂದಿಡುವರು.

ಈಗ ಆಗಿರುವ ಒಡಂಬಡಿಕೆಗಳ ಪೂರ್ಣ ವಿವರಗಳಿನ್ನೂ ಹೊರಬಿದ್ದಿಲ್ಲವಾದರೂ ಒಪ್ಪಂದ ಹೆಚ್ಚು ಕಡಿಮೆ ಪೂರ್ಣವಾಗಿದ್ದು ಬರಿ "ಸಡಿಲು ನೂಲುಗಳನ್ನು ಎಳೆದು ಬಿಗಿಯುವದಷ್ಟೆ ಉಳಿದಿದೆ"ಯೆಂದು ಹೇಳಲಾಗಿದೆ. ಇಂಡೋನೇಶಿಯಾದ ಸದ್ಯದ ಸರಕಾರಕ್ಕೆ ಅಂಗೀಕಾರ ಕೊಡಲಾಗುವದೆಂದು ಹೇಳಲಾಗಿದೆ. ಅರ್ಥಾತ್ ಇಂಡೋನೇಶಿಯಾವನ್ನು ಪ್ರಜಾಸ್ವಾಮ್ಯವೆಂದು ಡಚ್ಚರು ಒಪ್ಪಿಕೊಳ್ಳಬಹುದು. "ನಿಶ್ಚಿತವಾದ ಆರ್ಥಿಕ ಪ್ರಯೋಜನಗಳನ್ನು ಸಂಪಾದಿಸಿಕೊಳ್ಳಲು ಡಚ್ ರಾಣಿ ಕೆಲವೊಂದು ಭಾವನೆಗಳನ್ನು ಬಲಿಕೊಡಬೇಕಾಗುವದು" ಎಂದು ಡಾ. ಶಾಯಾರರ ಮಂತ್ರಿಮಂಡಲದ ಸದಸ್ಯರೊಬ್ಬರು ಹೇಳಿದರು. ಇದಕ್ಕೆ ಡಚ್ ಸಾಮ್ರಾಜ್ಯದಿಂದ ಇಂಡೋನೇಶಿಯಾ ಹೊರಬಿದ್ದು ಸ್ವತಂತ್ರವಾಗುವದೆಂದೂ ಅದಕ್ಕೆ ಬದಲು ಡಚ್ಚರಿಗೆ ಕೆಲವೊಂದು ಆರ್ಥಿಕ ಸವಲತ್ತುಗಳನ್ನು ಕೊಡಲಾಗುವದೆಂದೂ ತಿಳಿದುಕೊಳ್ಳಬಹುದು.

ಇತ್ತ ಹೊರಟುಹೋಗುತ್ತಿರುವ ಹಿಂದೀ ಸೈನಿಕರ ಸ್ಥಾನದಲ್ಲ ಸಾವಿರಾರು ಡಚ್ ಸೈನಿಕರನ್ನು ಇಂಡೋನೇಶಿಯಾದಲ್ಲಿ ತಂದಿಳಿಸಲಾಗುತ್ತಿದೆ. ಬ್ರಿಟಿಶ ಪಡೆಗಳೂ ಬೇಗನೆ ಅಲ್ಲಿಂದ ಕಾಲ್ದೆಗೆಯಬಹುದು. ಇವೆಲ್ಲ ಬಹಳಮಟ್ಟಿಗೆ ಡಾ. ಶಾರಿಯಾರರ ಸರಕಾರದ ಸಮ್ಮತಿಯಿಂದಲೆ ನಡೆಯುತಿರುವಂತೆ ತೋರುತ್ತದೆ. ತೀವ್ರಗಾಮಿ ಇಂಡೋನೇಶಿಯನ್ನರ ವಿರುದ್ಧ ತೀಕ್ಷ್ಣ ಕಾರ್ಯಕ್ರಮಗಳನ್ನು ಶಾರಿಯಾರರು ಕೈಕೊಳ್ಳುತಿರುವದನ್ನು ನೋಡಿದರೆ ಇಂಡೋನೇಶಿಯಾದ "ಬಲ" ಪಕ್ಷದವರಿಗೆ ಸಮ್ಮತವಾದ ಒಪ್ಪಂದವನ್ನು ಡಚ್ಚರೊಡನೆ ಮಾಡಿಕೊಳ್ಳುವದು ಸಾಧ್ಯವೆಂದು ಅವರಿಗನಿಸಿದಂತೆ ತೋರುತ್ತದೆ. ಆದುದರಿಂದಲೇ ಅವರು ಶಾಂತಿ ಸುವ್ಯವಸ್ಥೆಗಳಿಗಾಗಿ ನಿಷ್ಠುರ ಕ್ರಿಯೆಯನ್ನು ಕೈಕೊಳ್ಳಲು ಸಿದ್ಧರಾಗಿರಬೇಕು.

ಗ್ರೀಕ ಚುನಾವಣೆಗಳು

ಮಾರ್ಚ ೩೧ಕ್ಕೆ ಗ್ರೀಸದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಗಿದವು. ಆಂಗ್ಲೋ-ಅಮೇರಿಕನ್ ಪರಿಶೀಲನೆಯಲ್ಲಿ ಜರಗಿದ ಈ ಚುನಾವಣೆಗಳು "ನಿಷ್ಪಕ್ಷಪಾತ"ತೆಯ ಹೊದಿಕೆ ಹೊದ್ದಿದ್ದವು. ಚುನಾವಣೆಯಲ್ಲಿ ಅಪ್ರಿಯ ಸನ್ನಿವೇಶಗಳೊದಗದಂತೆ ಬಲವಾದ ಸೈನಿಕ ಕಾವಲು ಇಡಲ್ಪಟ್ಟಿದ್ದರೂ ಅಲ್ಲಲ್ಲಿ ಅಲ್ಪ ಸ್ವಲ್ಪ ರಕ್ತಪಾತವಾಗದೆ ಇರಲಿಲ್ಲ. ತೀವ್ರಗಾಮಿ ಪಕ್ಷಗಳೆಲ್ಲದರ ಸಂಯುಕ್ತ ಪಕ್ಷವಾದ "ಈಮ್" ಪಕ್ಷ ಚುನಾವಣೆಗಳನ್ನು ಬಹಿಷ್ಕರಿಸಿತ್ತು. ಚುನಾವಣೆ ಮುಂದೆ ಹಾಕಿಸಲು ಅದು ಮಾಡಿದ ವ್ಯರ್ಥ ಪ್ರಯತ್ನದ ನಂತರ ಈ ಹಾದಿಯನ್ನು ಅದು ಅನುಸರಿಸಿತ್ತು. ಪ್ರಬಲ ಎಡಪಕ್ಷಗಳು ಬಹಿಷ್ಕರಿಸಿದ ಚುನಾವಣೆಯ ಫಲಿತಾಂಶ ಕಟ್ಟಿಟ್ಟದ್ದೇ ಆಗಿತ್ತು. ರಾಜಸತ್ತಾವಾದಿ ಪಕ್ಷವಾದ ಪಾಪ್ಯುಲಿಸ್ಟ ಪಕ್ಷದವರಿಗೆ ನಿರೀಕ್ಷಿಸಿದಂತೆ ವಿಜಯವಾಯಿತೆಂದು ವರದಿಗಳಿಂದ ತಿಳಿಯುತ್ತದೆ. ಏಕೆಂದರೆ ಈಮ ಪಕ್ಷದ ಅನುಪಸ್ಥಿತಿಯಲ್ಲಿ ಅದನ್ನು ಎದುರಿಸಲು ಸಮರ್ಥವಾದ ಪಕ್ಷ ಬೇರೊಂದಿರಲಿಲ್ಲ. ಉದಾರ (ಲಿಬರಲ್) ಪಕ್ಷಕ್ಕೂ ಕೆಲ ಸ್ಥಾನಗಳು ದೊರೆತಿವೆ. ಉಗ್ರ ರಾಜಸತ್ತಾ ಪಕ್ಷವಾದ ಫ್ಯಾಸಿಸ್ಟ ಮನೋವೃತ್ತಿಯ "ಎಕ್ಸ್" ಪಕ್ಷಕ್ಕೆ ಒಳ್ಳೆಯ ದೈವ ಕಣ್ಣು ತೆರೆಯಲಿಲ್ಲ. ಚುನಾವಣೆಗಳ ಫಲಿತಾಂಶ ತಿಳಿಯುತ್ತ ಬಂದಹಾಗೆ ಸದ್ಯದ ಸರಕಾರದ ಉದಾರ ಪ್ರಧಾನ ಮಂತ್ರಿ ಸೊಫೋಲಿಸ್ಸನು ರಾಜೀನಾಮೆಯಿತ್ತನು. ಹೊಸ ಮಂತ್ರಿಮಂಡಲವಾಗುವ ವರೆಗೆ ಉಳಿಯಲು ರೀಜಂಟ್ ಡೆಮಾಸ್ಕಿನೋಸರು ಅವನನ್ನು ಕೇಳಿಕೊಂಡಿದ್ದಾರೆ. ಪಾಪ್ಯುಲಿಸ್ಟ ಮಂತ್ರಿಮಂಡಲ ಬಂದೊಡನೆ ಅದು ಗ್ರೀಕ ಅರಸನ ಪುನರಾಗಮನ ಬೇಕೇ ಬೇಡವೇ ಎಂಬ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸುವದೆಂದು ನಂಬಲಾಗಿದೆ.

ಈಮ ಪಕ್ಷ ಚುನಾವಣೆಯನ್ನು ಬಹಿಷ್ಕರಿಸಿದ್ದರೂ ಮತದಾರರು ಅವರ ಮಾತು ಕೇಳಿ ಮತದಾನ ಮಾಡದೆ ಸುಮ್ಮನಿರಲಿಲ್ಲವಾದುದರಿಂದ ಈಮ ಪಕ್ಷದ ಪ್ರಸ್ಥ ಏನೂ ಉಳಿದಿಲ್ಲವೆಂದು ನಟಿಸಲಾಗಿದೆ. ಆದರೆ ಜನರನ್ನು ಹೆದರಿಸಿ ಗದರಿಸಿ ಮತದಾನವನ್ನು ಒತ್ತಾಯದಿಂದ ಮಾಡಿಸಲಾಯಿತೆಂದು ಈಮ ಪಕ್ಷದವರು ವಾದಿಸಿದ್ದಾರೆ. ಅಂತೂ ಪ್ರತಿಗಾಮಿಗಳಿಗೆ ಗ್ರೀಸದಲ್ಲಿ ದೊರೆತ ಈ ವಿಜಯ ಆ ದೇಶವನ್ನು ಇನ್ನೊಮ್ಮೆ ದಬ್ಬಾಳಿಕೆಯ ಸತ್ರಕ್ಕೆ ಈಡುಮಾಡದಿರದೆಂದು ಹೇಳಲಡ್ಡಿಯಿಲ್ಲ.

ಚೀನದ ಪರಿಸ್ಥಿತಿ

ಬರಗಾಲದಿಂದ ಲಕ್ಷಾಂತರ ಜನರು ಮರಣವನ್ನೆದುರಿಸುತ್ತಿದ್ದರೂ ಚೀನದ ಅಂತಃಕಲಹ ಇನ್ನೂ ಕಡಿಮೆಯಾಗುವ ಲಕ್ಷಣವಿಲ್ಲ. ಮಂಚೂರಿಯಾದಲ್ಲಿ ರಶಿಯನ್ನರು ತೆರವು ಮಾಡಿದ ಪ್ರದೇಶಗಳ ಸ್ವಾಮಿತ್ವವನ್ನು ಪಡೆಯಲು ಕೇಂದ್ರ ಸರಕಾರದ ಮತ್ತು ಕಮ್ಯುನಿಸ್ಟ್ ಪಡೆಗಳು ನಡೆಸಿರುವ ಮೇಲಾಟ ಸಕಾಲದಲ್ಲಿ ತಡೆಯಲ್ಪಡದಿದ್ದರೆ ದೊಡ್ಡ ಪ್ರಮಾಣದ ಹೋರಾಟದಲ್ಲಿ ಪರಿಣಮಿಸಬಹುದು. ಮತ್ತು ಜನರಲ ಜಾರ್ಜ ಮಾರ್ಶಲ್ಲರು ಬಹಳ ಸಾಹಸದಿಂದ ತಂದೊಡ್ಡಿದ ಐಕ್ಯ ಛಿನ್ನವಿಚ್ಛಿನ್ನವಾಗಬಹುದೆಂದು ಭಯಪಡಲಾಗಿದೆ. ಈಗಿನಮಟ್ಟಿಗೆ ಅಮೇರಿಕನ್ನರು ಚೀನದಲ್ಲಿ ವಿದೇಶೀ ಪಡೆಗಳ ಅಸ್ತಿತ್ವವೇ ಎರಡೂ ಪಕ್ಷಗಳನ್ನು ಹೆಚ್ಚು ಹಟಮಾರಿಯಾಗಿ ಮಾಡಿದೆಯೆಂಬ ಮಾತು ಮನಗಂಡಂತೆ ತೋರುತ್ತದೆ. ಆದಕ್ಕಾಗಿ ಮೇ ತಿಂಗಳಿಗೆ ಮೊದಲೇ ಚೀನದಿಂದ ಹೆಚ್ಚಿನ ಅಂಶ ಅಮೇರಿಕನ್ ಸೈನ್ಯಗಳು ಹೊರಟುಹೋಗುವವೆಂದು ಪ್ರಕಟಿಸಲಾಗಿದೆ. ೩-೪ ಸಾವಿರಕ್ಕಿಂತ ಹೆಚ್ಚು ಅಮೇರಿಕನ್ ಸೈನ್ಯಗಳು ಆ ಮೇಲೆ ಚೀನದಲ್ಲಿ ಉಳಿಯಲಾರವು. ಅಮೇರಿಕನ್ ಬೆಂಬಲದ ಭರವಸೆ ತಪ್ಪಿದರೆ ಚಿಯಾಂಗ್ ಕೈಶೇಕರ ಹಟ ಕಡಿಮೆಯಾಗಬಹುದು. ಎಂದರೆ ಐಕ್ಯ ಬೇಗನೇ ಸಾಧ್ಯವಾಗಬಹುದು. ಕಮ್ಯುನಿಸ್ಟ ಮತ್ತು ಚಿಯಾಂಗ ಪಕ್ಷಗಳ ಪ್ರತಿನಿಧಿಗಳನ್ನು ಪುನಃ ಒಂದೆಡೆ ಸೇರಿಸುವ ಪ್ರಯತ್ನಗಳು ನಡೆದಿವೆ.

* * *

ಬಲ್ಗೇರಿಯಾದ ಕೆಲ ದಿನಗಳ ಹಿಂದೆ ರಾಜೀನಾಮೆ ಕೊಟ್ಟಿದ್ದ ಮುಖ್ಯಮಂತ್ರಿ ಕಿಮನ್ ಜಾರ್ಜೀವರು ಪುನಃ ಹೊಸ ಮಂತ್ರಿಮಂಡಲ ರಚಿಸಿ ಅಧಿಕಾರ ಸ್ವೀಕರಿಸಿದ್ದಾರೆ. ಎಡ ಪಕ್ಷಗಳ ಕೂಟವಾದ ಅವರ "ಪಿತೃಭೂಮಿ ಸಮ್ಮುಖ"ದ ಸದಸ್ಯರನ್ನು ಮಾತ್ರ ಈ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾಗಿದೆ. ಕಮ್ಯುನಿಸ್ಟರಿಗೆ ಮಹತ್ವದ ಶಾಖೆಗಳನ್ನು ಕೊಟ್ಟಿರುವುದರಿಂದ ಮಂತ್ರಿಮಂಡಲದಲ್ಲಿ ವಿರೋಧಿ ಪಕ್ಷಗಳು ಭಾಗವಹಿಸಲು ನಿರಾಕರಿಸಿದ್ದುವು. ಈಗಲೂ ಅವುಗಳನ್ನು ಸೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಎಲ್ಲ "ಪ್ರಜಾತಂತ್ರಾತ್ಮಕ ಸತ್ವ"ಗಳನ್ನೊಳಗೊಂಡ ಸರಕಾರ ಸ್ಥಾಪಿಸಿದಾಗಲೇ ಸದ್ಯದ ಬಲ್ಗೇರಿಯನ್ ಆಡಳಿತೆಗೆ ಮನ್ನಣೆ ಕೊಡುವದಾಗಿ ಮಾಸ್ಕೋದಲ್ಲಿ ತ್ರಿರಾಷ್ಟ್ರಗಳಲ್ಲಿ ಒಪ್ಪಂದವಾಗಿತ್ತು. ಆದರೆ ಇನ್ನೂ ಅದು ಸಾಧ್ಯವಾಗಿಲ್ಲವಾಗಿ ಕಿಮನ್ನರ ಸರಕಾರ ಆಂಗ್ಲೋ-ಅಮೇರಿಕನ್ನರ ಮನ್ನಣೆ ದೊರಕಿಸದೆ ತ್ರಿಶಂಕುವಾಗಬೇಕಾಗುವದು.

ಸ್ವಾತಂತ್ರ್ಯಪಿಪಾಸೆ ಭಾರತದಲ್ಲಿ ಯಾವಾಗಲೂ ಇತ್ತು

(ಮೊದಲನೆ ಪುಟದಿಂದ ಮುಂದರಿದುದು)

ಜಾನಾಂಗಿಕ ಮತ್ತು ಸಾಂಸ್ಕೃತಿಕ ಸ್ವರೂಪ ಹಿಂದಿನದ್ದಕ್ಕಿಂತ ಎಷ್ಟೋ ಬೇರೆಯಾಗಿದೆ. ಬೇರೆ ಎಲ್ಲ ಕಡೆ ಹೇಗೋ ಹಾಗೆಯೇ ಹಿಂದುಸ್ತಾನದಲ್ಲಿಯೂ ಪರಿವರ್ತನೆ ಘಟೋತ್ಕಚನಂತೆ ಹೆಜ್ಜೆಯಿಡುತ್ತ ನುಗ್ಗುತ್ತಿರುವುದನ್ನು ಸುತ್ತಲೂ ಕಾಣುತಿದ್ದೇವೆ. ಆದರೂ ಹಿಂದೀ ಮತ್ತು ಚೀನಿ ನಾಗರಿಕತೆಗಳು ಅಸಾಧಾರಣವಾದ ತಾಳಿಕೆಯನ್ನೂ ಹೊಂದಿಕೆಯನ್ನೂ ತೋರಿಸಿವೆಯೆಂಬ ಮಾತನ್ನು ನಾನು ಅಲಕ್ಷಿಸಲಾರೆ. ಅಸಂಖ್ಯ ವರ್ಷಗಳ ವರೆಗೂ ಇವು ತಮ್ಮ ಮೂಲಭೂತ ಸ್ವರೂಪವನ್ನು ಉಳಿಸಿಕೊಂಡು ಬಾಳಿವೆ. ಜೀವನ, ಪ್ರಕೃತಿಗಳೊಡನೆ ಸಮರಸವಾಗಿರದಿದ್ದರೆ ಅವು ಹೀಗೆ ತಾಳುವದು ಸಾಧ್ಯವಿದ್ದಿಲ್ಲ. ಅವುಗಳನ್ನು ಅವುಗಳ ಪ್ರಾಚೀನ ಪ್ರಸ್ತರದಲ್ಲಿಯೇ ಉಳಿಸುವದು ದುಷ್ಟವಾದುದಿರಲಿ, ಸಮಂಜಸವಾದುದಿರಲಿ, ಎರಡರ ಸಂಕರವಾಗಿರಲಿ, ಅದು ಸತ್ವಶಾಲಿ ವಸ್ತುವಿರಬೇಕು. ಇಲ್ಲದಿದ್ದರೆ ಅದು ಇಷ್ಟು ದೀರ್ಘ ಕಾಲ ಬಾಳುತಿರಲಿಲ್ಲ. ಅದರಲ್ಲಿದ್ದ ಉಪಕಾರ ಶಕ್ತಿ ಈಗ ಅಳಿದುಹೋಗಿ ಅದೀಗ ಬರಿ ತೊಡಕಾಗಿ ಮಾತ್ರ ಉಳಿದಿದೆಯೋ ಏನೋ. ಅಥವಾ ಈಚಿನ ಯುಗಗಳ ಬಿಸಿಗೆ ಅದರಲ್ಲಿದ್ದ ಒಳಿತೆಲ್ಲ ಅಳಿದು ಬರಿ ಹೊರಚಿಪ್ಪು ಮಾತ್ರ ಉಳಿದಿದ್ದರೂ ಉಳಿದಿರಬಹುದು.

ಪ್ರಗತಿ ಮತ್ತು ಭದ್ರತೆ

ಪ್ರಗತಿಯ ಕಲ್ಪನೆಗೂ ಭದ್ರತೆಯದಕ್ಕೂ ಪರಸ್ಪರ ವೈಷಮ್ಯವಿದ್ದಂತಿದೆ. ಅವೆರಡೂ ಒಂದಕ್ಕೊಂದು ಮೇಳಗೂಡುವದಿಲ್ಲ. ಮೊದಲನೆಯದಕ್ಕೆ ಪರಿವರ್ತನೆಯ ಅಪೇಕ್ಷೆಯಿದ್ದರೆ ಎರಡನೆಯದಕ್ಕೆ ಬದಲಾಗದ ಏಕರೂಪ ಸ್ಥಿತಿಯೇ ಭದ್ರವಾಗಿರಬೇಕೆಂಬ ಆಶೆ. ಪ್ರಗತಿಯ ಕಲ್ಪನೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೂಡ ಹೊಸದೆ. ಪ್ರಾಚೀನ ಮತ್ತು ಮಧ್ಯಯುಗ ನಾಗರಿಕತೆಗಳು ಪೂರ್ವಕಾಲದ ವೈಭವ ಮತ್ತು ಅನಂತರ ಕಾಲದ ಅಧಃಪಾತವನ್ನೇ ಕುರಿತು ಹಾಡುತ್ತಿದ್ದವು. ಹಿಂದುಸ್ತಾನದಲ್ಲಿಯೂ ಪ್ರಾಚೀನ ಕಾಲವನ್ನು ಬಹಳ ಪುನೀತ ಕಾಲವೆಂದೇ ಭಾವಿಸಲಾಗಿತ್ತು. ಇಲ್ಲಿ ಕಟ್ಟಲ್ಪಟ್ಟ ನಾಗರಿಕತೆ ಅವಶ್ಯವಾಗಿ ಭದ್ರತೆ-ತಾಳಿಕೆಗಳ ದೃಷ್ಟಿಕೋನಗಳಿಂದಲೇ ರಚಿಸಲ್ಪಟ್ಟದ್ದು, ಆ ಭಾಗದಲ್ಲಿ ಅದು ಪಾಶ್ಚಿಮಾತ್ಯ ನಾಗರಿಕತೆಗಳಿಗಿಂತ ಎಷ್ಟು ಯಶಸ್ವಿಯಾಗಿತ್ತು. ಜಾತೀಯ ಪದ್ಧತಿ ಮತ್ತು ಅವಿಭಕ್ತ ಕುಟುಂಬ ಪದ್ಧತಿಗಳ ತಳಹದಿಯಲ್ಲಿ ಕಟ್ಟಿದ ಇಲ್ಲಿಯ ಸಾಮಾಜಿಕ ವ್ಯವಸ್ಥೆ ಇದಕ್ಕೆ ಉಪಯುಕ್ತವಾಯಿತು. ಅದು ಗುಂಪಿಗೆ ಸಾಮಾಜಿಕ ಭದ್ರತೆಯನ್ನೂ ವೃದ್ಧಾಪ್ಯ, ಅಂಗಭಂಗ, ಅಥವಾ ಇನ್ನಾವ ಕಾರಣದಿಂದ ತನ್ನ ಯೋಗಕ್ಷೇಮ ನೋಡಿಕೊಳ್ಳಲು ಅಸಮರ್ಥನಾದ ವ್ಯಕ್ತಿಗೆ ಒಂದು ಬಗೆಯ ಸಾಮಾಜಿಕ ವಿಮೆಯನ್ನೂ ಒದಗಿಸುವಲ್ಲಿ ಯಶಸ್ವಿಯಾಗಿತ್ತು. ಈ ವ್ಯವಸ್ಥೆಯಲ್ಲಿ ದುರ್ಬಲರಿಗೆ ಅನುಕೂಲತೆಯಿದ್ದರೂ ಬಲಿಷ್ಠರಿಗೆ ಕೆಲಮಟ್ಟಿಗೆ ತೊಡಕುಂಟು. ಅದು ವಿಶಿಷ್ಟ ಯೋಗ್ಯತೆಯುಳ್ಳವರಿಗೆ ಹಾನಿಯುಂಟುಮಾಡಿ ಸಾಧಾರಣ ಜನಕ್ಕೆ ಉಪಕಾರ ಮಾಡುತ್ತದೆ. ಎತ್ತರದವರನ್ನು ತಗ್ಗಿಸಿ ತಗ್ಗಿನವರನ್ನು ಏರಿಸಿ ಅದೊಂದು ಬಗೆಯ ಸಮತಟ್ಟಿನ ಸಮಾಜವನ್ನು ನಿರ್ಮಿಸುತ್ತದೆ. ಹಿಂದೀ ತತ್ವಜ್ಞಾನ ಬಹಳ ವೈಯಕ್ತಿಕ ಸ್ವರೂಪದ್ದಾಗಿದ್ದು ವ್ಯಕ್ತಿಯ ವಿಶಿಷ್ಟ ಆಂತರಿಕ ಪರಿಪೂರ್ಣತೆಯತ್ತ ಮಾತ್ರವೇ ತನ್ನ ಸಮಸ್ತ ಗಮನವನ್ನೂ ಕೊಟ್ಟಿರುವಾಗ, ಹಿಂದೀ ಸಾಮಾಜಿಕ ಕಟ್ಟುಪಾಡು ಪೂರ್ಣವಾಗಿ ಸಾಮೂಹಿಕವಾಗಿದ್ದು ಕೇವಲ ಗುಂಪುಗಳಿಗಷ್ಟೇ ಗಮನವಿತ್ತಿರುವುದು ವಿಚಿತ್ರವಾಗಿದೆ. ವ್ಯಕ್ತಿಗೆ ವಿಚಾರಸ್ವಾತಂತ್ರ್ಯವನ್ನು ಕೊಟ್ಟು ಬೇಕಾದ ನಂಬಿಕೆಗೆ ಅಂಟಿಕೊಳ್ಳಲು ಅವಕಾಶ ಕೊಟ್ಟಿದ್ದರೂ ಸಾಮಾಜಿಕ, ಜಾತೀಯ ಸಂಪ್ರದಾಯಗಳನ್ನು ಮಾತ್ರ ಅವನು ಚಾಚೂ ತಪ್ಪದೆ ಪಾಲಿಸಲೇಬೇಕಾಗುತ್ತಿತ್ತು.

ಇಷ್ಟೆಲ್ಲ ಸ್ಪಷ್ಟವಿದ್ದರೂ ಒಟ್ಟಿನ ಮೇಲೆ ಗುಂಪಿನ ನಿಯಮಗಳಲ್ಲಿ ಒಳ್ಳೆ ಸ್ಥಿತಿಸ್ಥಾಪಕತೆಯಿದ್ದುದನ್ನು ಕಾಣುತ್ತೇವೆ. ಸಂಪ್ರದಾಯದ ಬಲದಿಂದ ಬದಲಾಗಲಾರದ ಯಾವ ನಿಯಮವೂ ಇದ್ದಿಲ್ಲ. ಹೊಸ ಗುಂಪುಗಳಿಗೆ ತಮ್ಮದೇ ನಂಬಿಕೆ, ಸಂಪ್ರದಾಯ, ರೀತಿನೀತಿಗಳನ್ನು ಇರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕೊಡಲಾಗಿತ್ತು. ವಿದೇಶಿ ಸತ್ವಗಳನ್ನು ಅಟ್ಟಿಸಿಕೊಳ್ಳಲು ಇದರಿಂದ ಬಹಳ ಸಹಾಯವಾಯಿತು. ಇದೆಲ್ಲದರ ಹಿಂದೆ ಕೆಲ ಮೂಲಭೂತ ನೈತಿಕ ತತ್ವಗಳು, ಒಂದು ದಾರ್ಶನಿಕ ದೃಷ್ಟಿ ಇತರರ ಜೀವನದ ರೀತಿನೀತಿಗಳ ಬಗೆಗೆ ಒಂದು ಸಹನೆ ಇರುತ್ತಿದ್ದವು.

ತಾಳಿಕೆ, ಭದ್ರತೆಗಳೇ ಧ್ಯೇಯಗಳಾಗಿದ್ದಷ್ಟು ಕಾಲ ಈ ಕಟ್ಟಡ ಹೆಚ್ಚು ಕಡಿಮೆ ಯಶಸ್ವಿಯಾಗಿಯೇ ನಡೆಯಿತು. ಆರ್ಥಿಕ ಬದಲಾವಣೆಗಳು ಬಂದು ಅವರ ತಳವನ್ನು ನಲುಗಿಸಿದಾಗಲೂ ಹೊಸದಕ್ಕೆ ಹೊಂದಿಕೊಂಡು ಹೋಗುವದು ಸಾಧ್ಯವಾಯಿತು. ಅದಕ್ಕೆ ನಿಜವಾದ ಆಹ್ವಾನ ಬಂದುದು ಹಳೆಯ ಜಡ ವಿಚಾರಧಾರೆಯೊಡನೆ ಬೆರೆಯಲಾರದ ಹೊಸ ಸಚೇತನ ಸಾಮಾಜಿಕ ಪ್ರಗತಿಯ ವಿಚಾರಗಳು ಬಂದಾಗ. ಈ ಹೊಸ ಕಲ್ಪನೆಯೇ ಪಶ್ಚಿಮದಲ್ಲಿ ಮಾಡಿದಂತೆ ಪೂರ್ವದಲ್ಲಿಯೂ ಹಳೆಯ ಬೇರೂರಿದ ಪದ್ಧತಿಗಳನ್ನು ಬುಡಮೇಲು ಮಾಡುತಿರುವದು. ಪಶ್ಚಿಮದಲ್ಲಿ ಪ್ರಗತಿಯೇ ಇನ್ನೂ ಪ್ರಮುಖ ವಿಚಾರವಾಗಿದ್ದರೂ ಭದ್ರತೆಯ ಬೇಡಿಕೆಯೂ ದಿನ ಹೋದಂತೆ ಬೆಳೆಯುತ್ತಿದೆ. ಹಿಂದುಸ್ತಾನದಲ್ಲಿ ಮಾತ್ರ ಭದ್ರತೆಯ ಅಭಾವವೆ ಜನರನ್ನು ಹಳೆಯ ತಿಪ್ಪೆಗಳಿಂದ ಬಲಾತ್ಕಾರದಿಂದ ಮೇಲಕ್ಕೆತ್ತಿ ಹೆಚ್ಚು ಭದ್ರತೆಗಾಗಿ ಪ್ರಗತಿಪರರಾಗುವಂತೆ ಮಾಡಿದೆ.

ಎರಕದ ಆತುರ

ಪ್ರಾಚೀನ ಮತ್ತು ಮಧ್ಯಕಾಲದ ಹಿಂದುಸ್ತಾನದಲ್ಲಿ ಪ್ರಗತಿಯ ಆಹ್ವಾನವಿದ್ದಿಲ್ಲ. ಆದರೂ ಪರಿವರ್ತನೆ ಮತ್ತು ಹೊಂದಿಕೆಯ ಅವಶ್ಯಕತೆಯನ್ನು ಗಮನಿಸಿದ್ದರಿಂದ ಎರಕದ ಆತುರ ಬೆಳೆದುದನ್ನು ಕಾಣುತ್ತೇವೆ. ಹಿಂದುಸ್ತಾನಕ್ಕೆ ಬಂದ ವಿವಿಧ ಸತ್ವಗಳ ಎರಕವನ್ನಷ್ಟೇ ಅಲ್ಲ, ವ್ಯಕ್ತಿಯ ಅಂತರಂಗ ಬಹಿರಂಗಗಳ ಎರಕವನ್ನೂ ಸಾಧಿಸುವ ಪ್ರಯತ್ನ ನಡೆಯಿತು. ಇಂದು ಕಂಡುಬರುತ್ತಿರುವ ಅಗಲವಾದ ಭಿನ್ನತೆಗಳು ಆಗ ಇದ್ದಿಲ್ಲ. ಸಾಮಾನ್ಯವಾದ ಸಾಂಸ್ಕೃತಿಕ ಹಿನ್ನಲೆಯೊಂದು ವೈವಿಧ್ಯದ ನಡುವೆ ಐಕ್ಯದ ಮುದ್ರೆಯನ್ನು ಒತ್ತಲು ಸಮರ್ಥವಾಗಿತ್ತು. ರಾಜಕೀಯ ಕಟ್ಟುಪಾಡಿನ ಬುಡದಲ್ಲಿ ಸ್ವಾಯತ್ತ ಹಳ್ಳಿಗಳ ಪದ್ಧತಿಯೊಂದಿದ್ದು ಅದು ಅರಸು ಬಂದರೂ ಹೋದರೂ ಹಾಗೆಯೆ ಉಳಿಯಿತು. ಸರಕಾರದ ಅಧಿಕಾರ ಎಷ್ಟೇ ನಿರಂಕುಶವೆಂದು ಕಂಡುಬಂದರೂ ರೂಢಿ ಮತ್ತು ಘಟನಾತ್ಮಕ ಇತಿಮಿತಿಗಳು ಯಾವನೇ ರಾಜನಿಗೆ ಗ್ರಾಮಪಂಚಾಯತಿಗಳ ಹಕ್ಕುಬಾಧ್ಯತೆಗಳಲ್ಲಿ ಕೈಹಾಕಲು ಅವಕಾಶ ಕೊಡುತ್ತಿರಲಿಲ್ಲ. ಈ ರೂಢಿ ಸಂಪ್ರದಾಯಗಳು ಸಮಾಜಕ್ಕೂ ವ್ಯಕ್ತಿಗೂ ಬೇಕಷ್ಟು ಸ್ವಾತಂತ್ರ್ಯವನ್ನು ನಿಶ್ಚಿತವಾಗಿ ದೊರಕಿಸುತಿದ್ದವು.

ಹಿಂದುಸ್ತಾನದಲ್ಲಿ ಹಿಂದೀ ಸಂಸ್ಕೃತಿ ಸಂಪ್ರದಾಯಗಳ ಅಭಿಮಾನಿಗಳಲ್ಲಿ ರಜಪೂತರನ್ನು ಹಿಂದಿಕ್ಕುವವರಿಲ್ಲ. ಅವರ ಶೌರ್ಯ ಸಾಹಸಗಳು ದೇಶದ ಸಂಪ್ರದಾಯದಲ್ಲಿಯೇ ಸೇರಿಹೋಗಿವೆ. ಆದರೆ ಅನೇಕ ರಜಪೂತರು ಹಿಂದೀ-ಸೀಥಿಯನ್ನರ ಮತ್ತು ಕೆಲವರು ಹಿಂದುಸ್ತಾನಕ್ಕೆ ಬಂದ ಹೂಣರ ವಂಶಜರೆಂದು ಹೇಳಲಾಗಿದೆ. ಜಾಟನಿಗಿಂತ ಬಲಿಷ್ಠನಾದ, ಸುಭಗನಾದ ರೈತನು ಭಾರತದಲ್ಲಿಲ್ಲ. ಅವನೂ ಸೀಥಿಯನ್ನರ ವಂಶಜನು. ಹಿಂದೀಯರ ಮೂಲ ಯಾವ ಜನಾಂಗದಲ್ಲಿರಲಿ ಅವರೆಲ್ಲರೂ ಸ್ಪಷ್ಟವಾಗಿ ಹಿಂದೀಯರಾಗಿ ರೂಪುಗೊಂಡಿರುವರು. ಅವರೆಲ್ಲರೂ ಇತರರೊಡನೆ ಹಿಂದೀ ಸಂಸ್ಕೃತಿಯಲ್ಲಿ ಭಾಗವಹಿಸಿದ್ದಾರೆ, ಹಿಂದುಸ್ತಾನದ ಸಂಸ್ಕೃತಿಯನ್ನು ತಮ್ಮದೆಂದೇ ಬಗೆದಿದ್ದಾರೆ.

ಹಿಂದುಸ್ತಾನಕ್ಕೆ ಹೊರಗಿನಿಂದ ಬಂದು ಇಲ್ಲಿ ಲೀನವಾಗಿರುವ ಪ್ರತಿಯೊಂದು ವಿದೇಶಿ ಸತ್ವವೂ ಹಿಂದುಸ್ತಾನಕ್ಕೆ ಸ್ವಲ್ಪ ಸ್ವಲ್ಪ ಕೊಟ್ಟು ಬಹಳಷ್ಟು ಪಡೆಯಿತು. ಅದು ತನ್ನ ಶಕ್ತಿಯನ್ನೂ ಹಿಂದುಸ್ತಾನದ ಶಕ್ತಿಯನ್ನೂ ಬೆಳೆಸುವ ಸಾಧನವಾಗಿದೆ ಆದರೆ ಯಾವುದೊಂದು ಸತ್ವ ಬೇರೆಯೇ ಆಗಿ ಉಳಿದಾಗ, ಅಥವಾ ಹಿಂದುಸ್ತಾನದ ವೈಭವಶಾಲಿ, ವೈವಿಧ್ಯಪೂರ್ಣ ಸಂಸ್ಕೃತಿಯಲ್ಲಿ ಬೆರೆಯಲು ಅಸಮರ್ಥವಾದಾಗ ಅದರ ಪ್ರಭಾವ ಕ್ಷಣಿಕವಾಗಿ ಅದು ಕೊನೆಗೆ ಅಳಿದುಹೋದುದನ್ನೂ ಒಮ್ಮೊಮ್ಮೆ ತನಗೂ ಹಿಂದುಸ್ತಾನಕ್ಕೂ ಹಾನಿ ಮಾಡಿದ್ದನ್ನೂ ಕಾಣುತ್ತೇವೆ.

೫ ಪ್ರಶ್ನೆಗಳು

೫ ಪ್ರಶ್ನೆಗಳನ್ನು ಬರೆದು ಕವರಿನಲ್ಲಿಟ್ಟು ಸೀಲು ಮಾಡಿ ಕಳುಹಿಸಿದರೆ ದೇವೀ ಮಹಿಮೆಯಿಂದ ಉತ್ತರ ರೂಪದಲ್ಲಿ ಭವಿಷ್ಯ ಬರೆದು, ಅದೇ ನಿಮ್ಮ ಕವರಿನೊಂದಿಗೆ ರೂ. ೨ ಕ್ಕೆ ವಿ. ಪಿ. ಮಾಡಲಾಗುವದು.

ಸಿದ್ಧಾಂತಿ ಎಂ. ಆರ್. ಸುಬ್ಬಯ್ಯ
ನಂ. ೧೨, ಕೆಂಚನಾಯಕನಗಲ್ಲಿ
ಗಾಣಿಗೇರಪೇಟೆ, ಬೆಂಗಳೂರ ಸಿಟಿ

ಮದ್ರಾಸ ಹಿಂದು ಧಾರ್ಮಿಕ ಉಂಬಳಿ ಕಾಯದೆ ತಿದ್ದುಪಡಿ ಮಸೂದೆಗೆ ಗವರ್ನರ ಜನರಲ್‌ರು ತಮ್ಮ ಸಮ್ಮತಿ ಕೊಟ್ಟಿರುವರೆಂದು ತಿಳಿಯುತ್ತದೆ. ಇಷ್ಟು ದಿನಗಳವರೆಗೆ ಮದ್ರಾಸ ನಗರಗಳಲ್ಲಿಯ ಧಾರ್ಮಿಕ ಉಂಬಳಿಗಳು ಈ ಕಾಯದೆಯ ಕಾರ್ಯಕ್ಷೇತ್ರದ ಹೊರಗೆ ಇದ್ದವು. ಈಗ ಅವುಗಳನ್ನು ಕಾಯದೆಯ ಕಕ್ಷೆಯಲ್ಲಿ ತರಲಾಗಿದ್ದಲ್ಲದೆ ಅಪವಾದಾತ್ಮಕ ಹಾಗು ಸಾಮಾನ್ಯ ದೇವಾಲಯಗಳಲ್ಲಿ ಮೂಲ ಕಾಯದೆಯಲ್ಲಿರುವ ತಾರತಮ್ಯ [illegible] ಅವಶ್ಯಕ ತಿದ್ದುಪಡಿ ಮಾಡಲಾಗಿದೆ.

ಸಾರ್ವಜನಿಕ ಪ್ರಕಟನೆ

೧೯೪೬ ನೇ ಇಸ್ವಿಯ ಅವಶ್ಯಕ ಪದಾರ್ಥಗಳ ನಿರ್ಬಂಧಿತ ಸಂಪಾದನೆ ಮತ್ತು ಸ್ವಾಧೀನತೆ ಆಜ್ಞೆಯನ್ವಯ ಹುಬ್ಬಳ್ಳಿಯ ಸೀದಾಕ್ಷೇತ್ರದಲ್ಲಿ ಅವಶ್ಯಕ ಪದಾರ್ಥಗಳ ಸಾಮಾನ್ಯ ಪರಿಮಾಣದಲ್ಲಿ ಕಡಿತ.

ಪ್ರಕಟನೆ

ಹಣಕಾಸಿನ ಖಾತೆ (ಸಪ್ಲೈ)
ಮುಂಬಯಿ ಕೋಟೆ,
೧೪ ನೇ ಮಾರ್ಚ ೧೯೪೬

ನಂ ೧೬೮೧ [೧೬--ಅ] / ಡಿ. ಆರ್ —೧೯೪೬ ನೇ ಅವಶ್ಯಕ ಪದಾರ್ಥಗಳ ನಿರ್ಬಂಧಿತ ಸಂಪಾದನೆ ಮತ್ತು ಸ್ವಾಧೀನತೆ ಆಜ್ಞೆಯ ೨ ನೇ ಕಲಮಿನ ಪೋಟಕಲಮು[೧] ರಲ್ಲಿಯ ಹೇಳಿಕೆಯ ಪ್ರಕಾರ ಮುಂಬಯಿ ಸರಕಾರದವರು ೨೭ ಸಪ್ಟೆಂಬರ ೧೯೪೫ ನೇ ಸರಕಾರಿ ಪ್ರಕಟನೆ, ಹಣಕಾಸಿನ ಖಾತೆ [ಸಪ್ಲೈ] ನಂ. ೧೨೧ (೧೬-ಅ) (ಬ), ಡಿ. ಆರ್ ಇದನ್ನು ೩೧ ನೇ ಮಾರ್ಚ ೧೯೪೬ ರಿಂದ ಮುಂದೆ ಜಾರಿಯಲ್ಲಿ ಬರಲು ಕೆಳಗಿನಂತೆ ತಿದ್ದುಪಡಿ ಮಾಡಿರುತ್ತಾರೆ, ಆ ತಿದ್ದುಪಡಿಗಳು ಏನೆಂದರೆ :—

ಆ ಪ್ರಕಟನೆಯಲ್ಲಿ „ ಪರಿಮಾಣ " ಎಂಬ ತಲೆಬರಹದ ಕೆಳಗೆ —

(ಅ) ನಂಬರಗಳು I ಮತ್ತು IV ಎಂಟ್ರಿಗಳ ಎದುರಿನಲ್ಲಿಯ "೧೫" ಅಂಕಿಗಳ ಬದಲು "೧೧" ಅಂಕಿಗಳನ್ನು ಸೇರಿಸತಕ್ಕದ್ದು.

(ಬ) ನಂಬರಗಳು II ಮತ್ತು V ಎಂಟ್ರಿಗಳ ಎದುರಿನ " ೭ ೧/೨ " ಅಂಕಿಗಳ ಬದಲಾಗಿ " ೫ ೧/೨ " ಅಂಕಿಗಳನ್ನು ಸೇರಿಸತಕ್ಕದ್ದು.

(ಕ) ನಂಬರಗಳು III ಎಂಟ್ರಿಯ ಎದುರಿಗಿನ " ೨೨ ೧/೨ " ಅಂಕಿಗಳ ಬದಲು "೧೫" ಅಂಕಿಗಳನ್ನು ಸೇರಿಸತಕ್ಕದ್ದು.

ಸೂಚನೆ :— ಭಾರತ ಸಂರಕ್ಷಣ ಕಾಯಿದೆಯ ೧೧೯ ನೇ ನಿಯಮದ ಪೋಟ ನಿಯಮ (೧) ರನ್ವಯ ಈ ಪ್ರಕಟನೆಯು ಕೆಳಗೆ ಕೊಟ್ಟ ರೀತಿಯಲ್ಲಿ ಪ್ರಸಿದ್ಧವಾಗತಕ್ಕದ್ದು.

(ಅ) ಮುಂಬಯಿ ಸರಕಾರದ ಗ್ಯಾಝೆಟದಲ್ಲಿ ಅದನ್ನು ಪ್ರಸಿದ್ಧಿಸಲಾಗುವದು.

(ಬ) ಕೆಳಗಿನ ಪತ್ರಿಕೆಗಳಲ್ಲಿಯೂ ಅದನ್ನು ಪ್ರಸಿದ್ಧಿಸಲಾಗುವದು.

(೧) ಸಂಯುಕ್ತ—ಕರ್ನಾಟಕ, ಹುಬ್ಬಳ್ಳಿ

(೨) ಕರ್ನಾಟಕ ಬಂಧು, ಗದಗ

(೩) ಕರ್ಮವೀರ, ಹುಬ್ಬಳ್ಳಿ

(ಕ) ಹುಬಳ್ಳಿಯ ಸೀದಾ ಕ್ಷೇತ್ರದಲ್ಲಿರುವ ರೆವಿನ್ಯೂ ಮತ್ತು ಉಳಿದ ಸರಕಾರಿ ಕಚೇರಿಗಳಲ್ಲಿ ಈ ಉದ್ದಿಶ್ಯವಾಗಿ ಇದ್ದ ನೋಟೀಸ ಬೋರ್ಡುಗಳಿಗೆ ಅದರ ಪ್ರತಿಗಳನ್ನು ಅಂಟಿಸಿ.

(ಡ) ಈ ಪ್ರಕಟನೆಯ ಹೇಳಿಕೆಯನ್ನು ಸಾರಾಂಶವಲ್ಲಿ ಸ್ಪಷ್ಟೀಕರಿಸುವ ಪತ್ರಿಕಾ-ಸೂಚನೆಯನ್ನು ಪ್ರಸಿದ್ಧಿಸಲ್ಪಡತಕ್ಕದ್ದು.

ಮುಂಬಯಿ ಗವ್ಹರ್ನರರ ಆಜ್ಞೆಯ ಪ್ರಕಾರ
ಡಿ. ಎಸ್. ಬಖಲೆ.
ಸರಕಾರದ ಕಾರ್ಯದರ್ಶಿ

ಪತ್ರಿಕಾ ಸೂಚನೆ

ಅವಶ್ಯಕ ಪದಾರ್ಥಗಳ ನಿರ್ಬಂಧಿತ ಸಂಪಾದನೆ ಮತ್ತು ಸ್ವಾಧೀನತೆ ಅಜ್ಞೆಯನ್ವಯ ಯಾವದೇ ವ್ಯಕ್ತಿಯು ತನ್ನ ವಶದಲ್ಲಿ ಇಟ್ಟುಕೊಳ್ಳಲು ಬರುವ ಸಾಮಾನ್ಯವಾದ ಪರಿಮಾಣಕ್ಕಿಂತ ಹೆಚ್ಚಿಗೆ ಸೀದಾ ಆಹಾರಧಾನ್ಯಗಳ ಅಂದರೆ ಅಕ್ಕಿ, ಗೋದಿ, ಶಜ್ಜೆ ಅಥವಾ ಜೋಳ ಇವುಗಳ ಯಾವದೇ ಪರಿಮಾಣವನ್ನು ವಶದಲ್ಲಿಟ್ಟುಕೊಳ್ಳಬೇಕಾದರೆ ಆ ಅಜ್ಞೆಯನ್ವಯ ಲೈಸೆನ್ಸನ್ನು ಪಡೆಯಬೇಕಾಗುವದು. ಹುಬ್ಬಳ್ಳಿಯ ಸೀದಾ ಕ್ಷೇತ್ರದಲ್ಲಿ ಯಾವದೇ ವ್ಯಕ್ತಿಗೆ ಅಥವಾ ಸ್ಥಾಪನೆಗೆ ಕೊಟ್ಟ ಸೀದಾ- ಕಾಗದದಲ್ಲಿಯ ಪ್ರತಿಯೊಂದು ಆಹಾರಧಾನ್ಯದ ಯುನಿಟ್ಟಿನ ಸಾಮಾನ್ಯವಾದ ಪರಿಮಾಣವೆಂದರೆ ೭½ ಸೇರುಗಳೆಂದು ನಿರ್ದಿಷ್ಟಪಡಿಸಲಾಗಿತ್ತು. ಇದು ಒಂದು ಯುನಿಟ್ಟಿಗೆ ನಾಲ್ಕು ವಾರಗಳಿಗೆ ದೊರೆಯುವ ಸೀದಾಕ್ಕೆ ಸಮನಾಗಿತ್ತು. ಸೀದಾದ ಹಂಚಿಕೆಯ ಪರಿಮಾಣದಲ್ಲಿ ಈಗ ಮಾಡಲಾದ ಕಡಿತದ ಮೂಲಕ ಲೈಸೆನ್ಸ ಇಲ್ಲದೆ ವ್ಯಕ್ತಿಯು ಸ್ವಾದೀನದಲ್ಲಿ ಇಟ್ಟುಕೊಳ್ಳಬಹುದಾದ ಯಾವದೇ ಸೀದಾ ಆಹಾರಧಾನ್ಯದ ಸಾಮಾನ್ಯ ಪರಿಮಾಣವನ್ನು ಪ್ರತಿಯೊಂದು ಯುನಿಟ್ಟಿಗೆ ಪ್ರಮಾಣಬದ್ಧವಾಗಿ ೫½ ಸೇರುಗಳಿಗೆ ಇಳಿಸಲಾಗಿದೆ. ೩೧ ನೇ ಮಾರ್ಚ ೧೯೪೬ ರಿಂದ ಮುಂದೆ ಸಾಮಾನ್ಯವಾದ ಪರಿಮಾಣಕ್ಕಿಂತ ಹೆಚ್ಚಿಗೆ ಯಾವದೇ ಸೀದಾ ಆಹಾರಧಾನ್ಯದ ಸಂಗ್ರಹವನ್ನು ಆ ಕ್ಷೇತ್ರಗಳಲ್ಲಿ ತನ್ನ ವಶದಲ್ಲಿ ಇಟ್ಟುಕೊಳ್ಳುವ ಯಾವದೇ ವ್ಯಕ್ತಿಯು ತನ್ನ ಸೀದಾ ಕಾಗದದಲ್ಲಿಯ ಕೂಪನ್ನುಗಳನ್ನು ರದ್ದುಗೊಳಿಸಿಕೊಂಡದ್ದರ ಪರಿಣಾಮವಾಗಿ ಅವಶ್ಯಕವಾದ ಲೆಸೆನ್ಸದ ಬಗ್ಗೆ ಹುಬ್ಬಳ್ಳಿ ಸೀದಾ ಅಧಿಕಾರಿಯ ಕಡೆಗೆ ಅರ್ಜಿಯನ್ನು ಮಾಡತಕ್ಕದ್ದು ಮತ್ತು ತನ್ನ ವಶದಲ್ಲಿದ್ದ ಪರಿಮಾಣವು ಸಾಮಾನ್ಯ ಪರಿಮಾಣಕ್ಕಿಂತ ಕಡಿಮೆಯಾಗ ವವರೆಗೆ [illegible] ಆಹಾರ ಧಾನ್ಯದ ಸೀದಾಗಳನ್ನು ಪಡೆಯತಕ್ಕದ್ದಲ್ಲ ಮುಂಬಯಿ ಸರಕಾರದ ಗ್ಯಾಝೆಟದಲ್ಲಿ ಶ್ಯಕ ಪ್ರಕಟನೆಯನ್ನು ಪ್ರಸಿದ್ಧಿಸಲಾಗಿದೆಂದು ಪೂರೈಕೆ ಕಮಿಶನರರು, ಮುಂಬಯಿ, ಇವರು ಹೊರಡಿಸಿದ ಪತ್ರಿಕಾ ಸೂಚನೆಯಲ್ಲಿ ಹೇಳಿದೆ.

ಹರಿಜನ ಪುರವಣಿ

"ಚಲೇಜಾವ"ದ ರಹಸ್ಯ

ಅಹಿಂಸಾರ್ಥದಲ್ಲಿ, 'ಚಲೇಜಾವ' ಇದು ಅತ್ಮದ ನಿರೋಗಿ ಮತ್ತು ಪ್ರಬಲವಾದ ಕೂಗು. ಅದೇನು ಘೋಷಣೆಯಲ್ಲ. ಕೇವಲ ವಿಶುದ್ಧ ಮತ್ತು ಅಹಿಂಸಾ ಸಾಧನೆಯಿಂದ ಪರಕೀಯ ಅತಳಿತೆ ಮತ್ತು ಪ್ರಭುತ್ವದ ಕೊನೆಯೆಂಬುದೆ ಅದರ ಅರ್ಥ. ಪರಕೀಯರ ನಾಶವೆಂಬ ಅದರ ಅರ್ಥವಲ್ಲ. ಅವರೆ ಹಿಂದೀ ಜೀವನದಲ್ಲಿ ಅವರು ಸ್ವಯಂ ಸಮರಸವಾಗುವದೆ ಅದರ ಮರ್ಮ. ಈ ಯೋಜನೆಯಲ್ಲಿ ಪರಕೀಯರ ದ್ವೇಷಕ್ಕೆ ಅವಕಾಶವಿಲ್ಲ. ನಮ್ಮಂತೆ ಅವನೂ ಮನುಷ್ಯನು. ಅವನ ಅಂಜಿಕೆಯೆ ದ್ವೇಷದ ಮೂಲ. ಅಂಜಿಕೆ ಇಲ್ಲದಂತಾದರೆ ದ್ವೇಷವೇ ಉಳಿಯದು.

ಈ ರೀತಿ ಅವರ ಪರಿವರ್ತನೆಯಲ್ಲಿ ನಮ್ಮ ಪರಿವರ್ತನೆಯೂ ಅಡಕವಾಗಿದೆ. ನಾವು ಅವರಿಗಿಂತ ನೀಚರಾಗದಿದ್ದರೆ ಅವರು ನಮಗಿಂತ ಉಚ್ಚರಾಗಲಾರರು. ಅವರ ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು, ಅಟಂಬಾಂಬುಗಳು ನಮ್ಮನ್ನು ಭಯಭೀತಗೊಳಿಸಲಾರವು. ಅವುಗಳ ಅಭಿಲಾಷೆ ನಮಗಿರಕೂಡದೆಂಬುದು ಇದರಿಂದ ಸಿದ್ಧ. ಯಾವುದೊಂದು ಪದಾರ್ಥದ ತ್ಯಾಗಮಾಡಬೇಕಾದರೆ ಅದು ಮೊದಲು ನಮ್ಮ ಹತ್ತರ ಇರಲೇಬೇಕೆಂದು ಬಯಸಿ ನಾವು ಅನೇಕ ಸಲ ತಪ್ಪು ಮಾಡುವೆವು. ಈ ಬಗೆಯ ಆಕರ್ಷಕ ಪ್ರತಿಪಾದನೆಯಿಂದ ಸಂತಾಪ ಹೆಚ್ಚುತ್ತದೆ. ಪಾಪ ಮಾಡಕೂಡದೆಂಬುದನ್ನು ಕಲಿಯಬೇಕಾದರೆ ಮೊದಲು ಎಲ್ಲ ಬಗೆಯ ಪಾಪ ನಾನು ಮಾಡಲಿಕ್ಕೆ ಬೇಕೇ? ಅದರ ಪರಿಜ್ಞಾನವಾದರೆ ಸಾಲದೇ? ಹಾಗಿಲ್ಲದಿದ್ದರೆ, ಪಾಪಕರ್ಮದ ಬಗ್ಗೆ ಬಿಡಲಾರದಷ್ಟು ನಮಗೆ ಪ್ರೇಮವಿದೆಂಬುದನ್ನು ನಾವು ಒಪ್ಪಲೇಬೇಕಾಗುವುದು.

ಪರಕೀಯ ಸತ್ತೆ ಕೊನೆಗಂಡಿತೆಂದು ಭಾವಿಸುವಾ. ಪರಕೀಯನು ಏನು ಮಾಡತಕ್ಕದ್ದು ಬ್ರಿಟಿಶ ಮದ್ದುಗುಂಡುಗಳ ರಕ್ಷಣೆಯಲ್ಲಿ ಅವನು ಸ್ವತಂತ್ರನಿದ್ದನೆಂದು ಹೇಳುವುದು ಕೂಡ ಧಾರ್ಷ್ಟ್ಯವಾತಾಗುವದು. ಹಿಂದುಸ್ತಾನದ ಕೋಟಿಗಟ್ಟಲೆ ಜನಕ್ಕಿಲ್ಲದಿದ್ದ ಹಕ್ಕುಬಾಧ್ಯತೆಗಳನ್ನು ಅನುಭವಿಸುವುದು ತಪ್ಪೆಂದು ಸ್ವತಂತ್ರ ಮನುಷ್ಯನಂತೆ ಅವನು ಕಂಡುಹಿಡಿಯುವನು. ಹಿಂದುಸ್ತಾನದ ಸುಪುತ್ರನಿಗೆ ಒಗ್ಗುವಂಥ ಕರ್ತವ್ಯ ಮಾಡುತ್ತ ಅವನು ಬಾಳಬಲ್ಲನು. ಹಿಂದುಸ್ತಾನಕ್ಕೆ ಭಾರನಾಗಿ ಅವನು ಇನ್ನು ಮುಂದೆ ಬಾಳಲಾರನು. ತದ್ವಿರುದ್ಧವಾಗಿ ಅವನು ಹಿಂದುಸ್ತಾನಕ್ಕಾಗಿ ತನ್ನ ಬುದ್ಧಿ ಸರ್ವಸ್ವವನ್ನೆಲ್ಲ ಸಮರ್ಪಿಸುವನು. ತನ್ನ ಸೇವೆಯಿಂದ ಅವನು ತಾನು ಪರಿಗ್ರಹಿಸಿದ ದೇಶಕ್ಕೆ ಅತ್ಯಾವಶ್ಯನೆಂದೆನಿಸಿಕೊಳ್ಳುವನು.

ಯುರೋಪಿಯನ್ನರಿಗೇ ಇದು ಅನ್ವಯಿಸುವಾಗ ಯುರೋಪಿಯನ್‌ರಂತೆ ತಮಗೂ ಅನುಗ್ರಹವಾಗಬೇಕೆಂದು ಅವರ ರೀತಿ ನಡೆವಳಿಕೆಗಳನ್ನು ಅನುಸರಿಸುತ್ತಿರುವ ಅಂಗ್ಲೋಇಂಡಿಯನ್ ಮೊದಲಾದವರಿಗೆ ಈ ಮಾತು ಬಹಳ ಮಟ್ಟಿಗೆ ಸರಿ ಹೋಗುವುದೆಂದು ಬೇರೆ ಹೇಳಬೇಕಿಲ್ಲ. ಈ ವರೆಗಿನಂತೆ ಇನ್ನು ಮುಂದೆಯೂ ತಮಗೆ ಅದೇ ಬಗೆಯ ವಿಶಿಷ್ಟ ಹಕ್ಕುಬಾಧ್ಯತೆಗಳು ನಡೆಯತಕ್ಕದ್ದೆಂದು ಇಂಥ ಜನರು ಬಯಸಿದರೆ ಕಷ್ಟಭಾಗಿಗಳಾಗಬೇಕಾಗುವದು. ಈ ಬಗೆಯ ವಿಶಿಷ್ಟ ಅನುಗ್ರಹಕ್ಕೆ ಯಾವ ಕಾರಣಗಳೂ ಇರಲಿಲ್ಲ. ಅವರ ಸ್ವಾಭಿಮಾನಕ್ಕೆ ಅದೊಂದು ಬಗೆಯ ಕಲಂಕವಾಗಿದ್ದಿತು. ಅದು ಈಗ ಇಲ್ಲದಂತೆ ಆದುದಕ್ಕಾಗಿ ಅವರು ಕಷ್ಟಕೊಳ್ಳಗಾಗದೆ ಕೃತಜ್ಞರಾಗಿರತಕ್ಕದ್ದು.

ನಾವೆಲ್ಲ-ಪ್ರಭು-ಮತ್ತು ಪ್ರಜೆಗಳು ಈ ವರೆಗೆ ಉಸುರುಗಟ್ಟುವಂಥ ಅಸ್ವಾಭಾವಿಕ ವಾತಾವರಣದಲ್ಲಿ ಇರುತ್ತಿರುವೆವು. ಆದುದರಿಂದ ಪ್ರಾರಂಭದಲ್ಲಿ ಸ್ವಾತಂತ್ರ್ಯದ ಉತ್ಸಾಹಜನಕ ಸುಕಿಲ್ ಗಾಳಿಯನ್ನು ನಮ್ಮ ಫುಪ್ಪುಸಗಳು ಉಸುರಾಡಿಸಲಾರವೆಂದೂ ನಮಗನಿಸಬಹುದು. ಇದೆಲ್ಲ ಆಯಾ ಪಕ್ಷಗಳಿಗೆ ಸತ್ಯವೆಂದೆನಿಸುವುದರಿಂದ ಅಹಿಂಸಾತ್ಮಕವಾಗಿ ವ್ಯವಸ್ಥಿತ ರೀತಿಯಿಂದ ಸಾಗಿದ್ದಾದರೆ ಜಗತ್ತಿಗೆ ಇದೊಂದು ಉದ್ಬೋಧಕ ಪಾಠವಾಗಿ ಪರಿಣಮಿಸುವುದು.

ಉರುಳಿ — ಮೋ. ಕ. ಗಾಂಧಿ

೨೯—೩—೪೬

ಟೀಕೆ ಟಿಪ್ಪಣೆಗಳು

ಸುಭಾಸರು ಬದುಕಿರುವರೆ ?

ಒಮ್ಮೆ ನೇತಾಜಿ ಮಡಿದರೆಂಬ ಸುದ್ದಿ ಪತ್ರಿಕೆಗಳಲ್ಲಿ ಬಂದಿತ್ತು. ನಾನು ಅದನ್ನು ನಂಬಿದೆ. ಆದರೆ ಮತ್ತೆ ಆ ಸುದ್ದಿ ಸುಳ್ಳೆಂದು ತಿಳಿದುಬಂತು. ಆಗಿನಿಂದಲೂ ನನಗೆ ಅವರ ಕನಸು ನನಸಾಗುವವರೆಗೂ ಅವರು ಸಾಯಲಾರರೆಂದು ಅನಿಸತೊಡಗಿತು. ಇದಲ್ಲದೆ, ತಮ್ಮ ಕಾರ್ಯಸಾಧನೆಗಾಗಿ ತಮ್ಮ ವೈರಿಗಳನ್ನೂ ಏಕೆ, ಇಡಿ ಜಗತ್ತನ್ನೂ ಸಹ ಚಕಿಸುವ ಪ್ರಚಂಡ ಶಕ್ತಿ ಅವರಲ್ಲಿದೆಯೆಂದು ನನಗೆ ಮನವರಿಕೆಯಾಗಿದೆ. ಅವರನ್ನು ಬದುಕಿರುವರೆಂದು ತಿಳಿಯಲು ನನ್ನಲ್ಲಿದ್ದ ಕಾರಣಗಳು ಇಷ್ಟೆ. ಭವಿಷ್ಯತ್ತನ್ನು ತಿಳಿದುಕೊಳ್ಳುವ ಯಾವ ಶಕ್ತಿಯೂ ನನ್ನಲ್ಲಿಲ್ಲ.

ಸತ್ಯದ ಅಗ್ರಹವನ್ನು ಬಿಟ್ಟು ನನ್ನಲ್ಲಿ ಬೇರೆ ಶಕ್ತಿಯಿಲ್ಲ. ಅಹಿಂಸೆಯೂ ಅದೇ ಅಗ್ರಹದಿಂದ ಹುಟ್ಟಬಂದುದು. ಶುದ್ಧ ಸತ್ಯವನ್ನು ಈಶ್ವರನೊಬ್ಬನೇ ಬಲ್ಲನು. ಅಥವಾ ಸತ್ಯವೇ ಈಶ್ವರನೆಂದು ಬೇಕಾದರೆ ಹೇಳಿರಿ. ಆದುದರಿಂದ ನನ್ನಲ್ಲಿ ಪರಿಶುದ್ಧ ಸತ್ಯವಿದೆಯೆಂದು ಹೇಳಬರುವದಿಲ್ಲ. ಈ ಸ್ಥಿತಿಯಲ್ಲಿ, ನನ್ನಲ್ಲಿ ನೇತಾಜಿಯ ಇರವಿನ ಬಗೆಗೆ ಅಂತಃಪ್ರೇರಣೆ ಹೊರತು ಬೇರಾವ ಅಧಾರವೂ ಇಲ್ಲದೆ ಇರುವಾಗ ನನ್ನ ನಂಬಿಕೆಯ ಅಧಾರದ ಮೇಲೆ ಯಾರೂ ತಮ್ಮ ನಂಬಿಕೆಯನ್ನು ಕಟ್ಟಕೊಳ್ಳದಿರಲಿ.

ನನ್ನ ನಂಬಿಕೆಯನ್ನು ಅಲ್ಲಗಳೆಯಲು ಸಾಕಷ್ಟು ಪ್ರಮಾಣಗಳಿವೆ. ಬ್ರಿಟಿಶ ಸರಕಾರದ ಪರವಾಗಿ ನೇತಾಜಿಯ ಮರಣವನ್ನು ಸಮರ್ಥಿಸಲಾಗುತ್ತಿದೆ. ಕ್ಯಾಪ್ಟನ ಹಬೀಬುರ್ರಹಮಾನರು ನೇತಾಜಿಯ ಮರಣಕಾಲದಲ್ಲಿ ಅವರ ಮಗ್ಗಲಲ್ಲೆ ಇದ್ದರು. ಅವರು ಸುಟ್ಟು ಭಸ್ಮವಾಗಿರುವ ಅವರ ಅಸ್ಥಿಶೇಷವನ್ನು ತಂದಿರುವರು. ನೇತಾಜಿಯ ಸಂಗಡಿಗರಾದ ಶ್ರೀ ಅಯ್ಯರರೂ ನನ್ನನ್ನು ಭೆಟ್ಟಿಯಾಗಿರುವರು. ಅವರೆನ್ನುತ್ತಾರೆ, ನಿಮ್ಮೀ ಪ್ರೇರಣೆಗೆ ಯಾವದೇ ಬೇರೆ ಅಧಾರವಿಲ್ಲದಿದ್ದಲ್ಲಿ ನೇತಾಜಿ ಬದುಕಿರುವರೆಂಬ ನಿಮ್ಮ ನಂಬಿಕೆಯನ್ನು ಬಿಟ್ಟುಕೊಡಬೇಕು, ಎಂದು. ಈ ಎಲ್ಲ ಪ್ರಮಾಣಗಳಿರುತ್ತಾ, ನಾನೆಲ್ಲರೊಡನೆ ಪ್ರಾರ್ಥಿಸುವದೇನೆಂದರೆ, ನನ್ನ ಆಗ್ರಹವನ್ನು ಮರೆತು ಬಿಡಿರಿ ಮತ್ತು ನಿಮ್ಮ ಮುಂದಿರುವ ಈ ಎಲ್ಲ ಆಧಾರಗಳನ್ನು ನಂಬಿ ನೇತಾಜಿ ನಮ್ಮನ್ನು ಬಿಟ್ಟು ಹೋದರೆಂದೇ ತಿಳಿದುಕೊಳ್ಳಿರಿ. ಪರಮೇಶ್ವರನ ಮುಂದೆ ನ್ಯಾಯಕ್ಕಾಗಿ ಯಾವ ಯುಕ್ತಿಯೂ ಪ್ರಯೋಜನ ಬೀಳುವದಿಲ್ಲ. ಅವನೊಬ್ಬನೇ ಸತ್ಯ, ಮತ್ತು ಸತ್ಯವನ್ನು ಬಿಟು ಯಾವುದೂ ನಡೆಯಲಾರದು.

ಉರುಳಿ — ಮೋ. ಕ. ಗಾಂಧಿ

೩೦—೩—೪೬

ಹಿಂದುಸ್ತಾನಿ

ಹಿಂದಿ ಮತ್ತು ಉರ್ದುವಿನ ಉಚಿತ ಸಮ್ಮಿಲನವಾದ ಹಿಂದುಸ್ತಾನಿಯೇ ರಾಷ್ಟ್ರಭಾಷೆಯೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಆದರೆ ನಾನು ನನ್ನ ಶೈಲಿಯಲ್ಲಿ ಅದನ್ನು ಈ ವರೆಗೆ ಸಿದ್ಧಮಾಡಿ ತೋರಿಲ್ಲ. ಇದರಿಂದ "ಹರಿಜನ ಸೇವಕ"ದ ಭಾಷೆಯನ್ನು ಕುರಿತು ಯಾರೂ ನನ್ನ ಮೇಲೆ ಸಿಟ್ಟಾಗದಿರಲಿ. ರಾಷ್ಟ್ರಭಾಷೆಯ ಕೆಲಸವನ್ನು ಒಬ್ಬ ಒರಟು ಮನುಷ್ಯ ತನ್ನ ಕೈಲಿ ತೆಗೆದುಕೊಂಡು ಕುಳಿತಿರುವುದು ಒಳಿತೇ ಅಯಿತೇನೊ. ಹಾಗೆ ಕೇಳಿದರೆ ಲಕ್ಷಾಂತರ ಜನರು ಒರಟರಾಗಿಯೇ ಇರುವರು. ಅವರ ಪ್ರಯತ್ನದಿಂದಲೇ ಎರಡೂ ಭಾಷೆ ಬಲ್ಲವರು ಹಿಂದೀ ಉರ್ದುಗಳ ಸುಂದರ ಸುಲಭ ಎರಕವನ್ನು ಸಿದ್ಧಗೊಳಿಸಬಲ್ಲರು.

"ಹರಿಜನ ಸೇವಕ"ದ ಓದುಗರು ಭಾಷೆಯ ತಪ್ಪುಗಳನ್ನು ತೋರಿಸಿಕೊಡುತ್ತ ಬಂದರೆ ಅದರ ಭಾಷೆಯ ತಪ್ಪುಗಳನ್ನು ತಿದ್ದಲು ಮತ್ತು ಶುದ್ಧವಾಗಿಡಲು ಸಹಾಯ ಮಾಡಿದಂತಾಗುತ್ತದೆ. "ಹರಿಜನರ ಸೇವಕ"ದ ಭಾಷೆ ಕವಿಗಳಿಗಿಂಪಾಗಿರುವಂತೆಯೂ ಎಲ್ಲ ಹಿಂದೀಯರಿಗೂ ಅದು ಸುಲಭವಾಗಿ ಅರ್ಥವಾಗುವಂತೆಯೂ ಪ್ರಯತ್ನ ಮಾಡಲಾಗುವದು. ಎಲ್ಲರಿಗೂ ತಿಳಿಯಲಾರದ ಶೈಲಿ ಕೀಳು ಶೈಲಿಯೆಂದು ತಿಳಿಯಲ್ಪಡುವದು. ಕೆಲಸಕ್ಕೆ ಬಾರದ ಭಾಷೆ ಬಾಹ್ಯಾಡಂಬರದ್ದು. ಇಂಥ ಶೈಲಿಯನ್ನು ನಿರ್ಮಿಸುವ ಎಲ್ಲ ಪ್ರಯತ್ನಗಳೂ ವಿಫಲವಾಗಿವೆ.

ಉರುಳಿ — ಮೋ. ಕ. ಗಾಂಧಿ

೩೦—೩—೪೬.

ಗಾಂಧೀ ಮಂದಿರ ?

ಸುದ್ದಿಗಾರನೊಬ್ಬ ನನಗೆ ವರ್ತಮಾನ ಪತ್ರದ ತುಣುಕೊಂದನ್ನು ಕಳಿಸಿರುವನು. ನನ್ನ ಹೆಸರಿನ ಮಂದಿರವನ್ನು ಕಟ್ಟಿಸಲಾಗಿದ್ದು ಅಲ್ಲಿ ನನ್ನ ಮೂರ್ತಿ ಪೂಜೆ ನಡೆಯುತ್ತಿದೆಂದು ಆ ಪತ್ರಿಕೆಯಲ್ಲಿ ಬರೆಯಲಾಗಿದೆ. ಇದೊಂದು ಬಗೆಯ ಗ್ರಾಮ್ಯ ಮೂರ್ತಿ ಪೂಜೆಯೆಂದು ನಾನು ತಿಳಿಯುವೆ. ಈ ಮಂದಿರವನ್ನು ಕಟ್ಟಿಸಿದವರು ತಮ್ಮ ಹಣವನ್ನು ಹಾಳು ಮಾಡಿಕೊಂಡರು, ಅಜ್ಞ ಗ್ರಾಮವಾಸಿಗಳಿಗೆ ತಪ್ಪು ಹಾದಿ ಹಿಡಿಸಿದರು ಮತ್ತು ನನ್ನ ಇಡೀ ಜೀವನವನ್ನು ಹಾಳುಗೆಡಿಸಿ ನನ್ನ ಅಪಮಾನ ಮಾಡಿದರು. ಇದರಲ್ಲಿ ಪೂಜೆಯ ಅರ್ಥ ಸಿದ್ಧಿಸುವದಿಲ್ಲ ಇಷ್ಟೇ ಅಲ್ಲ ತದ್ವಿರುದ್ಧ ಅನರ್ಥವುಂಟಾಗುವುದು ಹೊಟ್ಟೆಪಾಡಿಗಾಗಿಯೆಂದು ಇಲ್ಲವೆ ಸ್ವರಾಜ್ಯ ಸಾಧನೆಗೆಂದು ಯಜ್ಞರೂಪವಾಗಿ ಚರಖಾದಿಂದ ನೂಲು ತೆಗೆಯುವದು ಚರಖಾ ಪೂಜೆಯೆಂದು ನನ್ನ ಭಾವನೆ. ಗಿಳಿಯಂತೆ ಗೀತಾಪಾರಾಯಣ ಮಾಡುವುದರಿಂದ ಅದರ ಪೂಜೆ ಮಾಡಿದಂತಾಗಲಿಲ್ಲ. ಅದರ ತಿರುಳನ್ನು ತಿಳಿದುಕೊಂಡು ಆಚರಿಸಿದರೆ ನಿಜವಾದ ಗೀತಾ ಪೂಜೆ ಮಾಡಿದಂತಾಗುವದು. ಉಪದೇಶದಂತೆ ನಡೆಯಲು ಸಹಾಯಕ್ಕೆ ಗೀತಾ ಪಾರಾಯಣವು ಯೋಗ್ಯವಾಗಿದೆ. ಮನುಷ್ಯನ ಆಶಕ್ತತೆಯನ್ನೆಲ್ಲ ಆದರೆ ಅವರ ಗುಣಾನುಕರಣವೇ ನಿಜವಾದ ಪೂಜೆ. ಜೀವಂತ ಮನುಷ್ಯನ ಮೂರ್ತಿ ಪೂಜೆ ಮಾಡುವದೆಂದರೆ ಹಿಂದೂ ಧರ್ಮದ ಪತನ ಕೊನೆ ಮುಟ್ಟದಂತೆ. ಮರಣಕ್ಕಿಂತ ಮೊದಲು ಯಾವ ಮನುಷ್ಯನನ್ನೂ ಸರ್ವಶ್ರೇಷ್ಠನೆಂದು ಕರೆಯಲಾಗದು. ಮರಣಾನಂತರವೂ ಯಾರಿಗೆ ಅವನಲ್ಲಿದ್ದ ಆರೋಪಿತ ಗುಣದ ಮೇಲೆ ವಿಶ್ವಾಸವಿರುತ್ತದೆಯೊ ಅವನು ಮಾತ್ರ ಅವನಿಗೆ ಶ್ರೇಷ್ಠ ಮನುಷ್ಯನೆಂದು ಕರೆಯಬಹುದು. ಈಶ್ವರನೊಬ್ಬನೆ ಮನುಷ್ಯನ ಹೃದ್ಗತವನ್ನು ತಿಳಿಯತಕ್ಕವನೆಂಬುದು ಸತ್ಯ ಸಂಗತಿ. ಆದುದರಿಂದ ಮೃತರ ಇಲ್ಲವೆ ಜೀವಂತ ಇದ್ದವರ ಪೂಜೆ ಮಾಡುವ ಬದಲು ಪೂರ್ಣ ಮತ್ತು ಸತ್ಯಸ್ವರೂಪನಾದ ಪರಮಾತ್ಮನ ಪೂಜೆಯನ್ನು ಮಾಡುವದು ಅವನನ್ನು ಭಜಿಸುವದು ಸುರಕ್ಷಿತವಾದುದು. ಫೋಟೊ ಇಡುವದಾದರೂ ಒಂದು ಬಗೆಯ ಪೂಜೆಯಲ್ಲವೇ ಎಂಬ ವಾದಿಸಲಾಗುತ್ತದೆ. ಈ ವಿಷಯದಲ್ಲಿ ನಾನು ಈ ಮೊದಲು ಬರೆದಿದ್ದೇನೆ. ಫೋಟೊ ಇಡುವ ಪದ್ಧತಿ ವೆಚ್ಚದ್ದಂತೂ ಇದೆ. ಆದರೆ ಅದು ನಿರ್ದೋಷವಾಗಿದೆಂದು ತಿಳಿದು ನಾನು ಅದನ್ನು ಸಹಿಸುತ್ತ ಬಂದಿರುವೆನು. ಆದರೆ ಮೇಲೆ ಹೇಳಿದಂಥ ಕೃತಿಗಳಿಗೆ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ರೀತಿಯಿಂದ ಅವಕಾಶ ಅದರಿಂದ ಸಿಕ್ಕಿದ್ದಾದರೆ ಅದೂ ಹಾಸ್ಯಾಸ್ಪದ ಮತ್ತು ಹಾನಿಕಾರಕವೆಂದು ತಿಳಿದುಕೊಂಡು ಬಿಟ್ಟುಬಿಡಬೇಕಾಗುವದು. ಈ ಗುಡಿಯೊಡೆಯನು ಅದರಲ್ಲಿದ್ದ ಮೂರ್ತಿಯನ್ನು ತೆಗೆದುಹಾಕಿ ಅದನ್ನು ನೂಲುವ ಕೇಂದ್ರವನ್ನಾಗಿ ಮಾರ್ಪಡಿಸಿದರೆ ಅತ್ಯಂತ ಇಷ್ಟಸಂಗತಿಯಾಗುವದು. ಈ ನೂಲುವ ಕೇಂದ್ರದಲ್ಲಿ ಬಡವರು ಅರಳೆ ಹಿಂಜಿ ನೂಲು ತೆಗೆದು ತನ್ನ ಕೂಲಿಯನ್ನು ಪಡೆಯಬಹುದಾಗಿದೆ. ಬೇರೆ ಕೆಲವರು ಕೇವಲ ಯಜ್ಞಕ್ಕಾಗಿಯೆಂದು ಅಲ್ಲಿ ಬಂದು ನೂಲು ತೆಗೆದು ಎಲ್ಲರೂ ಖಾದೀಧಾರಿಗಳಾಗಬಹುದು. ಇದೇ ಗೀತೆಯ ಕರ್ಮಯೋಗ. ಜೀವನದಲ್ಲಿ ಇದನ್ನಾಚರಿಸುವದರಿಂದ ಗೀತೆಯ ಮತ್ತು ನಿಜವಾದ ಮೂರ್ತಿಪೂಜೆ ಮಾಡಿದಂತಾಗುವದು. ಎರಡನೆಯ ಬಗೆಯ ಪೂಜೆ ಹಾನಿಕಾರಕವಿದ್ದುದರಿಂದ ಅದನ್ನು ಬಿಟ್ಟುಗೊಡುವದು ಇಷ್ಟವಾಗಿದೆ.

ಮುಂಬಯಿ — ಮೋ. ಕ. ಗಾಂಧಿ,

೧೫—೩—೪೬

(ಹರಿಜನ ಬಂಧುವಿನಿಂದ)

ಪ್ರಶ್ನ—ಪೆಟ್ಟಿಗೆ

ಪ್ರಶ್ನೆ:-ಅನೇಕ ಮಹತ್ವದ ನಗರಗಳಲ್ಲಿ ಕುದುರೆ ಜೂಜಾಟ ಯಥಾಪ್ರಕಾರ ಸಾಗಿದೆ. ಉಚ್ಚ-ನೀಚರಿಗೆ, ಶ್ರೀಮಂತ-ಬಡವರಿಗೆಲ್ಲ ಅದು ಆಕರ್ಷಕವಾಗಿದೆ. ಅದು ಅನೀತಿಗೆಳೆಸುತ್ತದೆ. ಕೆಲ ಸಂದರ್ಭಗಳಲ್ಲಿ ದುಡ್ಡು ಹಾಳಾಗುವದು. ಅನೇಕ ಸಂಸ್ಥಾನಿಕರು ತಮ್ಮ ಪ್ರಜೆಗಳ ಲಕ್ಷಾವಧಿ ರೂಪಾಯಿಗಳನ್ನು ಜೂಜಾಟದ ಕುದುರೆ ಕೊಳ್ಳುವುದಕ್ಕಾಗಿ ಹಾಳು ಮಾಡುತ್ತಿರುವರು. ಈ ಅಪಾಯಕರ ಜೂಜಾಟವನ್ನು ನಿಯಂತ್ರಿಸಲು ಹೊಸ ಸರಕಾರ ಯಾವ ಉಪಾಯ ಯೋಜಿಸತಕ್ಕದ್ದು?

ಉತ್ತರ:- ಈ ದುರಾಚಾರದ ಬಗ್ಗೆ ಯಾವದೇ ಬಗೆಯ ಸಂದೇಹವಿಲ್ಲ. ಅದರಿಂದ ಒಳಿತಾಗುವುದೆಂದು ತಿಳಿದುಕೊಳ್ಳುವದು ಅತ್ಯಂತ ಸಂಶಯಾಸ್ಪದ. ದಾರಿದ್ರ್ಯ ಬೆಳೆಯುತ್ತಿರುವ ಸದ್ಯದಂಥ ಪ್ರಸಂಗದಲ್ಲಿಯಂತೂ ಇದು ಮಹಾಪರಾಧ. ನವರಾಷ್ಟ್ರೀಯ ಸರಕಾರವು ಈ ದುರಾಚಾರವನ್ನು ನಿಯಂತ್ರಿಸಲು ಬಹಳಷ್ಟು ಯತ್ನ ಮಾಡಬಲ್ಲದು. ಆದರೆ ಅದರ ಕಾರ್ಯಕ್ಷೇತ್ರದ ಮರ್ಯಾದೆಯನ್ನು ನಾವು ತಿಳಿದುಕೊಳ್ಳತಕ್ಕದ್ದು. ಲೋಕಪ್ರಿಯ ಅಂದರೆ ಜನತಾ ಸರಕಾರವಾದ್ದರಿಂದ ಜನಾಭಿಪ್ರಾಯಕ್ಕಿಂತ ಅದು ಬಹಳ ಮುನ್ನುಗ್ಗದು. ಸುಧಾರಕರಿಗೆ ಸಂಬಂಧಿಸಿದ ವಿಶಿಷ್ಟ ಕಾರ್ಯವಿದು. 'ಚೈನಿ'ಗಾಗಿ ಸಾರ್ವಜನಿಕರ ಹಣವನ್ನು ಹಾಳುಮಾಡಿಯೂ ಆಳರಸರು ಹಾಕಿಕೊಟ್ಟ ಈ ದುರಾಚಾರದ ಮುದ್ರೆಯನ್ನು ಕಿತ್ತೊಗೆಯಲು ಈ ಸರಕಾರದವರು ಉದಾಹರಣೆ ಹಾಕಿಕೊಡಬಲ್ಲರೆಂಬುದು ನಿರ್ವಿವಾದ. ಈ ರಾಷ್ಟ್ರೀಯ ಸರಕಾರದವರು ಹಾಕಿಕೊಡುವ ಸದಾಚಾರಗಳನ್ನು ಸಂಸ್ಥಾನಿಕರೂ ಅನುಸರಿಸಬಹುದಾಗಿದೆ.

ಉರುಳಿ — ಮೋ. ಕ. ಗಾಂಧಿ

೩೦-೩-೪೬

ಮುಂಬಯಿಯಲ್ಲಿ ಐದು ದಿನ

ಯಾವುದು ಚೆಲುವು ?

"ಚಿಕ್ಕ ಚಿಕ್ಕ ಮಡಿಗಳಲ್ಲಾದರೂ ಹೂಗಿಡಗಳನ್ನು ಬೆಳೆಸಲು ನೀವು ಜನರಿಗೆ ಹೇಳಬಾರದೆ ? ದೇಹಕ್ಕೆ ಆಹಾರ ಅವಶ್ಯವಾದಂತೆ ಆತ್ಮಕ್ಕೆ ವರ್ಣವಿನ್ಯಾಯ, ಸೌಂದರ್ಯಗಳು ಅವಶ್ಯ'' ಎಂದು ಅಗಾಥಾ ಹ್ಯಾರಿಸನ್ನಳು ಗಾಂಧೀಜಿಯನ್ನು ಕೇಳಿದಳು. ಮುಂಬಯಿಯ ಬಿರ್ಲಾ ಭವನದ ಮಾಳಿಗೆ ತೋಟದ ಹೂಗಿಡಗಳನ್ನು ಕಿತ್ತು ಕಾಯಿಪಲ್ಲೆಗಳನ್ನು ಬೆಳೆಸಿರೆಂದು ಸೇಠ ರಾಮೇಶ್ವರದಾಸ ಬಿರ್ಲಾ ಅವರಿಗೆ ಗಾಂಧೀಜಿ ಸೂಚಿಸಿದ್ದಕ್ಕಾಗಿ ಅವಳ ಈ ಕೆಣಕುವಾತು. "ಇಲ್ಲ," ಎಂದರು ಗಾಂಧೀಜಿ, "ನಾನು ಹೇಳಲಾರೆ. ಕಾಯಿಪಲ್ಲೆ ಗಿಡಗಳಲ್ಲೆ ವರ್ಣಸೌಂದರ್ಯವನ್ನು ನೀವು ಕಾಣಬಾರದೇಕೆ ? ಮತ್ತೆ ಆಕಾಶದ ನಿರಭ್ರತೆಯಲ್ಲಿಯೂ ಸೌಂದರ್ಯವಿದೆ. ಆದರೆ ನಿಮಗೆ ಬೇಕಾಗಿವೆ ಕಾಮನಬಿಲ್ಲಿನ ಬಣ್ಣಗಳು—ಬರಿ ಕಣ್ಮಸಕು—ಸುಂದರವಾದುದು ಉಪಯುಕ್ತವಾಗಿರಬೇಕಿಲ್ಲ, ಉಪಯುಕ್ತವಾದ ವಸ್ತು ಸುಂದರವಾಗಿರಲಾರದು, ಎಂಬ ನಂಬಿಕೆಯನ್ನು ನಮಗೆ ಕಲಿಸಿರುವರು. ಉಪಯುಕ್ತವಾದುದೂ ಸುಂದರವಾಗಿರಬಲ್ಲದು ಎಂದು ತೋರಿಸಿಕೊಡಬೇಕೆನ್ನುವೆ ನಾನು." ಅಂತೂ ಹೂ ನಳನಳಿಸುತಿದ್ದಲ್ಲಿ ಈಗ ಕಾಯಿಪಲ್ಲೆ ನಟ್ಟಿದ್ದಾರೆ. ಯಾರೊಬ್ಬರ ಕಲಾದೃಷ್ಟಿಗೆ ಅದು ಮುಳ್ಳಾಗಿದೆಯೆಂದು ನನಗನಿಸುವದಿಲ್ಲ.

ಮಹತ್ವದ ನಿರ್ಣಯ

ಈ ಬಾರಿಯ ಕಾಂಗ್ರೆಸ್ ಕಾರ್ಯಸಮಿತಿಯ ಗೊತ್ತುವಳಿಗಳನ್ನು ಹಿಂದುಸ್ತಾನಿಯಲ್ಲಿಯೇ ಸಿದ್ಧಗೊಳಿಸಬೇಕೆಂದು ಗಾಂಧೀಜಿ ಹಟ ಹಿಡಿದದ್ದರಲ್ಲಿಯೂ ಬಾಹ್ಯ ಆಡಂಬರಗಳ ಕುರಿತು ಶುದ್ಧ ಅಲಕ್ಷ್ಯ ಮತ್ತು ಅಂತರಿಕ ಮೂಲಭೂತ ವಿಷಯಗಳಲ್ಲಿ ಮಹಾಛಲದ ಅವರ ಪ್ರವೃತ್ತಿಯೇ ಪ್ರತಿಬಿಂಬಿಸಿತ್ತು. ಹಿಂದುಸ್ತಾನಿ ಸರಿಯಾಗಿ ಅರ್ಥವಾಗದಿರುವವರ ಸಲುವಾಗಿ ಅವುಗಳ ಇಂಗ್ಲೀಷ ಅನುವಾದವೊಂದನ್ನು ಒದಗಿಸಲಾಗಿತ್ತು. ಕಾಂಗ್ರೆಸ್ ಅಧ್ಯಕ್ಷರಿಗೆ ಈ ಬದಲಾವಣೆಯಲ್ಲಿ ಹುರುಪು ಬಹಳ. ಇನ್ನು ಮುಂದೆ ಎಲ್ಲ ಕಾರ್ಯ ಸಮಿತಿ ಗೊತ್ತುವಳಿಗಳೂ ಮೊದಲು ಹಿಂದುಸ್ತಾನಿಯಲ್ಲಿಯೆ ಇರಬೇಕು ಮತ್ತು ಮೂಲ ಹಿಂದುಸ್ತಾನಿ ಪ್ರತಿಯನ್ನೇ ಪತ್ರಿಕೆಗಳಿಗೂ ಒದಗಿಸಲಾಗುವದು ಎಂಬ ಮಹತ್ವದ ನಿರ್ಣಯವನ್ನು ಅಧ್ಯಕ್ಷರು ಮಾಡಿದ್ದಾರೆ. ಇನ್ನು ಇರುವ ತೊಂದರೆಯೆಂದರೆ ಅದನ್ನು ತಂತಿ ಮೂಲಕ ಹಂಚುವದರದು. ಸದ್ಯಕ್ಕೆ ಇದಕ್ಕಿರುವ ಉಪಾಯವೊಂದೆ—ಹಿಂದುಸ್ತಾನಿ ಸುದ್ದಿಯನ್ನು ರೋಮನ್ ಲಿಪಿಗೆ ಪರಿವರ್ತಿಸುವದು. ಹಿಂದುಸ್ತಾನಿಯಲ್ಲಿ ಸುದ್ದಿಗಳನ್ನು ಹಂಚುವ ವ್ಯವಸ್ಥೆ ನಮ್ಮ ಸುದ್ದಿಸಂಸ್ಥೆಗಳಲ್ಲಿರದಿಷದು ವಿಷಾದಕರ, ಲಜ್ಜಾವಹ. ಯಾವುದಾದರೊಂದು ವಾರ್ತಾಹರ ಸಂಸ್ಥೆ ಒಳನಾಡ ಸುದ್ದಿಗಳನ್ನು ಹಿಂದುಸ್ತಾನಿಯಲ್ಲಿ ಹಂಚುವ ವ್ಯವಸ್ಥೆಯನ್ನು ಪ್ರಾರಂಭಿಸಿದರೆ ಅದು ತನ್ನ ಪ್ರತಿಸ್ಪರ್ಧಿಗಳಿಗಿಂತ ಬಹಳ ಹೆಚ್ಚು ಲಾಭಮಾಡಿಕೊಳ್ಳುವದು. ಒಂದು ಸಂಸ್ಥೆ ಹಾಗೆ ಮಾಡುವ ವಿಚಾರದಲ್ಲಿದೆಯೆಂದು ಕೇಳುತ್ತೇನೆ.

ಜೀವನದ ಸಂಧ್ಯೆಯಲ್ಲಿ

ಮುಂಬಯಿಯಲ್ಲಿ ಗಾಂಧೀಜಿಯ ಐದು ದಿನಗಳ ವಸತಿಕಾಲದಲ್ಲಿ ಹೆಚ್ಚಿನ ಹೊತ್ತು ಕಾರ್ಯಸಮಿತಿಯ ಸಭೆಗಳಲ್ಲೇ ಕಳೆದು ಹೋದರೂ ತಮ್ಮ ಇದೇ ಈಗ ಹುಟ್ಟಿದ ಮಾನಸ ಪುತ್ರ ನಿಸರ್ಗೋಪಚಾರ ಕೇಂದ್ರವನ್ನು ಮುಂಬಯಿ ಜನತೆಗೆ ಪರಿಚಯ ಮಾಡಿಕೊಡಲು ಅವರು ಸಮಯ ಸಾಧಿಸಿಕೊಂಡರು. "ಕಳೆದ ಐವತ್ತು ವರ್ಷಗಳಲ್ಲಿ ನನ್ನ ವಿನೋದವಾಗಿದ್ದುದು ಈಗ ವ್ಯಸನವೇ ಆಗಿಬಿಟ್ಟಿದೆ,'' ಎಂದು ಅವರು ಈಚೆಗೆ ಸರದಾರರಿಗೆ ಬರೆದ ಪತ್ರವೊಂದರಲ್ಲಿ ಹೇಳಿರುವರು. "ಬಡವರ ಸೇವೆಗೆ ನನ್ನಲ್ಲೊಂದು ಗುಣವಿಶೇಷವುಂಟೆಂದು ಕಂಡುಬಂದೂ ನಾನು ಅದರ ಪೂರ್ಣ ಉಪಯೋಗ ಮಾಡಲಿಲ್ಲವೆಂದಾದರೆ ನಾನು ಮೂರ್ಖನೆಂದು ಸಿದ್ಧವಾಗುವುದು,'' ಎಂದು ಅವರು ಇನ್ನೊಬ್ಬ ಗೆಳೆಯರೊಡನೆ ಮಾತಾಡುವಾಗ ಹೇಳಿದರು. ಹೀಗೆ, ತಮ್ಮ ಎಪ್ಪತ್ತಾರನೆ ವಯಸ್ಸಿನಲ್ಲಿ, ಜೀವನದ ಮುಂಜ್ಜಂಜೆಯ ಸಮಯ, ಗಾಂಧೀಜಿ ತಮ್ಮ ಚಟುವಟಿಕೆಗಳಿಗೆ ಇನ್ನೊಂದನ್ನು ಸೇರಿಸಲು ನಿರ್ಧರಿಸಿದ್ದಾರೆ.

ನಿಸರ್ಗೋಪಚಾರವೆಂದರೇನು ?

ಮತ್ತೆ ಇದೇಕೆ ಅವರನ್ನು ಹೀಗೆ ಗಾಢವಾಗಿ ಹಿಡಿದುಕೊಂಡಿದೆ ? ತಮ್ಮ ಕಲ್ಪನೆಯ ನೈಸರ್ಗಿಕ ಚಿಕಿತ್ಸಾಪದ್ಧತಿಗೂ ಚಿಕಿತ್ಸೆಯ ಇತರ ಪದ್ಧತಿಗಳಿಗೂ ಇರುವ ಭೇದವನ್ನು ಅವರು ಬಿರ್ಲಾ ಭವನಕ್ಕೆ ಬಂದ ಅಪರೂಪದ ಆಗಂತುಕನೊಬ್ಬನಿಗೆ ವಿವರಿಸಿದರು. "ಸಾಮಾನ್ಯ ಚಿಕಿತ್ಸಾಪದ್ಧತಿಯಲ್ಲಿ ರೋಗಿ ವೈದ್ಯನಲ್ಲಿಗೆ ತನ್ನ ರೋಗವನ್ನು ನಿವಾರಿಸಬಹುದಾದ ಔಷಧವನ್ನು ಪಡೆಯಲು ಬರುತ್ತಾನೆ. ಡಾಕ್ಟರರು ಅವನಿಗೊಂದು ಔಷಧವನ್ನು ನಿರ್ದೇಶಿಸುತ್ತಾರೆ. ರೋಗಿಯ ವಿಕಾರದ ಅಸಾಧಾರಣ ಚಿಹ್ನಗಳು ನಿವಾರಣೆಯಾದ ಕೂಡಲೆ ಡಾಕ್ಟರರ ಕರ್ತವ್ಯ ಮುಗಿಯಿತು. ಅದರೊಡನೆ ಆ ರೋಗಿಯಲ್ಲಿ ಅವರಿಗಿರುವ ಆಸ್ಥೆ ಕೂಡ. ನಿಸರ್ಗೋಪಚಾರದವನು ಯಾವುದೊಂದು ಚಿಕಿತ್ಸೆಯನ್ನು ರೋಗಿಗೆ 'ಮಾರು'ವದಿಲ್ಲ. ತನ್ನ ಮನೆಯಲ್ಲಿ ಸರಿಯಾದ ರೀತಿಯಲ್ಲಿ ಬಾಳುವ ವಿಧಾನವನ್ನು ಅವನಿಗೆ ನಿಸರ್ಗೋಪಚಾರಕನು ಹೇಳಿಕೊಡುತ್ತಾನೆ. ಅದು ಅವನ ವಿಶಿಷ್ಟ ರೋಗವನ್ನಷ್ಟೇ ಗುಣಪಡಿಸುವದಲ್ಲದೆ ಇನ್ನು ಮುಂದೆ ರೋಗಕ್ಕೆ ಬಲಿಯಾಗದಂತೆ ಅವನನ್ನು ಕಾಪಾಡುತ್ತದೆ. ಸಾಧಾರಣ ಡಾಕ್ಟರನಾಗಲಿ ವೈದ್ಯನಾಗಲಿ ರೋಗನಿದಾನದ ಅಧ್ಯಯನದಲ್ಲಷ್ಟೇ ಆಸಕ್ತನಾಗಿರುತ್ತಾನೆ. ನಿಸರ್ಗೋಪಚಾರವಾದಿಗೆ ಆರೋಗ್ಯಜೀವನದ ಅಧ್ಯಯನದಲ್ಲೇ ಹೆಚ್ಚು ಆಸಕ್ತಿ. ಸಾಧಾರಣ ಡಾಕ್ಟರನ ಆಸಕ್ತಿ ಮುಗಿದ ಬಿಂದುವಿನಿಂದಲೇ ಅವನ ಆಸಕ್ತಿಯ ಅರಂಭವಾಗುವದು. ನಿಸರ್ಗ ಚಿಕಿತ್ಸೆಯಲ್ಲಿ ರೋಗಿಯ ರೋಗದ ಪರಿಹಾರವೆಂಬುದು ರೋಗ, ಅನಾರೋಗ್ಯಗಳಿಗೆ ಎಡೆಗೊಡದ ಜೀವನ ಪದ್ಧತಿಯ ಅರಂಭ ಮಾತ್ರ ಆಗುತ್ತದೆ. ಈ ಪ್ರಕಾರ ನಿಸರ್ಗ ಚಿಕಿತ್ಸೆ ಒಂದು ಜೀವನಪದ್ಧತಿ ಹೊರತು ಚಿಕಿತ್ಸೆಯ ಪದ್ಧತಿಯಲ್ಲ.''

"ನಿಸರ್ಗ ಚಿಕಿತ್ಸೆಯಿಂದ ಎಲ್ಲ ರೋಗಗಳೂ ಗುಣ ಹೊಂದುವವೆಂದು ಹೆಗ್ಗಳಿಕೆ ಹೇಳಿಕೊಳ್ಳುವದಿಲ್ಲ,'' ಎಂದು ಗಾಂಧೀಜಿ ರುಂಗಟಾ ಭವನದಲ್ಲಿ ನೆರೆದ ಪ್ರಾರ್ಥನಾಸಭೆಯಲ್ಲಿ ವಿವರಿಸಿದರು. "ಯಾವ ಚಿಕಿತ್ಸಾ ಪದ್ಧತಿಯೂ ಹಾಗೆ ಮಾಡಲಾರದು. ಇಲ್ಲದಿದ್ದರೆ ನಾವೆಲ್ಲರೂ ಅಮರರಾಗಿಬಿಡುತಿದ್ದೆವು. ಆದರೆ ತಾನು ಗುಣಪಡಿಸಲಾರದ ಜಡ್ಡನ್ನು, ನಿರುದ್ವೇಗ ಸಮಬುದ್ಧಿಯಿಂದ ಎದುರಿಸಿ ಸಹಿಸಿಕೊಳ್ಳುವ ಶಕ್ತಿಯನ್ನು ರೋಗಿಗೆ ನಿಸರ್ಗ ಚಿಕಿತ್ಸೆ ಕೊಡುತ್ತದೆ. ಕೋಟ್ಯಂತರ ಜನರಿಗೆ ಯಾವುದು ಲಭ್ಯವಾಗುವದಿಲ್ಲವೋ ಅದು ನಮಗೂ ತ್ಯಾಜವೆಂದು ಒಮ್ಮೆ ನಾವು ನಿರ್ಧರಿಸಿಕೊಂಡೆವಾದರೆ ಬಡವಬಲ್ಲಿದರಿಬ್ಬರಿಗೂ ಸಮಸ್ತರೋಗಗಳಿಗೆ ಒಂದೇ ಪರಿಹಾರವೆಂದು ನಿಸರ್ಗೋಪಚಾರವನ್ನೇ ಶ್ರಯಿಸಬೇಕಾಗುವದು.''

ಪ್ರಚಂಡ ಆಯುಧ

ನಿಸರ್ಗೋಪಚಾರಕನ ಬತ್ತಳಿಕೆಯಲ್ಲಿ ರಾಮನಾಮದಂಥ ಪ್ರಚಂಡ ಬಾಣ ಬೇರೊಂದಿಲ್ಲ. "ಇದನ್ನು ಕೇಳಿ ಯಾರೂ ಕಕ್ಕಾವಿಕ್ಕಿಯಾಗದಿರಲಿ," ಎಂದರವರು. "ಮೊನ್ನೆಮೊನ್ನೆ ಒಬ್ಬ ಪ್ರಸಿದ್ಧ ಆಯುರ್ವೇದ ಪಂಡಿತರು ನನಗೆ ಹೇಳಿದರು: 'ನನ್ನ ಜೀವಮಾನವೆಲ್ಲ ನಾನು ಔಷಧಗಳನ್ನು ಕೊಡುವದರಲ್ಲಿ ಕಳೆದಿದ್ದೇನೆ. ಆದರೆ ದೈಹಿಕ ವಿಕಾರಗಳಿಗೆ ಪರಿಹಾರವೆಂದು ರಾಮನಾಮವನ್ನು ನೀವು ನಿರ್ದೇಶಿಸಿದ ನಂತರ ನಿಮ್ಮೀ ಹೇಳಿಕೆಗೆ ಚರಕ ವಾಗ್ಭಟರ ಅಧಿಕಾರವಾಣಿಯ ಪ್ರಮಾಣವಿರುವದು ನನಗೆ ನೆನಪಾಯಿತು.' ಅಧ್ಯಾತ್ಮಿಕ ವಿಕಾರಗಳಿಗೆ ರಾಮನಾಮದ ಪಥ್ಯದ ನಿರ್ದೇಶ ಈ ಭೂಮಿಯಷ್ಟೆ ಹಳೆಯದು. ಆದರೆ ಮಹತ್ತು ಅಣುವನ್ನೊಳಗೊಂಡಿರುತ್ತದೆ. ಅದುದರಿಂದ ರಾಮನಾಮಧ್ಯಾನ ನಮ್ಮ ದೈಹಿಕ ವಿಕಾರಗಳಿಗೂ ರಾಮಬಾಣೋಪಾಯವೆಂದು ನನ್ನ ವಾದ. ನೈಸರ್ಗಿಕೋಪಚಾರಕನು ತನ್ನ ರೋಗಿಗೆ, 'ನನ್ನನ್ನು ಕರೆಸು, ಅಂದರೆ ನಿನ್ನ ರೋಗವನ್ನು ನಾನು ಪರಿಹರಿಸುವೆ' ಎನ್ನುವದಿಲ್ಲ. ಪ್ರತಿಯೊಂದು ಪ್ರಾಣಿಯಲ್ಲಿಯೂ ಅಂತರ್ಹಿತವಾಗಿರುವ ಸರ್ವರೋಗ ಪರಿಹಾರಕ ಶಕ್ತಿಯನ್ನು ತಿಳಿಹೇಳಿ, ಆ ಶಕ್ತಿಯನ್ನು ಆವಾಹಿಸಿ ಜೀವನದಲ್ಲಿ ಅದನ್ನೊಂದು ಸಚೇತನ ಶಕ್ತಿಯನ್ನಾಗಿ ಮಾಡಿಕೊಂಡರೆ ವಿಕಾರಗಳಿಂದ ಮುಕ್ತನಾಗಬಹುದೆಂದಿಷ್ಟೆ ಅವನು ಹೇಳಿಕೊಡುವನು. ಈ ತತ್ವದಲ್ಲಿ ಅಡಕವಾಗಿ[illegible] ಸಾಮರ್ಥ್ಯವನ್ನು ಸಾಧಿಸಿಕೊಂಡರೆ ಸಾಕು, ಹಿಂದುಸ್ತಾನ ಸ್ವತಂತ್ರ ದೇಶವಾಗುವದಿಷ್ಟೇ ಅಲ್ಲ, ಇಂದಿನಂತೆ ಅನಾರೋಗ್ಯಪಿಡುಗುಗಳ ನಾಶಾಗಿರದೆ ಆರೋಗ್ಯವಂತರ ದೇಶವಾಗುವದು."

ಅದರ ಪ್ರಯೋಜನ ಮತ್ತು ಇತಿಮಿತಿ

"ರಾಮನಾಮದ ಶಕ್ತಿಗೆ ಕೆಲವೊಂದು ನಿರ್ಬಂಧಗಳೂ ಇತಿಮಿತಿಗಳೂ ಇವೆ,'' ಎಂದು ಅವರು ಮುಂದುವರಿಸಿದರು. "ರಾಮನಾಮ ಮಾಟದ ಮಂತ್ರವಲ್ಲ. ಯಾರಾದರೊಬ್ಬನು ಅತಿಭೋಜನ ಮಾಡಿ ಜಡ್ಡಾಗಿದ್ದು, ಇನ್ನೊಮ್ಮೆ ತಿನ್ನುವ ಹೇವದಿಂದಲೇ ಆ ಜಡ್ಡನ್ನು ಗುಣಪಡಿಸಿಕೊಳ್ಳಲು ಆಶಿಸಿದರೆ, ರಾಮನಾಮ ಅವನಿಗೆ ಪ್ರಯೋಜನಬಾಗದು. ರಾಮನಾಮವನ್ನು ಒಳಿತಿಗೆ ಹೊರತು ಕೆಡುಕಿಗೆ ಬಳಸಲು ಸಾಧ್ಯವಿಲ್ಲ. ಇಲ್ಲವಿದ್ದರೆ ಸುಲಿಗೆಗಾರರೂ ಕಳ್ಳರೂ ಅದರ ಪರಮಭಕ್ತರಾದಾರು. ಅದು ಆಲಸೆಯ ಸಾಧನವಾಗಿ ಎಂದೂ ಕೆಲಸಮಾಡದು. ಅತಿಭಕ್ಷಣಕ್ಕೆ ಉಪವಾಸವೇ ಮದ್ದು, ಪ್ರಾರ್ಥನೆಯಲ್ಲ. ಉಪವಾಸ ತನ್ನ ಕೆಲಸವನ್ನು ಮಾಡಿದ ಬಳಿಕವೇ ಪ್ರಾರ್ಥನೆಗೆ ಅವಕಾಶವುಂಟು. ಅದು ಉಪವಾಸವನ್ನು ಸರಳವೂ ಸಹನೀಯವೂ ಆಗಿ ಮಾಡಬಲ್ಲದು. ಹಾಗೆಯೆ ನಿಮ್ಮ ದೇಹವನ್ನು ಔಷಧಗಳಿಂದ ತುಂಬಿಕೊಳ್ಳುತ್ತಿರುವಾಗ ರಾಮನಾಮವನ್ನು ಉಚ್ಚರಿಸುತ್ತ ಹೋಗುವದು ಬರಿ ಹಗರಣ. ತನ್ನ ರೋಗಿಯ ದುಷ್ಟ ಚಟಗಳಿಗೆ ಚೇಟನಾಗಿ ವರ್ತಿಸುವ ವೈದ್ಯನು ತನ್ನನ್ನೂ ತನ್ನ ರೋಗಿಯನ್ನೂ ಸೇರಿಯೇ ಅಧಃಪಾತಕ್ಕೆ ತಳ್ಳುವನು. ತನ್ನ ದೇಹವನ್ನು ತನ್ನ ಸೃಷ್ಟಿಕರ್ತನ ಆರಾಧನೆಯ ಸಾಧನವೆಂದು ಬಗೆಯುವ ಬದಲು ಅದನ್ನೇ ತನ್ನ ಆರಾಧನೆಯ ವಸ್ತುವನ್ನಾಗಿ ಮಾಡಿಕೊಂಡು ಅದನ್ನು ಹೇಗಾದರೂ ಸಾಗಿಸಿಕೊಂಡು ಹೋಗಲು ಹಣವನ್ನು ನೀರಿನಂತೆ ಚೆಲ್ಲಾಡುವವನಿಗಿಂತ ಕೆಟ್ಟ ಅಧಃಪತಿತನಾರು ? ಆದರೆ ರಾಮನಾಮ ಒಂದೆಡೆ ವಿಕಾರವನ್ನು ಗುಣಪಡಿಸುತ್ತಿರುವಾಗಲೆ ಇನ್ನೊಂದೆಡೆ ಪರಿಶುದ್ಧವಾಗಿ ಮಾಡುತ್ತದೆ. ಅರ್ಥಾತ್ ಅದು ನಮ್ಮನ್ನು ಮೇಲಕ್ಕೆ ಎತ್ತುತ್ತದೆ. ಇಲ್ಲಿದೆ ಅದರ ಪ್ರಯೋಜನ ಮತ್ತು ಇಲ್ಲೇ ಇದೆ ಅದರ ಇತಿಮಿತಿ.''

ಗಲಭೆಗಳು

ಇತ್ತೀಚೆಗಿನ ಗಲಭೆಯ ಕಿಡಿಗಳು ಗಾಂಧೀಜಿ ಮುಂಬಯಿಗೆ ಹೋದಾಗ ಇನ್ನೂ ಬಿಸಿಯಾಗಿಯೆ ಇದ್ದವು. ಅದುದರಿಂದ ರುಂಗಟಾ ಭವನದಲ್ಲಿ ಸೇರಿದ ಮೊಟ್ಟ ಮೊದಲ ಪ್ರಾರ್ಥನಾಸಭೆಯಲ್ಲಿಯೇ ಅವರು ಈ ಘಟನೆಗಳನ್ನು ಕುರಿತು ಆಡಿದರು. ನಿರ್ಭಯವಾಗಿ ಅಂದು ತೋರಿಸಿ ಪರಿಣಾಮಕಾರಿ ಕ್ರಿಯೆಯನ್ನು ಕೈಕೊಳ್ಳಬೇಕಾದಂಥ ಪರಿಸ್ಥಿತಿಯಿರುವಾಗ "ಸಂದಿಗ್ಧ ಮಧ್ಯಮಾರ್ಗ'' ವನ್ನು ಆಶ್ರಯಿಸಿ ತಣ್ಣಗಿರುವದನ್ನು ಗಾಂಧೀಜಿ ನಿರ್ದಾಕ್ಷಿಣ್ಯವಾಗಿ ಖಂಡಿಸಿದರು.

೧೯೪೨ ಅಗಸ್ಟ್ ೯ ಕ್ಕೆ ಅವರು ಮಾಡಬೇಕಾಗಿದ್ದು ಅಗಸ್ಟ್ ೮ರ ಉಷಃಕಾಲದಲ್ಲೇ ಅವರ ಬಂಧನವಾದುದರಿಂದ ಇಷ್ಟು ದೂರ ಮುಂದೆ ಹಾಕಲ್ಪಟ್ಟಿದ್ದ ಅವರ ಶಿವಾಜಿ ಪಾರ್ಕ ಭಾಷಣ ಮಾತ್ರ ಇದಕ್ಕಿಂತಲೂ ಅಗಾಧ ಸನ್ನಿವೇಶವಾಗಿತ್ತು. ಶ್ರೋತೃಗಳು ೩ ಲಕ್ಷಕ್ಕೂ ಮಿಕ್ಕಿ ನೆರೆದಿದ್ದರು. ಆದರೆ ವ್ಯವಸ್ಥೆಗಳು ಎಷ್ಟು ಪರಿಪೂರ್ಣ, ನೆರವಿಯ ಶಿಸ್ತು ಎಷ್ಟು ಅಸಾಧಾರಣ ಇದ್ದವೆಂದರೆ ಗಾಂಧೀಜಿಯ ಭಾಷಣ ಎಳ್ಳು ಬಿದ್ದರೆ ಸದ್ದಾಗುವ ನಿಶ್ಯಬ್ಧತೆಯಲ್ಲಿ ಸಾಗಿತು. ಅದರ ವಸ್ತುವಿತ್ತು "ಸತ್ಯಾಗ್ರಹ—ಜೀವನ ಮರಣಗಳ ಕಲೆ" ಮತ್ತು ಅದಕ್ಕೂ ಪ್ರಾರ್ಥನೆಗೂ ಇರುವ ಸಂಬಂಧ. ಈ ಎರಡೂ ಭಾಷಣಗಳು ಈ ಪತ್ರಿಕೆಯಲ್ಲಿ ಇತರತ್ರ ಕೊಡಲ್ಪಟ್ಟಿವೆ.

ಉರುಳಿ ಕಂಚನ

ಮುಂಬಯಿಯಿಂದ ಮರಳಿದ ನಂತರ ಗಾಂಧೀಜಿಯವರು ಬಹಳ ದಿನ ಪುಣೆಯ ನಿಸರ್ಗೋಪಚಾರ ಗೃಹದಲ್ಲಿ ಉಳಿಯಲಿಲ್ಲ. ತಾ. ೨೨ ಕ್ಕೆ ಗಾಂಧೀಜಿಯವರು ಬಂದು ಸೇರಿದ ಉರುಳಿ ಕಂಚನವೆಂಬುದು ಸೊಲ್ಲಾಪುರ-ಪುಣೆ ರೇಲ್ವೆ ಮಾರ್ಗದ ಒಂದು ಚಿಕ್ಕ ನಿಲ್ದಾಣ. ಅದರ ಜನಸಂಖ್ಯೆ ೩೦೦೦. ಅಲ್ಲಿ ಒಂದು ರೇಲ್ವೆ ತಂತಿ ಕಚೇರಿ, ಒಂದು ಟಪಾಲ ಕಟ್ಟೆ ಇವೆಯಾದರೂ ಟೆಲಿಫೋನ್ ಮಾತ್ರ ಇಲ್ಲ. ಮೇಲ ಹಾಗು ಎಕ್ಸಪ್ರೆಸ್ ಗಾಡಿಗಳು ಅಲ್ಲಿ ನಿಲ್ಲುವದಿಲ್ಲ. ಅದರ ವಾಯುಗುಣ ಉತ್ತಮವಾಗಿದೆ. ಸಮೀಪದಲ್ಲಿರುವ ಸೈನಿಕ ಶಿಬಿರದ ಜಲಸಂಗ್ರಹದಿಂದ ಸೋಸಿದ ನೀರಿನ ಪೂರೈಕೆ ದೊರೆಯುತ್ತದೆ. ದ್ರಾಕ್ಷೆ; ಕಿತ್ತಳೆ, ಪಾಪಿಯಾದಂಥ ಫಲ ವಸ್ತುಗಳನ್ನು ಈ ಸ್ಥಳದಲ್ಲಿ ವಿಪುಲವಾಗಿ ಬೆಳೆಸುತ್ತಾರೆ.

ಕೆಲವೇ ದಿನಗಳ ಹಿಂದೆ ಆ ಸ್ಥಳದ ಹೆಚ್ಚು ಕಡಿಮೆ ಎಲ್ಲ ಪ್ರಮುಖರೂ ಪುಣೆ ನಿಸರ್ಗೋಪಚಾರ ಗೃಹದಲ್ಲಿದ್ದ ಗಾಂಧೀಜಿಯ ಕಡೆ ಶಿಷ್ಟಮಂಡಲ ತೆಗೆದುಕೊಂಡು ಬಂದಿದ್ದರು. ಗಾಂಧೀಜಿ ಸ್ಥಾಪಿಸಬೇಕೆಂದಿದ್ದ ನಿಸರ್ಗೋಪಚಾರ ಗೃಹವನ್ನು ತಮ್ಮ ಸ್ಥಳದಲ್ಲಿಯೇ ಸ್ಥಾಪಿಸಬೇಕೆಂದು ಅವರು ಕೇಳಿಕೊಂಡರು. ಅದಕ್ಕೆ ಬೇಕಾದಷ್ಟು ಭೂಮಿಯನ್ನು ಒದಗಿಸುವದಲ್ಲದೆ ಉರುಳಿಯಲ್ಲಿ ನಡೆಸಲ್ಪಡುವ ಪ್ರಯೋಗಕ್ಕಾಗಿ ನಿಸರ್ಗೋಪಚಾರ ನಿಧಿಗಾಗಿ ೧೦,೦೦೦ ರೂಪಾಯಿಗಳನ್ನೂ ತಮ್ಮ ಸಮಸ್ತ ಸಹಾಯ-ಸಹಕಾರಗಳನ್ನೂ ಕೊಡುವದಾಗಿ ಅವರು ಆಶ್ವಾಸನವಿತ್ತರು. ನಿವೃತ್ತ ರೇಲ್ವೆ ಗುತ್ತಿಗೆಗಾರರಾದ ಶ್ರೀ ದಾತಾರ ಅವರು ತಮ್ಮ ವಾಸಗೃಹವನ್ನು ತೆರವು ಮಾಡಿ ಗಾಂಧೀಜಿಯ ತಾತ್ಕಾಲಿಕ ವಸತಿಗೆಂದು ಕೊಡಮಾಡಿದರು.

ಮೊದಲ ದಿನವೇ ಆ ಹಳ್ಳಿಯ ಸರಹದ್ದಿನಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ನಡೆಸಲಾಯಿತು. ಬೇರೆ ಕಡೆಗಳಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ರಾಮಧುನಿಯ ಸಾಮೂಹಿಕ ಭಜನೆಯಾಯಿತು. ಆ ಸ್ತೋತ್ರದ ಪದ್ಯವೊಂದರ ಪ್ರಮಾಣವನ್ನೇ ಉದಾಹರಿಸಿ ಗಾಂಧೀಜಿಯವರು ಸಮಸ್ತ ದೈಹಿಕ ಜಾಡ್ಯಗಳಿಗೂ ರಾಮನಾಮವೇ ಸರ್ವೋತ್ತಮ ಸ್ವಾಭಾವಿಕ ಚಿಕಿತ್ಸೆಯೆಂದು ಹಳ್ಳಿಗರಿಗೆ ಬೋಧಿಸಿದರು. "ಇದೀಗ ನಾವು ಹಾಡಿದ ಗೀತದಲ್ಲಿ ಭಕ್ತ ಹೇಳುತ್ತಾನೆ:

"ಸಕಲ ಜನ ಸಂಕಷ್ಟ ನೀಗಿಸುವ ನೀನೆ, ಹರಿ!"

—ಎಂದು. ಈ ಭರವಸೆ ಸರ್ವವ್ಯಾಪಿಯಾದುದು. ಯಾವುದೊಂದು ವಿಶಿಷ್ಟ ರೋಗಕ್ಕೆ ಮಾತ್ರ ಅದು ಸೂಚಿತವಾಗಿಲ್ಲ, ಮಿತವಾಗಿಲ್ಲ, ಅವರು ಅದರ ಫಲಶ್ರುತಿಗಿರುವ ನಿರ್ಬಂಧವನ್ನೂ ವಿವರಿಸಿದರು. ಅವಿಚಲ ವಿಶ್ವಾಸದಿಂದ ಕೂಡಿದೆಯೋ ಇಲ್ಲವೋ ಎಂಬದನ್ನೆ ರಾಮನಾಮದ ಫಲದಾಯಕತೆ ಅವಲಂಬಿಸಿದೆ. "ನೀವು ಕ್ರೋಧಕ್ಕೆ ಬಲಿಯಾದರೆ, ಜೀವನಾಧಾರವೆಂದಲ್ಲದೆ ಭೋಗಲಾಲಸೆಯಿಂದ ಉಂಡರೆ, ಮಲಗಿದರೆ, ನಿಮಗೆ ರಾಮನಾಮದ ಅರ್ಥ ಗೊತ್ತಿಲ್ಲವೆಂದಾಯಿತು. ನೀವು ಅದನ್ನು ಭಜಿಸುವದು ಬರಿ ನಾಲಿಗೆಯ ತುದಿಯಿಂದ. ಭಜನೆಯ ಕಾಲದಲ್ಲಿ ರಾಮನಾಮ ನಿಮ್ಮ ಅಂಗಾಂಗಗಳಲ್ಲಿ ವ್ಯಾಪಿಸಿ ಸಮಾಧಿ ಸ್ಥಿತಿಗೆ ನಿಮ್ಮನ್ನು ಒಯ್ಯಬೇಕು, ನಿಮ್ಮ ಜೀವನವೇ ರಾಮನಾಮ ಸ್ವರೂಪವನ್ನು ತಾಳಬೇಕು ಹಾಗಾದರೆ ಮಾತ್ರ ಅದು ಫಲದಾಯಕವಾಗುವದು.''

ಮೊದಲ ರೋಗಿಗಳು

ಮರುದಿನ ಮುಂಜಾನೆಯಿಂದ ತೊಡಗಿ ರೋಗಿಗಳು ಬರತೊಡಗಿದರು. ಅವರು ಸುಮಾರು ೩೦ ಜನ ಇದ್ದರು. ಗಾಂಧೀಜಿ ಅವರಲ್ಲಿ ಐದಾರು ಜನರನ್ನು ಪರೀಕ್ಷಿಸಿದರು. ಅವರೆಲ್ಲರಿಗೂ ಅವರವರ ಸ್ಥಿತಿಗತಿಗನುಸರಿಸಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಎಲ್ಲರಿಗೂ ಒಂದೇ ಬಗೆಯ ಚಿಕಿತ್ಸೆಯನ್ನು ಅವರು ನಿರ್ದೇಶಿಸಿದರು. ಅಂದರೆ, ರಾಮನಾಮ ಜಪ, ಸೂರ್ಯಸ್ನಾನ, ಕಟಿಸ್ನಾನ, ಹಾಲು, ಮಜ್ಜಿಗೆ, ಹಣ್ಣು, ಫಲರಸ, ಮತ್ತು ಧಾರಾಳವಾದ ಶುದ್ಧ

—೯ನೇ ಪುಟ ನೋಡಿರಿ

ಮುಂಬಯಿಯಲ್ಲಿ ಐದು ದಿನ

(೮ನೇ ಪುಟದಿಂದ ಮುಂದರಿದುದು)

ನೀರು ವೊದಲಾದ ಸರಳ ಸಮಾಧಾಯಕ ಪಥ್ಯ. ಇತ್ಯಾದಿ. "ಎಲ್ಲ ದೈಹಿಕ ಮಾನಸಿಕ ರೋಗಗಳೂ ಒಂದೇ ಸಾಮಾನ್ಯ ಕಾರಣದಿಂದ ಹುಟ್ಟುತ್ತವೆಯೆಂದು ಹೇಳಲ್ಪಟ್ಟಿರುವದು ಸುಳ್ಳಲ್ಲ" ಎಂದು ಅಂದು ಸಾಯಂಪ್ರಾರ್ಥನೆಯ ಕಾಲಕ್ಕೆ ಗಾಂಧೀಜಿ ಹೇಳಿದರು. ಆದುದರಿಂದ ಸ್ವಾಭಾವಿಕವಾಗಿ ಅವೆಲ್ಲವುಗಳಿಗೂ ಒಂದೇ ಸಾಮಾನ್ಯ ಪರಿಹಾರೋಪಾಯವೂ ಇರಬೇಕು. ರೋಗಗಳಲ್ಲಿ ಒಬ್ಬಗೆಯಿರುವಂತೆ ಚಿಕಿತ್ಸೆಯಲ್ಲಿಯೂ ಏಕವಿಧತೆಯಿರುತ್ತದೆ. ಶಾಸ್ತ್ರಗಳೂ ಹಾಗೆಯೆ ಹೇಳುವವು. ಆದುದರಿಂದ ಇಂದು ಮುಂಜಾನೆ ಬಂದ ರೋಗಿಗಳಿಗೆಲ್ಲ ನಾನು ರಾಮನಾಮ ಜಪವನ್ನೂ ಹೆಚ್ಚುಕಡಿಮೆ ಒಂದೇ ಚಿಕಿತ್ಸೆಯನ್ನೂ ನಿರ್ದೇಶಿಸಿದ್ದೇನೆ. ಆದರೆ ಶಾಸ್ತ್ರವಾಕ್ಯಗಳು ನಮ್ಮ ಅನುಕೂಲಕ್ಕೆ ಒರದಾದಾಗ ಅವುಗಳಿಗೆ ಏನಾದರೊಂದು ಅಪವಾದವನ್ನು ಕಲ್ಪಿಸಿ ಅರ್ಥಾಂತರನ್ಯಾಸ ಮಾಡಿಬಿಡುವ ಅಭ್ಯಾಸ ನಮಗಾಗಿದೆ. ಶಾಸ್ತ್ರಗಳು ಭವಿಷ್ಯಜ್ಜನ್ಮದಲ್ಲಿ ಆತ್ಮನ ಉದ್ಧಾರಕ್ಕಾಗಿ ಇವೆಯೆಂದೂ ಮರಣಾನಂತರದ ಪುಣ್ಯಲಾಭಕ್ಕಾಗಿಯೆ ಧರ್ಮ ಹೇಳಲಟ್ಟಿದೆಯೆಂದೂ ಭ್ರಾಂತರಾಗಿದ್ದೇವೆ. ನಾನು ಈ ನಂಬಿಕೆಯಲ್ಲಿ ಪಾಲುಗಾರನಾಗಿಲ್ಲ. ಧರ್ಮಕ್ಕೆ ಈ ಜನ್ಮದಲ್ಲಿ ಯಾವ ವ್ಯಾವಹಾರಿಕ ಪ್ರಯೋಜನವಿಲ್ಲದಿದ್ದರೆ ಮುಂದಿನ ಜನ್ಮದಲ್ಲಾದರೂ ಅದು ಇರಲಳವಲ್ಲ.

"ದೈಹಿಕ ಮಾನಸಿಕ ವಿಕಾರವೊಂದೂ ಇಲ್ಲದ ಮನುಷ್ಯ ಜಗತ್ತಿನಲ್ಲಿ ಇರಲಾರ. ಈ ವಿಕಾರಗಳಲ್ಲಿ ಕೆಲವಕ್ಕೆ ಪಾರ್ಥಿವ ಪರಿಹಾರವೇ ಇಲ್ಲ ಉದಾಹರಣೆಗಾಗಿ ನಿಮ್ಮ ಕಳೆದು ಹೋದ ಅಂಗವೊಂದನ್ನು ರಾಮನಾಮ ನಿಮಗೆ ತಿರುಗಿ ಕೊಡಿಸಲಾರದು. ಆದರೆ ಆ ನಷ್ಟವನ್ನು ಲೆಕ್ಕಿಸದೆ ಬದುಕಿರುವಷ್ಟು ಕಾಲ ಅನಿರ್ವಚನೀಯ ಶಾಂತಿಯನ್ನು ಅನುಭವಿಸಲು ನಿಮಗೆ ಸಹಾಯ ಮಾಡುವ ಅಪ್ರತಿಮ ಮಾಂತ್ರಿಕ ಶಕ್ತಿ ಅದರಲ್ಲಿದೆ. ನಿಮ್ಮ ಪ್ರಾಣಹರಣ ಸಮಯ ಬಂದಾಗ ನಿಮ್ಮನ್ನು ಯಾತನೆಗೀಡು ಮಾಡಿದ ಸಂತೋಷದಿಂದ ಮೃತ್ಯುವಂಚಿತವಾಗುವದು. ಮಸಣಕ್ಕೆ ವಿಜಯಗರ್ವವೂ ಸಿಗದು. ಈಗಲೋ ಇನ್ನಾವಾಗಲೋ ಮೃತ್ಯು ಬರಲೇಬೇಕೆಂದಾದ ಮೇಲೆ ಅದು ಎಂದು ಬರುವದೋ ಎಂಬ ಚಿಂತೆಯಿಂದೇನು ಫಲ?"

ಇದು ನನ್ನ ಭಾರತ

ಮೂರನೇ ದಿನ ರೋಗಿಗಳ ಸಂಖ್ಯೆ ೩೦ ರಿಂದ ೪೩ ಕ್ಕೇರಿತು. "ಇದು ಒಳಿತೇ ಆಯಿತು." ಎಂದರು ಗಾಂಧೀಜಿ. "ಏಕೆಂದರೆ ನಿಸರ್ಗ ಚಿಕಿತ್ಸೆಯ ಅವಶ್ಯಕತೆಯುಳ್ಳವರು ಅದನ್ನು ಪಡೆದುಕೊಳ್ಳಲು ಮುಂದೆ ಬರುತಿರುವರೆಂದಾಯಿತು." ಸಂಕಲ್ಪದಂತೆ ಕೆಲಸ ಸಾಗಿದರೆ ವರ್ಷಕ್ಕೆ ನಾಲ್ಕು ತಿಂಗಳಾದರೂ ಅವರೊಡನೆ ಉಳಿದುಕೊಳ್ಳಬೇಕೆಂದು ತಮ್ಮ ಇಚ್ಛೆಯೆಂದು ಅವರು ಸಂಜೆ ಪ್ರಾರ್ಥನೆಗೆ ನೆರೆದವರಿಗೆ ಹೇಳಿದರು. ತಮ್ಮ ಅನುಪಸ್ಥಿತಿಯಲ್ಲಿ ತಮ್ಮ ಸಹಯೋಗಿಗಳು ರೋಗಿಗಳಿಗೆ ತಮ್ಮ ನಿರ್ದೇಶವನ್ನನುಸರಿಸಿ ಮಾರ್ಗದರ್ಶನ ಮಾಡಿಸುವರು. "ನಿಸರ್ಗ ಚಿಕಿತ್ಸೆಯ ವ್ಯಕ್ತಿಗೆ ದೊಡ್ಡ ದೊಡ್ಡ ವಿಶ್ವವಿದ್ಯಾಲಯ ಪದವಿಗಳಾಗಲಿ ವಿಶೇಷ ಪಾಂಡಿತ್ಯವಾಗಲಿ ಬೇಕಾಗುವದಿಲ್ಲ. ಸರಳತೆಯೆ ವಿಶ್ವವ್ಯಾಪಕತೆಯು ಸಾರಸರ್ವಸ್ವ. ಕೋಟ್ಯಂತರ ಜನರಿಗಾಗಿ ಯಾವುದು ಉದ್ದೇಶಿಸಲ್ಪಟ್ಟಿದೆಯೋ ಅದಕ್ಕೆ ವಿಶೇಷ ಪಾಂಡಿತ್ಯ ಅವಶ್ಯವಾಗಿರಲಾರದು. ಅದನ್ನು ಕೆಲವರೇ ಸಂಪಾದಿಸಬಲ್ಲರಾಗಿ, ಅದು ಬರಿ ಕೆಲ ಶ್ರೀಮಂತರಿಗಷ್ಟೇ ಪ್ರಯೋಜನಕ್ಕೆ ಬರಬಹುದು. ಆದರೆ ಹಿಂದುಸ್ತಾನದ ಜೀವನ ಸಾಗಿರುವದು ಅದರ ಏಳು ಲಕ್ಷ ಹಳ್ಳಿಗಳಲ್ಲಿ, ದೂರ ದೂರದ, ಚಿಕ್ಕ, ದಾರಿಯಿಲ್ಲದ ಹಳ್ಳಿಗಳಲ್ಲಿ. ಅಲ್ಲಿನ ಜನಸಂಖ್ಯೆ ಕೆಲ ನೂರಕ್ಕಿಂತ ಹೆಚ್ಚಿಗಿರುವದಿಲ್ಲ. ಎಷ್ಟೋ ವೇಳೆ ಬರಿ ದಶಕಗಳಲ್ಲಿ ಎಣಿಸುವಷ್ಟಿರುತ್ತದೆ. ಅಂಥ ಯಾವುದಾದರೊಂದು ಹಳ್ಳಿಗೆ ಹೋಗಿ ತಳವೂರಲು ನಾನು ಆಶಿಸುವೆ. ಅದೇ ಹಿಂದುಸ್ತಾನ ನಿಜವಾದ ಹಿಂದುಸ್ತಾನ, ನಾನು ಯಾವುದಕ್ಕಾಗಿ ಬಾಳುತಿರುವೆನೊ ಆ ಹಿಂದುಸ್ತಾನ. ಈ ಬಡಜನರಿದ್ದಲ್ಲಿಗೆ ಉಚ್ಚ ಪದವೀಧರ ವೈದ್ಯರ ಎಲ್ಲ ಪರಿವಾರಮಾಲೆಯನ್ನೂ ಆಸ್ಪತ್ರೆಯ ಸಾಮಗ್ರಿಗಳನ್ನೂ ಒಯ್ಯುವದು ಸಾಧ್ಯವಿಲ್ಲ. ಸರಳ ಪ್ರಕೃತಿ ಸಿದ್ಧ ಔಷಧಿಗಳಲ್ಲಿಯೂ ರಾಮನಾಮದಲ್ಲಿಯೂ ಮಾತ್ರ ಅವರ ಏಕಮಾತ್ರ ಆಶೆ ನಿಹಿತವಾಗಿದೆ.

ಉರುಳಿಯಲ್ಲಿ ಯಾವ ರೋಗವೂ ಇಲ್ಲವೆಂದು ಗಾಂಧೀಜಿಗೆ ತಿಳಿಸಿದ್ದರು. ಬಹುಶಃ ಯಾವ ಪಿಡುಗೂ ಅಲ್ಲಿ ವ್ಯಾಪಿಸಿದ್ದಿಲ್ಲವೆಂಬುದೇ ಈ ಹೇಳಿಕೆಯ ಅರ್ಥವಿದ್ದಿರಬೇಕು. ಜಡ್ಡೆಂಬುದಕ್ಕೆ ಜನಸಾಮಾನ್ಯದ ವ್ಯಾಖ್ಯೆ ಅದೇ ಅಲ್ಲವೆ? ಆದರೆ ಕಳೆದ ಎರಡು ದಿನಗಳಿಂದ ಅವರ ಬಳಿಗೆ ಬರುತಿದ್ದ ಪ್ರಕರಣಗಳಿಂದ ಉರುಳಿಯಲ್ಲಿ ಅನಾರೋಗ್ಯದ ವ್ಯಾಪ್ತಿ ಧಾರಾಳವಾಗಿತ್ತೆಂದು ಸ್ಪಷ್ಟವಾಗಿದೆ. "ನಾನು ಹೇಳಿದಂತೆ ನೀವು ನಡೆದರೆ" ಗಾಂಧೀಜಿ ಹಳ್ಳಿಗರಿಗೆ ಹೇಳಿದರು. "ಉರುಳಿಯೊಂದು ಆದರ್ಶ ಹಳ್ಳಿಯಾಗುವದು. ಅದನ್ನು ಕಾಣಲು ದೂರ ದೂರದಿಂದ ಜನರು ಬರುವರು."

ಅನಂತರ ಅವರು ಹಳ್ಳಿಗರಿಗೆ ನಿಸರ್ಗ ಚಿಕಿತ್ಸೆಯ ತತ್ವಗಳ ಪ್ರಥಮ ಉಪದೇಶವನ್ನು ಕೊಟ್ಟರು. ಅದರ ಸಾರ ಹೀಗಿದೆ.

ನಿಸರ್ಗ ಚಿಕಿತ್ಸೆಯ ವಿವರ

"ಮನುಷ್ಯನ ಪಾರ್ಥಿವ ದೇಹ ಮಹಾ ಪಂಚಭೂತಗಳ ಸನ್ನಿಪಾತ—ಪೃಥ್ವಿ, ಅಪ್, ತೇಜಸ್ಸು, ವಾಯು ಮತ್ತು ಆಕಾಶ ಇವೇ ಆ ಪಂಚಭೂತಗಳು. ಆತ್ಮ ಅದರಲ್ಲಿ ಚೈತನ್ಯ ಪ್ರಸಾರ ಮಾಡುತ್ತದೆ.

"ಇವುಗಳಲ್ಲಿ ಅತಿಮಹತ್ವದ್ದೆಂದರೆ ವಾಯು. ಆಹಾರವಿಲ್ಲದೆ ಮನುಷ್ಯ ಅನೇಕ ವಾರಗಳ ವರೆಗೆ ಬಾಳಬಲ್ಲ. ನೀರಿಲ್ಲದೆ ಕೆಲಕಾಲ ಜೀವಿಸಿರಬಲ್ಲ. ಗಾಳಿಯಿಲ್ಲದೆ ಮಾತ್ರ ಕೆಲ ನಿಮಿಷಕ್ಕಿಂತ ಹೆಚ್ಚು ಬದುಕಲಾರ. ಆದುದರಿಂದ ದೇವರು ಗಾಳಿಯನ್ನು ಸರ್ವತ್ರವ್ಯಾಪಿಯಾಗಿ ಮಾಡಿದ್ದಾನೆ ಒಮ್ಮೊಮ್ಮೆ ಆಹಾರ ಅಥವಾ ನೀರಿನ ಕೊರತೆಯಾಗಬಹುದು, ಆದರೆ ಗಾಳಿಯದು ಎಂದೆಂದೂ ಆಗದು. ಹೀಗಿದ್ದರೂ ನಾವು ಮರುಳರಂತೆ ಈ ದೈವದತ್ತವಾದ ಶುದ್ಧ ನೂತನ ವಾಯುವಿನಿಂದ ನಮ್ಮನ್ನೇ ವಂಚಿಸಿಕೊಂಡು ಕಿಡಿಕಿ ಬಾಗಿಲುಗಳನ್ನು ಮುಚ್ಚಿ ಮನೆಯೊಳಗೆ ಮಲಗುತ್ತೇವೆ ಕಳ್ಳರ ಕಾಕರ ಭಯವಿದ್ದರೆ ಯಾರಾದರೂ ಕಿಡಿಕಿ ಬಾಗಿಲಗಳನ್ನು ಮುಚ್ಚಿಕೊಳ್ಳಬಹುದು. ಆದರೆ ತಮ್ಮನ್ನೇ ಒಳಗಿಕ್ಕಿ ಬಾಗಿಲು ಕಿಡಿಕಿ ಏಕೆ ಹಾಕಿಕೊಳ್ಳಬೇಕು.

"ಶುದ್ಧ ಗಾಳಿ ಸಿಗಬೇಕಾದರೆ ತೆರೆ ಜಾಗೆಯಲ್ಲಿ ಮಲಗಬೇಕು. ಆದರೆ ಧೂಳು ತುಂಬಿದ ಹೊಲಸು ಗಾಳಿಯನ್ನು ಉಸಿರಾಡಿಸುವ ಸಲುವಾಗಿಯೇ ಹೊರಗೆ ಮಲಗುವದರಲ್ಲಿ ಅರ್ಥವಿಲ್ಲ. ನೀವು ಮಲಗುವ ಸ್ಥಳ ಇವೆರಡರಿಂದಲೂ ವಿಶುದ್ಧವಾಗಿರಬೇಕು. ಕೆಲವರು ಧೂಳು, ತಂಡಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲೆಂದು ಮುಖವನ್ನು ಮುಚ್ಚಿಕೊಂಡು ಮಲಗುತ್ತಾರೆ. ಅದು ರೋಗಕ್ಕಿಂತಲೂ ಅಪಾಯಕರವಾದ ಪ್ರತೀಕಾರ. ಇನ್ನು ಬಾಯಿಂದ ಉಸಿರಾಡಿಸುವ ದುರಭ್ಯಾಸ ಬೇರೆ ಇದೆ. ಬಾಯಿ ಆಹಾರ ಒಳಗೆ ತೆಗೆದುಕೊಳ್ಳುವ ಇಂದ್ರಿಯ ಅದು ಉಸಿರಾಡಿಸುವ ಇಂದ್ರಿಯವಲ್ಲ ಮೂಗಿನಿಂದ ಪ್ರವೇಶಿಸುವ ಗಾಳಿ ಸೋಸಿ ಶುದ್ಧಗೊಳಿಸಲ್ಪಡುತ್ತದಲ್ಲದೆ ಸಂಗಡಲೇ ಶ್ವಾಸ ಕೋಶಗಳಲ್ಲಿ ಸೇರುವ ಮೊದಲು ಅದು ಬೆಚ್ಚಗೆ ಮಾಡಲ್ಪಡುತ್ತದೆ.

"ದುರ್ಲಕ್ಷದಿಂದ ಅಲ್ಲಲ್ಲಿ ಉಗುಳುವವರು ಹೊಲಸು ಹೇಸಿಕೆಗಳನ್ನು ಸಿಕ್ಕಲ್ಲಿ ಒಗೆದು ಅಥವಾ ಬೇರೆ ರೀತಿಯಿಂದ ನೆಲವನ್ನು ಹೊಲೆಗೆಡಿಸುವವ ಮಾನವ-ನಿಸರ್ಗಗಳೆರಡಕ್ಕೂ ಅನ್ಯಾಯ ಮಾಡುತ್ತಾನೆ. ಮನುಷ್ಯದೇಹವೆಂದರೆ ದೇವರ ಗುಡಿ. ಆ ಗುಡಿಯನ್ನು ಪ್ರವೇಶಿಸುವ ಗಾಳಿಯನ್ನು ಹೊಲೆಗೆಡಿಸುವವನು ಗುಡಿಯನ್ನೇ ಅಪವಿತ್ರವಾಗಿ ಮಾಡುವನು. ಅವನು ಮಾಡಿದ ರಾನಾಧ್ಯಾನ ನಿಷ್ಫಲವಾಗುವದು"

ಕೊನೆಯಲ್ಲಿ ತಾವು ನಿಷ್ಠುರ ಕಾರ್ಯನಿರ್ದೇಶಕರಾಗಿರುವದಾಗಿಯೂ ಅದನ್ನು ಸಹಿಸಲು ಹಳ್ಳಿಗರು ಸಿದ್ಧರಿರಬೇಕೆಂದೂ ಅವರು ಎಚ್ಚರವಿತ್ತರು. ತಾವು ಅವರೊಡನೆ ಉಳಿದುಕೊಂಡರೆ ತಮ್ಮನ್ನಾಗಲಿ ಅವರನ್ನಾಗಲಿ ಸುಮ್ಮನೆ ಬಿಡುವಂತಿಲ್ಲ. ಎಂದರವರು. ತಾವು ಅವರ ಮನೆಗಳಿಗೆ ಭೆಟ್ಟಿಕೊಡಬಹುದು. ಅವರ ರಸ್ತೆಗಳನ್ನು, ಚರಂಡಿಗಳನ್ನು, ಅಡಿಗೆ ಮನೆಗಳನ್ನು, ಅವರ ಸುಟ್ಟ ವಸ್ತ್ರಗಳನ್ನು ಪರೀಕ್ಷಿಸಬಹುದು. ಹೊಲವನ್ನಾಗಲಿ, ಧೂಳನ್ನಾಗಲಿ ತಾವು ಎಲ್ಲಿಯೂ ಸಹಿಸುವಂತಿಲ್ಲ.

ಉರುಳಿ —ಪ್ಯಾರೆಲಾಲ

೨೪-೩-೪೬

ಇದೇನು ವೈಗೂಲಿ ಸೈನ್ಯವಲ್ಲ

ಉರುಳಿಯಲ್ಲಿ ದೊಡ್ಡ ಸೈನಿಕ ಶಿಬಿರವಿದೆ. ಗಾಂಧೀಜಿಯವರು ಇಲ್ಲಿಗೆ ಬಂದಂದಿನಿಂದ ಗಾಂಧಿಜಿಯವರನ್ನು ಕಾಣಲು ಸೈನಿಕರು ಬಾರದಿದ್ದ ದಿನವೇ ಇರಲಿಲ್ಲ. ಪ್ರಾತಃಕಾಲದ ಗಾಳಿ ಸವಾರಿಯಲ್ಲಿ, ಸಾಯಂಕಾಲದ ಪ್ರಾರ್ಥನೆಯ ಕಾಲಕ್ಕೆ ಅವರು ಗಾಂಧೀಜಿಯನ್ನು ಕಂಡರು. ಅದರಲ್ಲಿ ಎರಡು ಗುಂಪುಗಳು ಅವರನ್ನು ಕಂಡಾಗ ನಡೆದ ಮಾತುಕತೆ ಮನೋರಂಜಕವಾಗಿವೆ.

"ನಾವು ಸೈನಿಕರು" ಅವರೊಳ್ಳೆ ವಿನಯದಿಂದ ಮಾತು ಸುರು ಮಾಡುತ್ತ "ಆದರೆ ನಾವು ಹಿಂದೀ ಸ್ವಾತಂತ್ರ್ಯದ ಸೈನಿಕರು", ಎಂದು ಜೋಡಿಸಿದರು.

"ಇದನ್ನು ಕೇಳಿ ನನಗೊಳ್ಳೆ ಸಂತೋಷ" ಗಾಂಧೀಜಿ ಉತ್ತರಿಸಿದರು. "ಏಕೆಂದರೆ ಈವರೆಗೆ ನೀವು ಹಿಂದೀ ಸ್ವಾತಂತ್ರ್ಯವನ್ನು ಹತ್ತಿಕ್ಕುವದಕ್ಕೆ ಹೆಚ್ಚಾಗಿ ಸಹಾಯಕರಾಗಿದ್ದಿರಿ. ಜಾಲಿಯನ್ ವಾಲಾಬಾಗದ ಕತೆ ನೀವು ಕೇಳಿರುವಿರಲ್ಲವೆ ?" ಎಂದಂದರು.

"ಓಹೋ ಕೇಳದೇ, ಏನು ? ಆದರೆ ಆ ದಿನಗಳೀಗ ಸಂದಿಹೋಗಿವೆ. ಆಗ ನಾವೆಲ್ಲ ಕೂಪ ಮಂಡೂಕಗಳಂತಿದ್ದೆವು. ನಮಗೀಗ ಜಗತ್ತಿನ ಪರಿಚಯವಾಗಿದೆ. ನಾವು ಜಾಗ್ರತರಾಗಿರುವೆವು."

"ನಾವು ವೈಗೂಲಿ ಸೈನಿಕರೆಂದು ಒಪ್ಪುತ್ತೇವೆ" ಮತ್ತೊಬ್ಬ ಬಾಯಿ ಹಾಕಿದ. "ಆದರೆ ಇನ್ನು ಮುಂದೆ ನಮ್ಮ ಹೃದಯ ಹಾಗಿಲ್ಲ" ಗಾಂಧಿಜಿಯವರು ೫-೬ ವರ್ಷಗಳ ಹಿಂದೆ ಹಿಂದೀ ಸೈನಿಕರನ್ನು "ವೈಗೂಲಿ" ಸೈನಿಕರೆಂದು ಕರೆದುದಕ್ಕೆ ಇದು ಅನ್ವಯಿಸಿತ್ತು.

"ಇದನ್ನು ಕೇಳಿ ನನಗೆ ಸಂತೋಷ" ಗಾಂಧೀಜಿ ಉತ್ತರಿಸಿದರು. "ನಿಮ್ಮನ್ನು ನಿಂದಿಸಬೇಕೆಂದು ನಾನು ಆ ಶಬ್ದ ಪ್ರಯೋಗ ಮಾಡಲಿಲ್ಲೆಂದು ನಾನು ಹೇಳಬಯಸುತ್ತೇನೆ. ಹೊಟ್ಟೆಪಾಡಿಗಾಗಿ ಪರಕೀಯ ಸರಕಾರದ ಸೇವೆಯಲ್ಲಿರುವ ಸೈನ್ಯದ ವ್ಯಾಖ್ಯೆ ಮಾತ್ರ ಅದು. ಆ ಕಾಲಕ್ಕೆ ನನ್ನ ಕಿವಿಯ ಸುತ್ತಲೂ ಕಣಬರಗಿ ಹುಳದ ಜಾಳಿಗೆಯೆ ಮುತ್ತಿದಂತಾಗಿತ್ತು. ಆದರೆ ನಾನೇನು ನನ್ನ ಶಬ್ದ ಹಿಂತೆಗೆದುಕೊಳ್ಳಲಿಲ್ಲ. ನಮ್ಮ ಸದ್ಯದ ಸೈನ್ಯ ಪದ್ಧತಿ ಮಾಯವಾಗಲಿಕ್ಕೆಬೇಕೆಂದು ಹೇಳಿದೆನು."

ಹಿಂದುಸ್ತಾನ ಸ್ವತಂತ್ರವಾದ ಮೇಲೆ

"ಹಿಂದುಸ್ತಾನ ಸ್ವತಂತ್ರವಾದ ಬಳಿಕ ನಮ್ಮ ಸ್ಥಾನಮಾನಗಳೇನು" ಎಂದು ಮತ್ತೊಬ್ಬ ಸೈನಿಕ ಕೇಳಿದ.

"ಅದೇಕೆ, ನೀವೂ ಆ ಸ್ವಾತಂತ್ರ್ಯದಲ್ಲಿ ಪಾಲುಗಾರರು, ನಿಮ್ಮ ದೇಶಬಾಂಧವರ ಜೊತೆ ನೀವು ಸ್ವಾತಂತ್ರ್ಯ ವಾಯುವನ್ನು ಸೇವಿಸುವಿರಿ" ಎಂದರು ಗಾಂಧೀಜಿ. ಆದರೆ ಅವನ ಪ್ರಶ್ನೆಯ ಮುದ್ದೆ ಅದಾಗಿರಲಿಲ್ಲ. ಗಾಂಧೀಜಿ ಮುಂದರಿಸಿದರು.

"ಸ್ವತಂತ್ರ ಹಿಂದುಸ್ತಾನಕ್ಕೂ ನಿಮ್ಮ ಅವಶ್ಯಕತೆಯಿದೆ. ನೀವು ಸೈನಿಕ ಶಿಕ್ಷಣ ಪಡೆದಿರುವಿರಿ. ಆ ಶಿಕ್ಷಣದ ಲಾಭ ನೀವು ಹಿಂದುಸ್ತಾನಕ್ಕೆ ಕೊಡುವಿರಿ. ಸಾಮಾನ್ಯ ಗಂಡಾಂತರ ಸಮಯದಲ್ಲಿ ಸೌಹಾರ್ದದಿಂದ ಎಂತಿರಬೇಕೆಂಬುದನ್ನು ನೀವು ಕಲಿತಿರುವಿರಿ. ಆ ಗಂಡಾಂತರ ಸಮಯ ಸಂದಿಹೋದ ಕೂಡಲೆ ಆ ಪಾಠ ಮರೆತು ಬಿಟ್ಟರೆ ಅದೊಂದು ದುರ್ದಿನವಾಗಿ ಪರಿಣಮಿಸುವುದು"

"ಆದರೆ ಸ್ವತಂತ್ರ ಹಿಂದುಸ್ತಾನದಲ್ಲಿ ಇಂದಿನಂತೆ ನೀವು ಚೆನ್ನಾಟ ನಡೆಸಲಾರಿರಿ" ಗಾಂಧೀಜಿ ಮುಂದೆ ಸಾಗಿದರು.

"ಹಿಂದುಸ್ತಾನದಲ್ಲಿಯ ಬಡವರ ಹಣದಿಂದ ಪರಕೀಯ ಸರಕಾರವು ನಿಮ್ಮನ್ನು ವಶದಲ್ಲಿಟ್ಟುಕೊಳ್ಳುತ್ತಿದ್ದಂಥ ಅತ್ಯಧಿಕ ಹಕ್ಕುಬಾಧ್ಯತೆಗಳು ಇನ್ನು ಮುಂದೆ ನಿಮಗೆ ಉಳಿಯವು. ಹಿಂದುಸ್ತಾನ ದರಿದ್ರ ದೇಶ. ಅದರ ದಾರಿದ್ರ್ಯದಲ್ಲಿ ಪಾಲುಗಾರರಾಗಲು ಸಿದ್ಧರಾಗದಿದ್ದರೆ ನೀವು ಅದರ ಸೇವೆ ಮಾಡಲಾರಿರಿ. ಹಿಂದೀ ಸ್ವಾತಂತ್ರ್ಯ ಸೇನೆಯವರು ಸ್ವಾತಂತ್ರ್ಯಕ್ಕಾಗಿ ತಳಮಳಿಸುತ್ತಿರುವ ಹಿಂದುಸ್ತಾನದ ದಾರಿದ್ರ್ಯವನ್ನು ಮರೆತು ಬಹುಮಾನ ಪಡೆಯಲು ಬಯಸಿದರೆ ದೇಶಬಾಂಧವರ ಶುಭಾಶೀರ್ವಾದವನ್ನು ಅವರು ಪಡೆಯದೆ ಅವರು ಜುಗುಪ್ಸೆಗೆ ಕಾರಣವಾಗುವರೆಂದು ನಾನು ಕ್ಯಾ. ಶಾನವಾಜರಿಗೆ ಹೇಳಿದೆನು. ಅದೇ ಮಾತು ನಿಮಗೂ ಅನ್ವಯಿಸುವದು. ನಿಮ್ಮ ಹಕ್ಕುಬಾಧ್ಯತೆಗಳನ್ನು ಬಿಟ್ಟುಗೊಡಲು ನೀವು ಸಿದ್ಧರಾಗದಿದ್ದರೆ ಸ್ವಾತಂತ್ರ್ಯ ಸಿಕ್ಕ ಬಳಿಕ ನಿಮಗೆ ವಿಷಾದವೆನಿಸಬಹುದು. ಹಿಂದಿನ ಒಡೆಯರೇ ಬರಲಿ ಆ ಕಾಲವೆ ಮತ್ತೆ ಬರಲಿ ಎಂದು ನೀವು ನಿಟ್ಟುಸಿರು ಬಿಡಬಹುದು"

ಹೊಸ ಉಕ್ಕು

"ಹಿಂದೊಂದು ಕಾಲವಿದ್ದಿತು" ಅವರಲ್ಲೊಬ್ಬ ಉದ್ಗರಿಸಿದ. "ಯಾವದೆ ಪೌರ ಪತ್ರಿಕೆಯನ್ನೋದಲು ಪ್ರತಿಬಂಧವಿತ್ತು. ಈಗ ನಾವು ನಮ್ಮ ಅಧಿಕಾರಗಳನ್ನು ಕಂಡು ನಮ್ಮ ಧುರೀಣಾಗ್ರೇಸರರನ್ನು ಕಂಡು ಬರುವೆವೆಂದು ಹೇಳುವೆವು. ಯಾರೂ ನಮ್ಮನ್ನು ತಡೆಯರು" ಎಂದಂದರು.

"ನನಗೆ ಗೊತ್ತಿದೆ" ಉತ್ತರಿಸಿದರು ಗಾಂಧೀಜಿ. ಇಂದು ಸೈನಿಕರಲ್ಲಿ ಹೊಸ ಕ್ರಾಂತಿಯುಂಟಾಗಿದೆ. ನೇತಾಜಿ ಬೋಸರಿಗೇ ಈ ಸುಖಪ್ರದ ಬದಲಾವಣೆಯ ಶ್ರೇಯಸ್ಸು ಸಲ್ಲುವದು. ಅವರ ಪದ್ಧತಿಯನ್ನು ನಾನೊಪ್ಪದಿದ್ದರೂ ಹಿಂದೀ ಸೈನಿಕನಿಗೆ ಹೊಸ ದೃಷ್ಟಿ ಮತ್ತು ಹೊಸ ಧ್ಯೇಯವನ್ನು ಕೊಟ್ಟು ಅವರು ಹಿಂದುಸ್ತಾನಕ್ಕೆ ಅಪೂರ್ವ ಸೇವೆ ಸಲ್ಲಿಸಿರುವರು.

"ಹಿಂದುಸ್ತಾನವನ್ನು ಎರಡು ಮೂರು ಇಲ್ಲವೆ ಅನೇಕ ಭಾಗಗಳನ್ನಾಗಿ ವಿಭಜಿಸಬೇಕೆಂದು ಅದೆಂತು ಪ್ರತಿಪಾದಿಸುವರೊ? ಸೈನಿಕರಾದ ನಮಗೆ ಹೊಳೆಯದು. ಹಿಂದುಸ್ತಾನ ಅಖಂಡವಾಗಿದೆ. ಅದಕ್ಕಾಗಿಯೇ ನಾವು ಹೋರಾಡಿದೆವು" ಎಂದಂದನು ಹಿರಿಯ ಸೈನಿಕನೊಬ್ಬ.

"ಜಗತ್ತಾಗಬೇಕಾದರೆ ಎಲ್ಲ ಬಗೆಯ ಜನರೂ ಬೇಕು' ಉತ್ತರಿಸಿದರು ಗಾಂಧೀಜಿ. ಎಲ್ಲರೂನಕ್ಕರು

"ನಾವು ಘೋಷಣೆಗಳನ್ನು ಮಾಡಬಹುದೊ ? ಎಂದು' ಅವರೆಲ್ಲ ಕೊನೆಗೆ ಚಿಕ್ಕಮಕ್ಕಳಂತೆ ಸರಳ ಪ್ರಶ್ನೆ ಮಾಡಿದರು.

"ಒಳ್ಳೇದು ನೀವು ಮಾಡಬಹುದು" ಉತ್ತರಿಸಿದರು ಗಾಂಧೀಜಿ. ಕೂಡಲೆ ಜಯಹಿಂದ 'ನೇತಾಜಿ' ಕೀಜಿಯ ಮೊದಲಾದ ಘೋಷಣೆಗಳಿಂದ ಕಿವಿಗಡಚಿಕ್ಕಿದವು.

ಮರುದಿನ ಸ್ಪೆಶಲ್ ಗಾಡಿಯಿಂದ ಅವರಲ್ಲಿ ೮೦೦ ಜನ ಸೈನಿಕರನ್ನು ಮತ್ತೊಂದು ಶಿಬಿರಕ್ಕೆ ಸಾಗಿಸಲಾಯಿತು. ಗಾಂಧೀಜಿಯವರ ವಸತಿಯ ಮುಂದೆ ಅದು ಹಾಯ್ದು ಹೋಗುವಾಗ ಮಾಡಲ್ಪಟ್ಟ ಜಯಘೋಷಗಳನ್ನು ಕೇಳಿದರೆ ಕಾಂಗ್ರೆಸ್ಸಿನ ವಿಶೇಷಾಧಿವೇಶನಕ್ಕೆ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗುತಿದ್ದ ಗಾಡಿ ಅದೆಂದು ಎನಿಸುವಂತಿದ್ದಿತು.

ಸದ್ಭಾವನೆಯ ಒರೆಗಲ್ಲು

ಮಂತ್ರಿತ್ರಯರ ಕಠಿನ ಕೆಲಸದ ಸಂಬಂಧದಲ್ಲಿ ಗಾಂಧಿಜಿಯವರು ಕೆಲ ದಿನಗಳ ಹಿಂದೆ ಇಂಗ್ಲಿಶ ಮಿತ್ರನೊಬ್ಬನಗೂಡ ಚರ್ಚಿಸುತಿದ್ದರು. ಒಂದೆಡೆ ಜನಸಾಮಾನ್ಯರು ಸ್ವಾತಂತ್ರ್ಯಕ್ಕಾಗಿ ಅತ್ಯಂತ ಆತುರರಾಗಿದ್ದಾರೆ; ಮತ್ತೊಂದೆಡೆ ಗಾಂಧೀಜಿ ಹೇಳಿದಂತೆ, ಹಿಂದೂ ಮುಸಲ್ಮನರು ಹಿಂಸಾತ್ಮಕ ಉದ್ದೇಶದಿಂದ ಬುಡದಲ್ಲಿ 'ದುರ್ಮೈತ್ರಿ'ಯನ್ನು ಸಾಧಿಸಿಕೊಂಡಿರುತ್ತಾರೆ. "ತುದಿಯಿಂದ ಬುಡದವರೆಗೆ ಅವರು ಕೂಡಿಕೊಂಡಿದ್ದರೆ ಅದರ ಅರ್ಥ ತಿಳಿಯುತಿದ್ದಿತು. ಹಿಂದುಸ್ತಾನವನ್ನು ಜನಜಂಗುಳಿಯ ಕೈಗೆ ಒಪ್ಪಿಸುವರೆಂದು ಅದರ ಅರ್ಥವಾಗುತಿತ್ತು. ಅಂಥ ಅನಾಹುತವನ್ನು ನೋಡಲು ನನಗೆ ೧೨೫ ವರ್ಷ ಬದಕುವ ಇಚ್ಛೆ ಇಲ್ಲ. ತದ್ವಿರುದ್ಧ ಕಿಚ್ಚಿನಲ್ಲಿ ಬಿದ್ದು ನಾನು ಮರಣ ಹೊಂದುವೆ."

"ರಕ್ತಪಾತದ ವಿಜಯಾನಂತರ ಮಂತ್ರಿಶಿಷ್ಟ ಮಂಡಳ ಹೊಚ್ಚಹೊಸದಾಗಿ ಬರುತಿದೆ" ಎಂದರು ಗಾಂಧೀಜಿ. "ರಕ್ತಪಾತರಹಿತ ಶಾಂತಿಪ್ರಸ್ಥಾಪನೆಯ ವಿಜಯ ಪಡೆಯುವ ಸುಸಂಧಿ ಇದೀಗ ಅವರಿಗೆ ಪ್ರಾಪ್ತವಾಗಿದೆ. ತಮ್ಮ ಮಹತ್ವ ಕಡಮೆಯಾದರೂ (ವಸ್ತುತಃ ಹಾಗಾಗಲಾರದು) ಅವರು ಹಿಂದುಸ್ತಾನಕ್ಕೆ ನ್ಯಾಯವನ್ನು ದಯಪಾಲಿಸಲು ಮುಂದಾದರೆಅವರಿಗೂ ಜಗತ್ತಿಗೂ ಒಳ್ಳೆಭೂಷಣ

—೧೦ನೇ ಪುಟ ನೋಡಿರಿ

ಸತ್ಯಾಗ್ರಹ-ಜೀವನ-ಮರಣಗಳ ಕಲೆ

೧೪-೩-೪೬ ನೆಯ ದಿನಾಂಕದಲ್ಲಿ ಮುಂಬಯಿಯ ಶಿವಾಜಿ ಪಾರ್ಕಿನಲ್ಲಿ ಕೂಡಿದ ಎರಡು ಲಕ್ಷಕ್ಕಿಂತ ಹೆಚ್ಚು ಜನ ಸೇರಿದ್ದ ಪ್ರಚಂಡ ಸಭೆಯಲ್ಲಿ ಗಾಂಧೀಜಿಯವರು ಹಿಂದುಸ್ತಾನಿಯಲ್ಲಿ ಮಹತ್ವದ ಭಾಷಣ ಮಾಡಿದರು. ಅದರ ಸಾರವಿಂತಿದೆ.

“ರಾಮಧುನ ಗೀತಪಠನೆಯು ಸಾಮೂಹಿಕ ಪ್ರಾರ್ಥನೆಯ ಅತ್ಯಂತ ಮಹತ್ವದ ಅಂಗವೊಂದಾಗಿದೆ. ಗೀತಾ ಶ್ಲೋಕಗಳನ್ನು, ಅರಬ್ಬಿ ಮತ್ತು ಝೆಂದ ಅವೆಸ್ತಾ ಪ್ರಾರ್ಥನೆಗಳನ್ನು ಸರಿಯಾಗಿ ಅಂದು ಮರ್ಮ ತಿಳಿದುಕೊಳ್ಳಲು ಲಕ್ಷಾವಧಿ ಜನರಿಗೆ ಕಠಿಣ ಹೋಗಬಹುದು. ಆದರೆ ರಾಮನಾಮವನ್ನು ಇಲ್ಲವೆ ದೇವರ ಹೆಸರನ್ನು ಪ್ರತಿಯೊಬ್ಬ ಪಠಿಸಬಲ್ಲನು. ಅದು ಪರಿಣಾಮಕಾರಿಯಿದ್ದಷ್ಟೆ ಸರಳವಾಗಿರುವುದು. ಅಂತಃಕರಣದಿಂದ ಮಾತ್ರ ಅದು ಹೊರಹೊಮ್ಮಬೇಕು. ಅದು ಸರಳವಿದ್ದುದರಿಂದ ಶ್ರೇಷ್ಠವಾಗಿದೆ. ಅದು ಅಷ್ಟೊಂದು ಸಾರ್ವತ್ರಿಕವಾದುದರ ರಹಸ್ಯವೂ ಇದೇ ಆಗಿದೆ. ಲಕ್ಷಾವಧಿ ಜನರು ಕೂಡಿ ಮಾಡುವಂಥ ಯಾವದೆ ವಸ್ತುವಿಗೆ ಅಂಥ ಪ್ರಚಂಡ ಶಕ್ತಿಯು ಪ್ರಾಪ್ತವಾಗುವುದು.

“ಪೂರ್ವಾಭ್ಯಾಸವಿಲ್ಲದೆ ರಾಮಧುನ ಗೀತದ ಸಾರ್ವತ್ರಿಕ ಪಠನದಲ್ಲಿ ಯಶಸ್ಸು ಸಂಪಾದಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳು. ಆದರೆ ಅದರಲ್ಲಿ ಇನ್ನೂ ಸುಧಾರಣೆಯಾಗಬೇಕಾಗಿದೆ. ನಿಮ್ಮ ಮನೆಗಳಲ್ಲಿಯೂ ಅದನ್ನು ಪ್ರಚಾರಪಡಿಸಬೇಕಾಗಿದೆ. ತಾಳಬದ್ಧವಾಗಿ ಅದನ್ನು ಪಠಿಸಿದ್ದಾದರೆ ಧ್ವನಿ, ತಾಳ ಮತ್ತು ವಿಚಾರ ಈ ತ್ರಿವೇಣಿ ಸಂಗಮದಿಂದ ಶಬ್ದಗಳಿಂದ ವರ್ಣಿಸಲಸಾಧ್ಯವಾದಂತಹ ಮಧುರ ಮತ್ತು ಶಕ್ತಿಸಂಪನ್ನ ವಾತಾವರಣವುಂಟಾಗುತ್ತಿದೆ.

“ದಕ್ಷಿಣ ಆಫ್ರಿಕಾ ಸತ್ಯಾಗ್ರಹ ಸಂಗ್ರಾಮವನ್ನು ಪ್ರಾರಂಭಿಸುವ ಮೊದಲು ಕೆಲ ದಿನಗಳ ಪೂರ್ವದಲ್ಲಿ ನಾನು ಈ ಸಾಮೂಹಿಕ ಪ್ರಾರ್ಥನೆಯ ಪ್ರಯೋಗವನ್ನು ಪ್ರಾರಂಭಿಸಿದೆನು. ಅಲ್ಲಿನ ಹಿಂದೀ ಜನಾಂಗವು ಭಾರೀ ಗಂಡಾಂತರದಲ್ಲಿ ಬಿದ್ದಿದ್ದಿತ್ತು. ಮಾನವರಿಗೆ ಶಕ್ಯವಿದ್ದುದಷ್ಟು ನಾವು ಮಾಡಿದೆವು. ಪರಿಹಾರ ಪಡೆಯಲು ಎಲ್ಲ ಉಪಾಯಗಳನ್ನು ಯೋಜಿಸಲಾಯಿತು. ಪತ್ರಿಕೆಗಳ ಮುಖಾಂತರ, ಸಭೆ ಸಮ್ಮೇಲನಗಳಲ್ಲಿ ಚಳವಳಿ ನಡೆಸಿದ್ದಾಯಿತು. ಮನವಿ ಶಿಷ್ಟಮಂಡಳಗಳ ಮುಖಾಂತರವಾಗಿಯೂ ಪ್ರಯತ್ನಿಸಿದ್ದಾಯಿತು. ಅದರೆಲ್ಲವೂ ನಿರರ್ಥಕವಾಯಿತು. ಪ್ರಚಂಡ ಬಹುಸಂಖ್ಯಾಕರಾದ ನೀಗ್ರೋಗಳು ಮತ್ತು ಬಿಳಿಯರ ಮಧ್ಯದಲ್ಲಿ ನಿಕೃಷ್ಟಗಳೂ ಸಾಲಗುಳಿಗಳೂ ಆದ ಕೆಲ ಜನ ಹಿಂದೀಯರು ಏನು ಮಾಡಬಲ್ಲರು? ಅವರಲ್ಲಿಯೂ ಹೆಚ್ಚು ಜನರು ಕೇವಲ ಕೂಲಿಕಾರರು, ಕೆಲ ಜನರು ಮಾತ್ರ ವ್ಯಾಪಾರಸ್ಥರು ಮತ್ತು ಬೀಡಿವ್ಯಾಪಾರಿಗಳು. ಬಿಳಿಯರೆಲ್ಲ ಸಂಪೂರ್ಣ ಶಸ್ತ್ರಾಸ್ತ್ರ ಸನ್ನದ್ಧರು. ಹಿಂದೀಯರು ತಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳಬೇಕಿದ್ದರೆ ಇಷ್ಟೊಂದು ಪ್ರಚಂಡ ಪ್ರಮಾಣದಲ್ಲಿ ಬಿಳಿಯರು ಸುಸಜ್ಜಿತರಾದ ಶಸ್ತ್ರಕ್ಕಿಂತ ಶ್ರೇಷ್ಠ ಮತ್ತು ಭಿನ್ನವಾದ ಶಸ್ತ್ರವನ್ನು ಧರಿಸಬೇಕೆಂಬುದು ಸುಸ್ಪಷ್ಟವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಸತ್ಯಾಗ್ರಹ ಇಲ್ಲವೆ ಆತ್ಮಶಕ್ತಿಯ ಶಸ್ತ್ರದಲ್ಲಿ ಶಿಕ್ಷಣ ಕೊಡುವುದಕ್ಕಾಗಿ ನಾವು ಫೋನಿಕ್ಸ ಮತ್ತು ಟಾಲಸ್ಟಾಯಫಾರ್ಮಗಳಲ್ಲಿ ಈ ಸಾಮೂಹಿಕ ಪ್ರಾರ್ಥನೆಯನ್ನು ನಾನು ಪ್ರಾರಂಭಿಸಿದೆನು.

“ಪ್ರಾರ್ಥನೆ ಸತ್ಯಾಗ್ರಹದ ಮೂಲ. ಪಾಶವೀ ಶಕ್ತಿಯ ಪೀಡನೆಯಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಸತ್ಯಾಗ್ರಹಿಯು ಪರಮಾತ್ಮನನ್ನೆ ಮೊರೆಹೊಗುವನು. ಆದುದರಿಂದ ನಿವನ್ನು ಮೋಸಗೊಳಿಸುವ ಬ್ರಿಟಿಶ ಇಲ್ಲವೆ ಬೇರೆಯವರಿಗಾಗಿ ನೀವು ಯಾವಾಗಲೂ ಏಕೆ ಭಯಭೀತರಾಗಬೇಕು? ಯಾರಾದರೂ ನಿಮ್ಮನ್ನು ಮೋಸಗೊಳಿಸಿದರೆ ಅವನೆ ಹಾನಿಗೊಳಗಾಗುವನು. ಸಂಶಯಾತ್ಮನು ಇಲ್ಲವೆ ಭಯಭೀತನು ಸತ್ಯಾಗ್ರಹ ಸಂಗ್ರಾಮ ಹೂಡಲಾರನು. ಬಲಿಷ್ಠನೆ ಅದನ್ನು ಹೂಡಬಲ್ಲನು. ಬದುಕುವ ಹಾಗು ಸಾಯುವ ಕಲೆಯನ್ನು ಸತ್ಯಾಗ್ರಹ ಕಲಿಸುತ್ತದೆ. ಮಾನವನಿಗೆ ಜೀವನ ಮರಣಗಳು ಸ್ವಭಾವವಾಗಿವೆ. ಅಂತರಾತ್ಮನನ್ನು ಅರಿತುಕೊಳ್ಳಲು ಪ್ರಯತ್ನಿಸುವವನು ಮನುಷ್ಯನು. ಪಶು ಮತ್ತು ಮಾನವನಲ್ಲಿರುವ ಭೇದವೆ ಇದು. ಪ್ರಾರ್ಥನೆಯ ಕಾಲಕ್ಕೆ ಪಠಿಸುತ್ತಿರುವ ಶ್ರೀ ಭಗವದ್ಗೀತೆಯ ೨ ನೇ ಅಧ್ಯಾಯದ ಕೊನೆಯ ೧೮ ಶ್ಲೋಕಗಳು ಜೀವನದ ಕಲೆಯ ರಹಸ್ಯವನ್ನು ಸಂಕ್ಷೇಪತಃ ಪ್ರತಿಪಾದಿಸುವವು. ಅರ್ಜುನನು ಕೇಳಿದ ಪ್ರಶ್ನೆಗೆ ಉತ್ತರವೆಂದು ಶ್ರೀಕೃಷ್ಣನು ಸ್ಥಿತಪ್ರಜ್ಞನ ಅಂದರೆ ಸತ್ಯಾಗ್ರಹಿಯ ವರ್ಣನೆಯನ್ನು ಈ ಶ್ಲೋಕಗಳಲ್ಲಿ ಮಾಡಿರುವನು.

“ಜೀವನಕ್ಕೆ ಅನುಷಂಗಿಕವಾಗಿಯೆ ಮರಣದ ಕಲೆಯಿದೆ. ಪ್ರತಿಯೊಬ್ಬ ಸಾಯಲೇಬೇಕು. ಸಿಡಿಲು ಬಡಿದು ಮನುಷ್ಯ ಸಾಯಬಹುದು, ಹೃದಯವಿಕಾರದಿಂದ ಅಥವಾ ಶ್ವಾಸ ನಿಂತು ಮರಣ ಹೊಂದಬಹುದು. ಆದರೆ ಇಂಥ ಮರಣವನ್ನು ಸತ್ಯಾಗ್ರಹಿಯು ಎಂದೂ ಬಯಸನು. ಇಲ್ಲವೆ ಅದಕ್ಕಾಗಿ ಪ್ರಾರ್ಥನೆಯನ್ನು ಮಾಡಲಾರನು. ಕರ್ತವ್ಯ ಮಾಡುತ್ತಿರುವಾಗಲೆ ಆನಂದದಿಂದ ಮರಣವನ್ನಪ್ಪಿಕೊಳ್ಳುವುದೇ ಸತ್ಯಾಗ್ರಹಿಗೆ ಇಷ್ಟವಾಗಿದೆ. ಇದೇ ಮರಣಕಲೆಯು. ಮುಂಬಯಿಯಲ್ಲಿಯ ಜನರು ಇನ್ನೂ ಆ ಕಲೆಯನ್ನು ಕಲಿತಿಲ್ಲೆಂಬುದು ವ್ಯಕ್ತವಾಯಿತು. ನಿಮ್ಮ ಶತ್ರುಗಳ ಪ್ರಾಣ ತೆಗೆದುಕೊಳ್ಳಬಯಸದಿದ್ದರೆ ಅಥವಾ ಅವರನ್ನು ನೋವಿಗೀಡುಮಾಡದಿದ್ದರಷ್ಟೇ ಸಾಲದು. ನಿಮ್ಮ ಶತ್ರು ಕೊಲ್ಲಲ್ಪಡುತಿರುವಾಗ ನೀವು ಮೂಕರಂತೆ ಇಲ್ಲವೆ ನಿಷ್ಕ್ರಿಯರಾಗಿ ನಿಂತುಕೊಂಡರೆ ಸತ್ಯಾಗ್ರಹಿಗಳಾಗಲಾರಿರಿ. ನಿಮ್ಮ ಪ್ರಾಣವನ್ನು ಗಂಡಾಂತರದಲ್ಲಿ ನೂಕಿಯಾದರೂ ನೀವು ಆ ಶತ್ರುವಿನ ಪ್ರಾಣವನ್ನುಳಿಸಲಿಕ್ಕೆಬೇಕು. ಹಿಂದುಸ್ತಾನದಲ್ಲಿಯ ಸಾವಿರಾರು ಜನ ಈ ಕಲೆ ಕಲಿತಿದ್ದಾದರೆ ಹಿಂದುಸ್ತಾನದ ಬಣ್ಣವೆ ಬದಲಾಗುವುದು; ಅಶಕ್ತತೆಗಾಗಿ ಅಹಿಂಸೆಯ ಸೋಗು ಹಿಂದುಸ್ತಾನ ಹಾಕಿಕೊಂಡಿದೆಂದು ಯಾರೂ ಅಣಕವಾಡಿ ಬೊಟ್ಟು ಮಾಡಿ ತೋರಿಸಲು ಸಮರ್ಥರಾಗಲಾರರು. ಅನಂತರ ಅನಿಷ್ಟ ಘಟನೆಗಳನ್ನು ತುಂಟರ ಮೇಲೆ ಹೊರಿಸಲು ನಾವು ಪ್ರಯತ್ನಿಸಲಾರೆವು. ಅಂಥ ಕಿಡಿಗೇಡಿಗಳ ಹೃದಯ ಪರಿವರ್ತನೆ ಮಾಡಿ ಅವರನ್ನು ನಿಯಂತ್ರಿಸಬಲ್ಲೆವು.

“ನಮ್ಮ ಇತಿಹಾಸದಲ್ಲಿ ಗಂಡಾಂತರದ ಕಾಲವನ್ನು ನಾವೀಗ ಕ್ರಮಿಸುತ್ತಿರುವೆವು. ಸುತ್ತಲೂ ಗಂಡಾಂತರ ನಮ್ಮನ್ನೆದುರಿಸುತ್ತಿದೆ. ಸತ್ಯಾಗ್ರಹದ ಶಕ್ತಿಯನ್ನು ನಾವು ತಿಳಿದುಕೊಂಡದ್ದಾದರೆ ನಾವು ಅದನ್ನು ನಮ್ಮ ಸುಸಂಧಿಯನ್ನಾಗಿ ಪರಿವರ್ತಿಸಿಕೊಳ್ಳಬಲ್ಲೆವು. ಜಗತ್ತಿನಲ್ಲಿ ಸತ್ಯಾಗ್ರಹಕ್ಕಿಂತ ಹೆಚ್ಚು ಪ್ರಬಲವಾದ ಅಸ್ತ್ರ ಬೇರೊಂದಿಲ್ಲ.

ಉರುಳಿ ಪ್ಯಾರೇಲಾಲ
೨೫-೩-೪೬

ಇದೇನು ಪ್ಯೆಗೂಲೀ ಸೈನ್ಯವಲ್ಲ

(೯ ನೇ ಪುಟದಿಂದ ಮುಂದರಿದುದು)

ಪ್ರದವಾದ ಸಂಗತಿಯಾಗುವದು. ಅದರಿಂದ ಅಹಿಂಸೆಯ ಹೆಚ್ಚಳವಾದಂತಾಗುವದು. ಆದರೆ ಜಗತ್ತಿನಲ್ಲಿ ಅದ್ಭುತ ಚಮತ್ಕಾರಗಳು ಸಂಭವಿಸಿದ್ದುಂಟು.”

“ಅಂತೂ ಚಮತ್ಕಾರಗಳಲ್ಲಿ ನಿಮಗೆ ವಿಶ್ವಾಸವಿದೆ” ಎಂದು ಗೆಳೆಯನೊಬ್ಬ ಒಡಗುಟ್ಟಿದ

“ನನಗೆ ವಿಶ್ವಾಸವಿದೆ, ಇಲ್ಲ” ಎಂದರು ಗಾಂಧೀಜಿ. ಪರಮಾತ್ಮ ಚಮತ್ಕಾರಗಳಿಂದ ಕಾರ್ಯ ಮಾಡುವುದಿಲ್ಲ. ಆದರೆ ದೈವೀ ಇಚ್ಛೆ ಮಾನವರ ಮುಖಾಂತರ ಪ್ರದರ್ಶಿತವಾಗುವದು. ಜನರಿಗೆ ಅದೇ ಚಮತ್ಕಾರದಂತೆ ತೋರುವದು. ಪರಮಾತ್ಮನನ್ನು ನಾವರಿಯೆವು. ಆದರೆ ಅವನ ವಿಧಿಗನುಸಾರವಾಗಿ ವ್ಯವಹಾರ ನಡೆಯುತಿದೆ. ಅದರಿಂದಲೆ ನಾವವನನ್ನು ಬಲ್ಲೆವು. ಪರಮಾತ್ಮ ಮತ್ತು ಅವನ ವಿಧಿ ಅಭಿನ್ನವಾಗಿವೆ. ಅವನ ವಿಧಿಗೆ ಹೊರತಾದುದು ಯಾವುದೂ ಇಲ್ಲ. ಅವನ ಇಚ್ಛೆ ಇಲ್ಲದೆ ಭೂಕಂಪ ಬಿರುಗಾಳಿಯೂ ಸಂಭವಿಸುವುದಿಲ್ಲ. ಅವನ ಇಚ್ಛೆಯಿಲ್ಲದಿದ್ದರೆ ಒಂದು ಕಡ್ಡಿ ಹುಲ್ಲು ಕೂಡ ಬೆಳೆಯದು: ಭೂತ ಕೂಡ ಅವನ ಅಧೀನನೆ. ಪರಮಾತ್ಮನನ್ನು ಬಿಟ್ಟು ಅವನು ಏನನ್ನೂ ಮಾಡನು.

“ಅನಿರ್ಬಂಧವಾಗಿ ಅವರು ಬ್ರಿಟಿಶ್ ಸೈನ್ಯವನ್ನು ಹಿಂತೆಗೆದುಕೊಳ್ಳಲು ಒಪ್ಪಬೇಕೆಂದು ನೀವು ಹೇಳುವಿರೋ! ನ್ಯಾಯವೆಂಬುದಕ್ಕೆ ಇದೇ ಅರ್ಥವೇ? ಎಂದು ಗೆಳೆಯ ಕೇಳಿದ.

ಅಮಂಗಲ ?

“ಅಹುದು ನಾನು ಹಾಗೆ ಕೇಳುತ್ತೇನೆ. ಎಂದು ಗಾಂಧೀಜಿಯವರು ಸ್ವಲ್ಪವೂ ತಡವರಿಸದೆ ಉತ್ತರಿಸಿದರು. ಬ್ರಿಟಿಶ ಸೈನ್ಯ ಸಂಸ್ಥಾನ ಸಹಿತ ಹಿಂದುಸ್ತಾನದಿಂದ ಹೊರಟದ್ದು ಹೋದಾಗಲೆ ನಿಜವಾದ ಸ್ವಾತಂತ್ರ್ಯ ಪಡೆದಂತಾಗುವುದು.”

“ಇಲ್ಲದಿದ್ದರೆ ಅದು ಅಮಂಗಲವಾಗುವುದು” ಗೆಳೆಯ ಅಭಿಪ್ರಾಯಪಟ್ಟ.

ಸ್ವತಂತ್ರ ಹಿಂದುಸ್ತಾನದಲ್ಲಿ ಸಂಸ್ಥಾನಗಳ ಸ್ಥಾನಮಾನಗಳೇನು ಎಂಬ ಪ್ರಶ್ನೆ ಇದರಿಂದ ಉದ್ಭೂತವಾಗುವದು. ಬ್ರಿಟಿಶ ಸಾರ್ವಭೌಮ ಸತ್ತೆ ಇಲ್ಲದಂತಾದ ಬಳಿಕ ಅವರೂ ಸ್ವತಂತ್ರರಾಗುವರು. ಗ್ರೇಟಬ್ರಿಟನ್ನದ ಗೂಡ ಹೊಸ ಸ್ವತಂತ್ರ ಒಡಂಬಡಿಕೆಮಾಡಿಕೊಳ್ಳಲು ಅವರು ಆಗ ಸ್ವತಂತ್ರರಾಗುವರೆಂದು ಅಲ್ಲಲ್ಲಿ ಮಾತು ಕೇಳಬರುತಿದೆ. ಇದೆಲ್ಲ ಕೇವಲ ಬೆಳದಿಂಗಳು ಕಾಯದೆಯಂತೆ ಸಂಸ್ಥಾನಗಳ ಸಂಬಂಧ ಬ್ರಿಟಿಶ್ ಸರಕಾರದ ಗೂಡ ಇದ್ದರೂ ವ್ಯವಹಾರದಲ್ಲಿ ಹಿಂದುಸ್ತಾನ ಸರಕಾರಕ್ಕೇ ಅವು ಸಂಬದ್ಧವಾಗಿವೆಂದು ಕಾಯದೇ ಪಂಡಿತರು ಅಭಿಪ್ರಾಯ ಪಡುತಿರುವರು. ಭಾವೀ ಸ್ವತಂತ್ರ ಹಿಂದುಸ್ತಾನ ಸರಕಾರಕ್ಕೆ ಸದ್ಯದ ಹಿಂದುಸ್ತಾನ ಸರಕಾರದ ಎಲ್ಲ ಅಧಿಕಾರ ಹಕ್ಕು ಬಾಧ್ಯತೆಗಳು ಪ್ರಾಪ್ತವಾಗುವವು. ೧೮೫೮ ರಲ್ಲಿ ಕಂಪನಿ ಸರಕಾರವು ಹಿಂದುಸ್ತಾನ ಸರಕಾರಕ್ಕೆ ಆಡಳಿತ ಒಪ್ಪಿಸಿಕೊಡುವಾಗ ಅದರ ಅಧಿಕಾರವೆಲ್ಲ ಹಿಂದುಸ್ತಾನ ಸರಕಾರಕ್ಕೆ ಬಂದಂತೆ ಈಗ ಸ್ವತಂತ್ರ ಹಿಂದುಸ್ತಾನ ಸರಕಾರಕ್ಕೆ ಎಲ್ಲ ಅಧಿಕಾರ ಬರುವದು. ಸಾರ್ವಭೌಮರಿಗೆ ನೇರವಾದ ಸಂಬಂಧವಿದೆಂದು ಹೇಳುವ “ಸ್ವತಂತ್ರ ಒಪ್ಪಂದದ ಸಂಸ್ಥಾನಗಳು” ಎಂಬುದು ಕೇವಲ ಕಲ್ಪನಾತ್ಮಕವಾಗಿದ್ದು ಅದರ ವಿಚಾರ ಕೂಡ ಮಾಡುವಂತಿಲ್ಲ. ಈ ಸಂಬಂಧದಲ್ಲಿ ಬಟ್ಲರ ಸಮಿತಿಯ ವರದಿಯನ್ನುಲ್ಲೇಖಿಸಬಹುದು.

“ಸಂಸ್ಥಾನಗಳು ಬ್ರಿಟಿಶ್ ಆಡಳಿತದ ಸಂಬಂಧದಲ್ಲಿ ಬಂದಾಗ ಸ್ವತಂತ್ರವಿದ್ದವೆಂದು ಹೇಳುವದು ಐತಿಹಾಸಿಕ ಸಂಗತಿಗಳಿಗೆ ವಿಪರ್ಯಸ್ತವಾಗಿದೆ ಕೆಲವನ್ನು ಬ್ರಿಟಿಶರು ಉಳಿಸಿದರು. ಹಲವನ್ನು ಹೊಸದಾಗಿ ರಚಿಸಿದರು.”

ಸಾರ್ವಭೌಮತ್ವವು ಉಳಿಯತಕ್ಕದ್ದೆಂದು ಸರ್ ಸಾಮ್ಯುವೆಲ್ ಹೋರರು ಕಾಮನ್ಸ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದುಂಟು. ಸಂಯುಕ್ತ ಸರಕಾರದ ನಿಯಂತ್ರಣದಿಂದ ಮಾತ್ರ ಅವರು ಈ ಸಾರ್ವಭೌಮತ್ವವನ್ನು ಕೆಲವುಟ್ಟಿಗೆ ಸಡಲಿಸಿಕೊಳ್ಳಬಹುದು. ಬ್ರಿಟಿಶ ವರ್ಚಸ್ಸು ಇಲ್ಲವೆ ಅಧಿಕಾರದ ಬೊಕ್ಕಸಗಳೆಂದು ಅಥವಾ ಲಾರ್ಡ ಕ್ಯಾನಿಂಗರು ೧೮೫೭-೫೮ ರ ಗಂಡಾಂತರದ ಕಾಲದಲ್ಲಿ ತಮ್ಮ ಪತ್ರಗಳಲ್ಲಿ ಉಲ್ಲೇಖಿಸಿದಂತೆ ‘ಒಂದೇ ಥೆರೆಯಿಂದ ನಮ್ಮನ್ನೆಲ್ಲ ಒಳೆದುಬಿಡುವಂಥ ಬಿರುಗಾಳಿಗೆ ‘ಬ್ರೇಕ್’ ಎಂದು ಭಾವಿಸಿ ಸಂಸ್ಥಾನಗಳನ್ನುಳಿಸಿಕೊಳ್ಳುವ ಪ್ರಯತ್ನ ಮಾಡಿದರೆ ಭಾರತೀಯರು ಬ್ರಿಟಿಶರ ಸದ್ಭಾವನೆಗಳನ್ನು ಅತ್ಯಂತ ಸಂಶಯಾತ್ಮಕ ದೃಷ್ಟಿಯಿಂದ ನೋಡುವರಲ್ಲದೆ ತ್ಯಾಜ್ಯವೆಂದು ತಿಳಿಯುಕೊಳ್ಳುವರು.

ಸಂಸ್ಥಾನಗಳಲ್ಲಿಯೂ ಹಿಂದು ಮುಸಲ್ಮಾನ ಶೀಖ ಎಂದು ಮಾಡಿದ ವಿಭಜನೆ ಹೋಗಲಿಕ್ಕೆ ಬೇಕು. ಸಂಸ್ಥಾನಗಳಲ್ಲಿನ ಇಲ್ಲವೆ ಹೊರಗಿನ ವಿಶಿಷ್ಟ ಹಿತಸಂಬಂಧಗಳು ಅವುಗಳ ಆಡಳಿತೆಯನ್ನು ನಡೆಸದೆ ಜನತೆಯೇ ನಡೆಸತಕ್ಕದ್ದು. ಸಂಸ್ಥಾನಿಕರು ತಮ್ಮ ಹೆಸರನ್ನು ಮಾತ್ರ ಇಟ್ಟುಕೊಳ್ಳತಕ್ಕದ್ದು, ಆಡಳಿತವೆಲ್ಲ ಅವರ ಪ್ರಜೆಗಳ ಕಡೆಗೆ ಇರತಕ್ಕದ್ದು. ಸ್ವತಂತ್ರ ಹಿಂದುಸ್ತಾನದ ಮಂಡಳದಲ್ಲಿ ಅವರು ಬೇರೆ ಯಾವ ಅಧಿಕಾರದಿಂದಲೂ ಉಳಿಯಲಾರರು.

ದಿವಂಗತ ಕೀಥರ ಹೇಳಿಕೆಯನ್ನು ಈ ಸಂಬಂಧದಲ್ಲಿ ಉಲ್ಲೇಖಿಸಬಹುದು.

“ಸಾರ್ವಭೌಮ ಸರಕಾರ ಜನತೆಗೆ ಅಧಿಕಾರ ವಹಿಸಿಕೊಟ್ಟ ಬಳಿಕ ಸಂಸ್ಥಾನಿಕರೂ ಅವರನ್ನನುಸರಿಸಬೇಕೆಂದು ಗಾಂಧೀಜಿಯವರು ಹೇಳುತಿರುವುದಕ್ಕೆ ನಿಜವಾಗಿ ಉತ್ತರವಿಲ್ಲ.”

ಪ್ಯಾರೇಲಾಲ

ದಿಲ್ಲಿಗೆ ಹೋಗುವ ಗಾಡಿಯಲ್ಲಿ
೧೩-೩-೪೬.

ಕಸ್ತೂರ ಬಾ ಸ್ಮಾರಕ ನಿಧಿ

ಮಾರ್ಚ ೨೮, ೨೯ ಮತ್ತು ೩೦ ನೆಯ ತಾರೀಕುಗಳಲ್ಲಿ ಉರುಳಿ ಕಂಚನದಲ್ಲಿ ಈ ನಿಧಿಯ ಏಜಂಟರ ಒಂದು, ಮತ್ತು ಕಾರ್ಯಕಾರಿ ಮಂಡಳದ ಒಂದು ಹೀಗೆ ಎರಡು ಸಭೆಗಳು ಕೂಡಿದ್ದವು. ಏಜಂಟರ ಇಂಥ ಸಭೆ ಕೂಡಿದ್ದು ಇದೇ ಮೊದಲನೆಯ ಸಲ. ಅನೇಕ ಮಹತ್ವದ ಪ್ರಶ್ನೆಗಳನ್ನು ಏಜಂಟರು ಚರ್ಚಿಸಿದರು. ಏಜಂಟರು ಶಾಸನ ಸಭೆಗಳ ಸದಸ್ಯರೇಕಾಗಬಾರದು ? ಅವರು ತಮ್ಮ ಕಾರ್ಯವನ್ನು ಯೋಗ್ಯ ರೀತಿಯಿಂದ ನಿರ್ವಹಿಸಬೇಕಾದರೆ ಶಾಸನ ಸಭೆಗಳಲ್ಲಿಯ ಕೆಲಸಗಳಿಗೆ ಅವರಿಗೆ ಸಮಯ ಸಿಕ್ಕದು. ತಮ್ಮ ಹಿತಸಂಬಂಧಗಳನ್ನು ನೋಡಿಕೊಳ್ಳಲು ಶಾಸನ ಮಂಡಲಗಳ ಸದಸ್ಯರಿರುವರೆಂದು ಹಳ್ಳಿಗರಿಗೆನಿಸಿದರೆ ಅವರಿಗೊಂದು ತಪ್ಪು ಉದಾಹರಣೆ ಹಾಕಿ ಕೊಟ್ಟಂತಾಗುವುದೆಂಬುದು ಒಳ್ಳೆ ನಿರ್ಣಾಯಕವಾದ ಕಾರಣವಾಗಿದೆ.

ಅವರು ಯಾವದೇ ಕಾರ್ಯಕ್ಷೇತ್ರವನ್ನಾರಿಸಿಕೊಂಡರೂ ಅಸತ್ತಾಧಾರಿಗಳಾಗಕೂಡದು. ಕಳೆದ ವರ್ಷ ನೇಮಿಸಲ್ಪಟ್ಟ ಸಮಿತಿಗಳ ಸ್ಥಳಗಳಲ್ಲಿ ಈಗ ಏಜಂಟರನ್ನು ನೇಮಿಸಿದೆಂಬುದು ಗಮನಿಸಲ್ಲಿಡತಕ್ಕ ಸಂಗತಿಯಾಗಿದೆ. ಇಡೀ ಪ್ರಾಂತದಲ್ಲಿ ಅವರು ಇದ್ದುದಾದರೆ ಅವರಿಗೆ ನಿರ್ದಿಷ್ಟ ಕಾರ್ಯಗಳು ಇರುವವು. ಆ ಕಾರ್ಯ ಅವರಿಂದ ಆಗದಿದ್ದರೆ ಒಂದು ಅಥವಾ ಹಲವು ಸ್ಥಾನಗಳಲ್ಲಿ ಹಳ್ಳಿಗಳಿಗಾಗಿ ಹೆಣ್ಣುಮಕ್ಕಳನ್ನು ತರಬೇತಿ ಮಾಡಲು ಮಾದರಿ ಶಿಬಿರಗಳನ್ನು ತೆರೆಯಬೇಕಾಗುವುದು. ಶಿಕ್ಷಕರು ದಾಯಿಗಳು ನೂಲುವವರು ನೇಕಾರರು, ಆರೋಗ್ಯರಕ್ಷಕರು ಮುಂತಾದವರು ಇರಬಹುದು. ಹಿಂದುಸ್ತಾನದ ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗಾಗಿ ಹೆಣ್ಣುಮಕ್ಕಳೇ ಕಾರ್ಯಮಾಡುವುದು ಪರಂಪರೆಯೆ ಇದೆ. ಗಂಡಸರು ಅದಕ್ಕೆ ಯೋಗ್ಯರಲ್ಲೆಂದು ಹೇಳಬೇಕಾಗುವದು. ಆದರೆ ಈ ವರೆಗೆ ಹೆಣ್ಣುಮಕ್ಕಳಿಗೆ ಇಂಥ ಕಾರ್ಯದ ಅನುಭವ ಇಲ್ಲದೆ ಇರುವುದರಿಂದ ಸ್ವಲ್ಪ ಕಠಿನ ಹೋಗಬಹುದು. ವಿಶೇಷತಃ ಪ್ರಾರಂಭದಲ್ಲಿ ಕಠಿನವೆನಿಸಬಹುದು. ಏಜಂಟರು ಕೆಲವೊಂದು ಕ್ಷೇತ್ರವನ್ನು ನಿರ್ದಿಷ್ಟಪಡಿಸಿಕೊಂಡು ಒಳ್ಳೆ ಜೋಂಪಿನಿಂದ ತಮ್ಮ ಕಾರ್ಯ ಮಾಡಲು ಪ್ರಯತ್ನಿಸಿದ್ದಾದರೆ ಕಾರ್ಯವು ಹಗುರಾದುದು ಮತ್ತು ಉದ್ಬೋಧಕವಾದುದೆಂದು ಅವರಿಗೆನಿಸದಿರಲಾರದು.

ಅವರಿಗೆ ಸಲಹೆಗಾರರೂ ಇರುವರು. ಅವರೇನು ಕೇವಲ ಭೂಷಣಕ್ಕಾಗಿರುವುದಿಲ್ಲ, ಏಜಂಟರಿಗೆ ಯಾವಾಗಲೂ ಅವರ ಸಲಹೆ ಸಿಕ್ಕುವುದು. ಯೋಗ್ಯ ಸಲಹೆಗಾರರನ್ನಾರಿಸಿಕೊಂಡದ್ದಾದರೆ ಏಜಂಟರ ಕಠಿನ ಕಾರ್ಯದಲ್ಲಿ ಅವರೊಳ್ಳೆ ಬಲಿಷ್ಠರಾಗಿ ಪರಿಣಮಿಸುವರು.

ಕೇವಲ ಹೆಣ್ಣುಮಕ್ಕಳನ್ನೆ ಏಜಂಟರನ್ನಾಗಿ ನೇಮಿಸಿಕೊಂಡದ್ದು ಹೊಸ ಪ್ರಯೋಗ. ಕೇಂದ್ರದವರು ಅವರಿಂದ ಯೋಗ್ಯ ರೀತಿಯಿಂದ ಕೆಲಸ ತೆಗೆದುಕೊಂಡರೆ ಮತ್ತು ಸಲಹೆಗಾರರು ಯೋಗ್ಯ ಸಲಹೆ ಕೊಟ್ಟರೆ ಮಾತ್ರ ಅದು ಯಶಸ್ವಿಯಾಗಬಲ್ಲದು. ಅವರೂ ಹೆಣ್ಣುಮಕ್ಕಳೇ ಇರಬೇಕಾದುದು ಇಷ್ಟವಾಗಿದ್ದರೂ ಪ್ರಾರಂಭದಲ್ಲಿ ಹೆಚ್ಚಾಗಿ ಗಂಡಸರನ್ನೆ ಆರಿಸಿಕೊಳ್ಳಬೇಕಾಗುವುದು. ಸಲಹೆಗಾರರು ಕೇವಲ ಸಲಹೆ ಕೊಡಬೇಕಲ್ಲದೆ ಅದಕ್ಕೂ ಹೆಚ್ಚಿನ ಇಲ್ಲವೆ ಕಡಮೆ ಕಾರ್ಯವನ್ನವರು ಆಸಿಸಬಾರದು. ಕೇಳಿದಾಗಲೆಲ್ಲ ಏಜಂಟರಿಗೆ ಸಲಹೆ ಕೊಡುವ ಮಹತ್ವದ ಹಕ್ಕು ಅವರಿಗೆ ಇರುವುದು. ಬುಡದಿಂದ ತುದಿಯ ವರೆಗೆ ಕೇವಲ ಸ್ತ್ರೀಯರಿಂದಲೆ ಸಂಸ್ಥೆಯನ್ನು ನಡೆಸಬೇಕೆಂಬ ಒಂದೇ ಸ್ಪಷ್ಟ ಮತ್ತು ಪ್ರಬಲ ಕಾರಣದ ಹೊರತು ಬೇರೆ ಯಾವ ಕಾರಣಕ್ಕಾಗಿಯೂ ತಮ್ಮನ್ನು ತೆಗೆದಿಲ್ಲೆಂದು ಇದೀಗ ವಿಸರ್ಜಿತ ಸಮಿತಿಯ ಸದಸ್ಯರು ತಿಳಿಯತಕ್ಕದ್ದು. ಸಂಸ್ಥೆಯ ಪ್ರತಿಯೊಂದು ಅಂಗವು ಅದಕ್ಕೆ ವಿಧೇಯವಾಗಿ ಕೇವಲ ಸೇವಾಭಾವನೆಯಿಂದ ಕಾರ್ಯಮಾಡಲಣಿಯಾಗುವುದರಲ್ಲಿಯೆ ಅದರ ಯಶಸ್ಸಿನ ರಹಸ್ಯವಿದೆಯೆಂಬುದು ಬೇರೆ ಸಂಸ್ಥೆಯಂತೆ ಈ ಸಂಸ್ಥೆಗೂ ಅನ್ವಯಿಸುವದು.

(ದಿಲ್ಲಿಯ ಗಾಡಿಯಲ್ಲಿ)

೩೧-೩-೪೬ ಮೋ. ಕ. ಗಾಂಧಿ

ಕರ್ನಾಟಕ

ಧಾರವಾಡ

ಇದೇ ೧೬ರಿಂದ ೨೦ರ ವರೆಗೆ ರೋಣ ತಾಲೂಕ ರಾಜೂರಲ್ಲಿ ನಡೆಯಲಿದ್ದ ಕಾಲಕಾಲೇಶ್ವರ ಜಾತ್ರೆಯು ೨ ತಿಂಗಳ ವರೆಗೆ ಕೂಡಬಾರದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ೧೪೪ನೇ ಕಲಮಿನನ್ವಯ ಅಡ್ಡಿ ಮಾಡಿದ್ದಾರೆ. ಕುಡಿಯುವ ನೀರಿನ ಅಭಾವ ಮತ್ತು ಆಹಾರ ಧಾನ್ಯ ಹಾಗೂ ಮೇವಿನ ಕೊರತೆ ಇದಕ್ಕೆ ಕಾರಣವಂತೆ.

ನರಗುಂದದಲ್ಲಿ ೧ನೇ ತಾರೀಕು ಹುತಾತ್ಮಾ ಮೈಲಾರ ಮಹಾದೇವಪ್ಪನ ಪುಣ್ಯತಿಥಿ ಆಚರಿಸಲ್ಪಟ್ಟಿತು. ಮುಂಜಾನೆ ನಗರ ಸಂಕೀರ್ತನವಾಯಿತು. ಧ್ವಜವಂದನೆಯಾಗಿ ಹಲವರ ಭಾಷಣಗಳಾದವು. ೨ ನಿಮಿಷ ಮೌನವ್ರತ ಕೈಕೊಂಡ ನಂತರ ಸಭೆ ವಿಸರ್ಜಿತವಾಯಿತು. ದುಃಖ ಸೂಚಿಸುವದಕ್ಕಾಗಿ ಧ್ವಜವನ್ನು ಅರ್ಧಕ್ಕಿಳಿಸಲಾಯಿತು.

ಕರ್ನಾಟಕ ಚರಖ ಸಂಘದವರು ಬರಗಾಲ ಪರಿಹಾರ ನಿಮಿತ್ತ ಧಾರವಾಡ, ವಿಜಾಪುರ ಬೆಳಗಾವಿ ಜಿಲ್ಲೆಗಳಲ್ಲಿ ೬೦೦೦ ರಾಟೆಗಳು ೬೦೦ ಹಾಸುಗಳು ೨೦೦ ಮಧ್ಯಮ ಬೆಸಿಗಳು ಹಂಜಿ ಹೊಸೆವ ಮಣೆಗಳು ಮುಂತಾದವುಗಳನ್ನು ಮಾಡಿಸಲು ಬಡಿಗರು ಬೇಕಾಗಿದ್ದಾರೆ. ಹಳೇಹುಬ್ಬಳ್ಳಿಯಲ್ಲಿ ಚರಕ ಸಂಘದ ಸರಂಜಾಮು ಕಾರ್ಯಾಲಯದಲ್ಲಿ ದಿನಗೂಲಿಯಂತೆ ಇಲ್ಲವೆ ಕೆಲಸದ ಮೇಲಿಂದ ಕೂಲಿಯಿಂದಾಗಲಿ ಕೆಲಸ ಮಾಡಬಹುದು. ಅಂಥ ಬಡಿಗರು ಕಾರ್ಯದರ್ಶಿ ಚರಕ ಸಂಘ ಹಳೆಹುಬ್ಬಳ್ಳಿ ಇವರಿಗೆ ಅರ್ಜಿ ಮಾಡಿಕೊಳ್ಳಬೇಕು.

ಬೇಂದ್ರೆ ಸತ್ಕಾರ ನಿಧಿಗೆ ಶ್ರೀಮಂತ ಸರದಾರ ವಂಟಮುರಿ ದೇಸಾಯರು ೧೦೦೦ ರೂಪಾಯಿ ಕಾಣಿಕೆ ಕೊಡವ ವಾಗ್ದಾನ ಮಾಡಿದ್ದಾರೆ. ಅಲ್ಲದೆ ಬೇರೆ ಕಡೆಯಿಂದ ಮತ್ತೆ ೩೦೦೦ ರೂಪಾಯಿ ನಿಧಿ ಸಂಗ್ರಹದ ವರದಿ ಬಂದಿದೆ. ನಿಧಿ ಸಮರ್ಪಣ ಸಮಾರಂಭ ಮೇ ೨೫ ಮತ್ತು ೨೬ಕ್ಕೆ ನಡೆಯಲಿದೆ. ಆ ಕಾಲಕ್ಕೆ ಹೆಸರಾಂತ ಸಾಹಿತ್ಯಕರನ್ನು ಉಪನ್ಯಾಸಕ್ಕೆ ಕರೆಯಿಸಲಾಗುವದು.

ಕರೂರಿಂದ ನದೀಹರಳಳ್ಳಿಗೆ ಏಳುಕೇರಿ ಜೋಳದ ಚೀಲಗಳನ್ನು ಸಾಗಿಸುತ್ತಿದ್ದ ಭೀಮಪ್ಪ ಬುಳ್ಳಪ್ಪನವರ, ಬಸಪ್ಪ ಬುಳ್ಳಪ್ಪನವರ, ಮಹಾದೇವಪ್ಪ ಬುಳ್ಳಪ್ಪನವರ, ಈ ಮೂವರನ್ನು ರಾಣೇಬೆನ್ನೂರಿನ ಶಿವಪ್ಪನೆಂಬ ಪೋಲೀಸನಾಯಕನು ಜೋಳ ಸಹಿತ ಹಿಡಿದು ರಾಣೇಬೆನ್ನೂರಿಗೆ ಬಂಧಿಸಿ ತಂದಿದ್ದಾರೆ. ಇವರಿಗೆ ಜೋಳ ಕೊಟ್ಟವರನ್ನೂ ಬಂಧಿಸಿದ್ದಾರೆ.

ತುಮ್ಮಿನಕಟ್ಟೆಯಲ್ಲಿ ಕಳವಿನಿಂದ ವ್ಯಾಪಾರ ಮಾಡುತ್ತಿರುವ ೮ ಜನರನ್ನು ಸಬ್ ಇನಸ್ಪೆಕ್ಟರರು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳ ವಿಚಾರಣೆ ನಡೆಯುತ್ತಲಿದೆ.

ಶ್ರೀ ಶಾಂತೇಶ ವಾಚನಾಲಯದ ಬೆಳ್ಳಿಹಬ್ಬ ಶ್ರೀ ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ೨೯ ನೇ ತಾರೀಕಿನ ದಿನ ಸಾಂಗವಾಯಿತು. ಪ್ರೊ. ಜಾಗೀರದಾರರು ಪ್ರಾಸ್ತಾವಿಕ ಭಾಷಣ ಮಾಡಿ ಶಾಂತೇಶ ವಾಚನಾಲಯದ ಇತಿಹಾಸ ಕಾರ್ಯ ವೈಶಿಷ್ಟ್ಯ ವಿವರಿಸಿದರು. ಮುದವೀಡು ಕೃಷ್ಣರಾಯರು ಶಾಂತಕವಿಗಳ ಕಾಲದ ಕನ್ನಡ ಇತಿಹಾಸ ವಿವರಿಸಿದರು. ಸಾಯಂಕಾಲ ಬೇರೆ ಬೇರೆ ಮಹನೀಯರ ಭಾಷಣಗಳಾದವು. ಮನರಂಜನ ಕಾರ್ಯಕ್ರಮವೂ ನಡೆಯಿತು.

ದಕ್ಷಿಣ ಭಾಗದ ಮುಲ್ಕೀ ಪರೀಕ್ಷೆ ಇದೇ ೮ನೇ ತಾರೀಕಿನಿಂದ ನಡೆಯುತ್ತಿದ್ದಿತಷ್ಟೆ. ಆದರೆ ಕೆಲವು ಅನಿವಾರ್ಯ ಕಾರಣಗಳ ಮೂಲಕ ಅದನ್ನು ಮುಂದೆ ಹಾಕಿದೆ ಪರೀಕ್ಷೆ ಎಂದು ನಡೆಯುವದೆಂಬುದನ್ನು ಹಿಂದಿನಿಂದ ಪ್ರಸಿದ್ಧಿಸಲಾಗುವದು.

ಬರಗಾಲದಿಂದ ಬಳಲುವ ಬಡವರಿಗೆ ಸಹಾಯ ಮಾಡುವ ಉದ್ದೇಶದಿಂದ ಬ್ಯಾಡಗಿಯಲ್ಲಿಯ ವ್ಯಾಪಾರಿ ಸಂಘ ಸಮಿತಿಯವರು ಬ್ಯಾಡಗಿ ಕರೇದಹಳ್ಳಿ ರಸ್ತೆ ಮುರುಸ್ತಿ ಕೆಲಸವನ್ನು ಶ್ರೀ ಕೆ. ಎಫ್. ಪಾಟೀಲ ಇವರ ಹಸ್ತದಿಂದ ಉದ್ಘಾಟಿಸಿ ಪ್ರಾರಂಭಿಸಿದ್ದಾರೆ. ಕಮೀಟಿಯವರ ಹಣದಿಂದ ಕೆಲಸ ಆರಂಭವಾಗಿದೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಇಂಥ ಸಹಾಯಕ ಕೆಲಸ ನಡೆವುದು ಅವಶ್ಯವಾಗಿದೆ.

ಹೊಸರಿತ್ತಿಯಲ್ಲಾದ ಗೋಳೀಬಾರಿನ ಖಟ್ಲೆಯಲ್ಲಿ ಸೆಶನ್ಸ ಜಜ್ಜರು ಹನುಮಣ್ಣ ಜಂಗ್ಲಿ, ಮುದಕಪ್ಪಾ ಹಡಪದ, ಚಾಂದೂ ಸಾಹೇಬ ಹಾಲಗಿ ಈ ಮೂವರಿಗೆ ಪ್ರತಿಯೊಬ್ಬರಿಗೆ ೨ ವರ್ಷ ಶಿಕ್ಷೆ ವಿಧಿಸಿದ್ದರಷ್ಟೆ ಆದರೆ ಈ ಖಟ್ಲೆಯಲ್ಲಿ ಗೋಣೆಪ್ಪ ಕಮತ ಇವರೂ ಆರೋಪಿಗಳಾಗಿದ್ದು ಅವರು ಕಾಣೆಯಾದ್ದರಿಂದ ವಿಚಾರಣೆ ಮುಂದರಿದಿತ್ತು. ಆದರೆ ಈಗ ಅವರ ಮೇಲಿನ ಖಟ್ಲೆಯನ್ನು ಹಿಂತೆಗೆದುಕೊಂಡದ್ದರಿಂದ ಅವರು ಬಂಧಮುಕ್ತರಾದರು. ತಮ್ಮ ಚಕ್ಕಡಿ ಹೂಡಿಕೊಂಡು ಹಪ್ತೆ ಲೂಟಿಗಾಗಿ ಅವರು ಹೋಗಿದ್ದರೆಂದು ಆರೋಪವಾಡಿತ್ತು.

ಮುಂಬಯಿ ಮದ್ರಾಸ ಶಾಸನ ಸಭೆಗಳಿಗೆ ಕಾಂಗ್ರೆಸ್ಸಿನ ಪರವಾಗಿ ಆರಿಸಿಬಂದ ಕರ್ನಾಟಕ ಪ್ರತಿನಿಧಿಗಳ ಅನೌಪಚಾರಿಕ ಸಭೆ ಹುಬ್ಬಳ್ಳಿಯಲ್ಲಿ ಪಾರ್ಲಮೆಂಟರಿ ಬೋರ್ಡಿನ ಕಚೇರಿಯಲ್ಲಿ ೨೮ಕ್ಕೆ ಸೇರಿತ್ತು. ಹಲವರನ್ನು ಬಿಟ್ಟು ಉಳಿದೆಲ್ಲ ಸದಸ್ಯರು ಬಂದಿದ್ದರು ಅಲ್ಲದೆ ಪಾರ್ಲಮೆಂಟರಿ ಬೋರ್ಡಿನ ಅಧ್ಯಕ್ಷ ಮಲ್ಯರು ಮತ್ತು ಕಾರ್ಯದರ್ಶಿ ದಿವಾಕರರು ಉಪಸ್ಥಿತರಾಗಿದ್ದರು. ಕರ್ನಾಟಕರ ಹಿತಸಂಬಂಧಗಳ ಸಂರಕ್ಷಣೆ ಕರ್ನಾಟಕದ ಸಮಸ್ಯೆಗಳ ಚರ್ಚೆಯಾಯಿತು. ಶಾಸನಸಭೆಗಳಲ್ಲಿಯ ಕೆಲಸದ ಬಗ್ಗೆ ಉಪಸಮಿತಿ ನೇಮಿಸಬೇಕೆಂದು ಕ. ಪ್ರಾಂ. ಕಾಂ. ಕಾರ್ಯಸಮಿತಿಗೆ ಬಿನ್ನವಿಸಲಾಯಿತು. ರಾತ್ರಿ ಅವರಿಗೆಲ್ಲ ಅಲ್ಪೋಪಹಾರ ಕೊಡಲಾಯಿತು. ಧಾರವಾಡ ಕಾರವಾರ ಜಿಲ್ಲಾ ಮೋಟರ ಆಪರೇಟರರು ಶಾಸನಸಭೆಗಳ ಕಾಂಗ್ರೆಸ ಸದಸ್ಯರಿಗೆಲ್ಲ ೨೮ ನೇ ತಾರೀಕು ರಾತ್ರಿ ೮॥ ಗಂಟೆಗೆ ಅಲ್ಪೋಪಹಾರವನ್ನು ಕೊಟ್ಟರು.

೨೮ ನೇ ತಾರೀಕು ರಾತ್ರಿ ದುರ್ಗದ ಬಯಲಿನಲ್ಲಿ ಶ್ರೀ ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಶಾಸನ ಸಭೆಗಳಿಗೆ ಆರಿಸಿಬಂದ ಸದಸ್ಯರನ್ನೆಲ್ಲ ಸನ್ಮಾನಿಸಲಾಯಿತು. ಕರ್ನಾಟಕ ಮತದಾರರು ಕಾಂಗ್ರೆಸ ಹುರಿಯಾಳುಗಳಿಗೆ ೧೦೦ಕ್ಕೆ ೯೨ ರಷ್ಟು ಮತಹಾಕಿ ಎಲ್ಲರನ್ನು ಆರಿಸಿತಂದುದಕ್ಕೆ ಶ್ರೀ ದಿವಾಕರರು ಅವರನ್ನೆಲ್ಲ ಅಭಿನಂದಿಸಿದರು. ಸದಸ್ಯರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟನಂತರ ಹಲವು ಸದಸ್ಯರು ಭಾಷಣ ಮಾಡಿ ಉತ್ತರ ಕೊಟ್ಟರು.

ಬೆಳಗಾವಿ

ಮುಂಬಯಿ ಜೀವದಯಾ ಸಂಘದ ಶ್ರೀ ಟಿ. ಎಸ್. ಕೌಜಲಗಿಯವರು ಅಥಣಿಗೆ ಹೋಗಿ ಶ್ರೀ ಆರ್ ಎ ಕುಲಕರ್ಣಿಯವರನ್ನು ಕಂಡು ತಾಲೂಕಿನಲ್ಲಿ ಬರಗಾಲದ ಮೂಲಕ ದನಗಳಿಗೆ ಉಂಟಾದ ಮೇವಿನ ಅಭಾವದ ಬಗ್ಗೆ ವಿಚಾರವಿನಿಮಯ ಮಾಡಿದರು. ಸತ್ತಿ ಹಾಗು ಶಿವನೂರ ಹತ್ತರ ದನಗಳ ಹಟ್ಟಿಗಳನ್ನು ಜೀವದಯಾ ಸಂಘದವರು ತೆರೆಯಬೇಕೆಂದು ಗೊತ್ತಾಯಿತು. ಅಲ್ಲದೆ ಅಥಣಿ ಹಾಗು ಹಸುಗೇರಿಯಲ್ಲಿ ಮೇವಿನ ಡಿಪೊ ತೆಗೆಯಬೇಕೆಂದೂ ಗೊತ್ತಾಯಿತು.

ಅಥಣಿಯಲ್ಲಿ ಶ್ರೀ ಆರ್. ಎ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅನೇಕ ಮಹನೀಯರು ಶಿಕ್ಷಕರಿಗೆ ಸಹಾನುಭೂತಿಯನ್ನು ತೋರಿಸಬೇಕೆಂದು ಅಭಿಪ್ರಾಯಪಟ್ಟರು. ಶಿಕ್ಷಕ ನಿಧಿ ಶೇಖರಿಸಬೇಕೆಂದು ಗೊತ್ತಾಗಿ ಶ್ರೀ ಮಂಗಸೂಳಿಯವರ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲ್ಪಟ್ಟಿತು.

ಬೆಳಗಾವಿ ಆಯುರ್ವೇದ ವಿದ್ಯಾಪೀಠ ಸಮಿತಿಗೆ ಕೊಟ್ಟ ಮಾನ್ಯತೆ ಎಪ್ರೀಲಕ್ಕೆ ಕೊನೆಗಂಡಿದ್ದು ಮತ್ತೆ ಅದನ್ನು ಮುಂದರಿಸುವದಕ್ಕಾಗಿ ಅರ್ಜಿ ಮಾಡಿಕೊಂಡದ್ದು ಅದರ ವಿಚಾರಣೆಗಾಗಿ ೯ ನೇ ತಾರೀಕು ವಿಚಾರಣಾ ಸಮಿತಿಯು ಬರಲಿದೆ.

ಎರಡುವಾರಗಳ ಹಿಂದ ಬಿಸಿಲು ಹೆಚ್ಚಿದ್ದ ಮೂಲಕ ಗುಡ್ಡದಬೆಂಕಿಯು ನೀರಿನಂತೆ ಹರಿದು ಬಂದು ಖಾನಾಪೂರ ತಾಲೂಕಿನ ರಾಜವಾಳ, ಸಾತಹಳ್ಳಿ ಮತ್ತು ಪಾಟಕಿ ಹಳ್ಳಿಗಳು ಪೂರ್ಣ ಭಸ್ಮವಾಗಿರುವವು. ರಾಜವಾಳದಲ್ಲಿ ಮೂರು ಕೂಸುಗಳೂ ದನಕರುಗಳೂ ಸುಟ್ಟು ಗುರುತಿಸಲು ಬರದಂತೆ ಆಗಿರುವವು. ಹಾನಿಯೂ ಬಹಳಾಗಿದೆ. ಸ್ಥಳೀಯ ಕಾಂಗ್ರೆಸ್ಸಿಗರು ಇವರಿಗೆ ಆಶ್ರಯ ಕೊಡಹತ್ತಿದ್ದಾರೆ.

ವಿಜಾಪುರ

ಆಗಸ್ಟ ಚಳವಳಿಯ ಕಾಲಕ್ಕೆ ಮಿಂಚನಾಳ ಸ್ಟೇಶನ ಸುಟ್ಟ ಆರೋಪಕ್ಕಾಗಿ ೪ ವರ್ಷ ಶಿಕ್ಷೆ ವಿಧಿಸಲಟ್ಟಿದ್ದ ಫಕೀರಪ್ಪ ಹೊಲೇರ ಇವರ ಶಿಕ್ಷೆ ಮುಗಿದು ಯರವಡೆಯಿಂದ ಬಂಧಮುಕ್ತರಾಗಿದ್ದಾರೆ.

ಹುನಗುಂದ ತಾಲೂಕಿನಲ್ಲಿ ೧೨೬ ಹಳ್ಳಿಗಳಲ್ಲಿ ಬರಗಾಲ ಸಾರಲಾಗಿದೆಯಷ್ಟೆ. ಆದರೂ ಈ ಹಳ್ಳಿಗಳಲ್ಲಿ, ಅಧಿಕಾರಿಗಳು ಧಾನ್ಯ ವಸೂಲಿಯನ್ನು ನಡೆಸಿದ್ದಾರೆಂದು ತಿಳಿಯುತ್ತದೆ. ಈ ಸಂಬಂಧದಲ್ಲಿ ಮಾಮುಲೇದಾರರನ್ನು ಭೆಟ್ಟಿಯಾಗಲು ಅವರು ಈ ತಾಲೂಕಿಗೆ ೧೬೦೦೦ ಚೀಲ ವಸೂಲ ಮಾಡಬೇಕೆಂದು ನಿರ್ಧರಿಸಲಾಗಿದ್ದು ಹೆಚ್ಚಿಗೆ ಬಂದವರಿಂದಲೆ ಕಾಳು ವಸೂಲ ಮಾಡಲಾಗುವದೆಂದು ಹೇಳಿದರು. ಆದರೆ ಕಾಳು ಬಂದವರಲ್ಲಿಯೂ ೨—೩ ತಿಂಗಳ ಸಂಗ್ರಹ ಮಾತ್ರ ಉಳಿದಿದ್ದ ವಸೂಲಿ ಕೆಲಸ ನಡೆಸಬಾರದೆಂದು ಹೇಳಲಾಯಿತು. ಬರಗಾಲ ಬಾಧಿತ ಹಳ್ಳಿಗಳಲ್ಲಿ ವಸೂಲ ಮಾಡುವದಿಲ್ಲೆಂದೂ ಅವರು ಹೇಳಿದರು.

ವಿಜಾಪೂರ ವಿಜಯ ಕಾಲೇಜಿನ ಪ್ರಿನ್ಸಿಪಾಲ ಭೂಷಣ ಇವರು ರಾಜೀನಾಮೆ ಕೊಟ್ಟಿರುವರೆಂದೂ ಅವರ ರಾಜೀನಾಮೆ ಸ್ವೀಕೃತವಾಗಿದೆಂದೂ ತಿಳಿಯುತ್ತದೆ.

ಬಳ್ಳಾರಿ

ಆಲಿಪುರ ಜೇಲಿನಿಂದ ೪೪ ಜನರು ಮತ್ತು ಸ್ಯಾನಿಟೋರಿಯಂ ಸೆರೆಮನೆಯಿಂದ ೬ ಜನ ಸೆರೆಯಾಳುಗಳು ಅನಿರ್ಬಂಧ ಬಿಡುಗಡೆ ಹೊಂದಿದ್ದಾರೆ. ಇವರು ಆಗಸ್ಟ ಚಳವಳಿಯಲ್ಲಿ ಬೇರೆ ಬೇರೆ ಅವಧಿಯ ಶಿಕ್ಷೆಗಳಿಗೆ ಗುರಿಯಾಗಿದ್ದರು. ಮದ್ರಾಸ ಪ್ರಾಂತದಲ್ಲಿ ಈಗ ೧೦೨ ಜನರನ್ನು ಬಿಡುಗಡೆ ಮಾಡುವದಾಗಿ ಸರಕಾರದ ಪ್ರಕಟಣೆಯೊಂದು ಹೊರಟಿತ್ತು. ಆಲಿಪುರದ ಸೆರೆಮನೆಯಲ್ಲಿ ಇನ್ನೂ ೨೨೦ ರಾಜಕೀಯ ಕೈದಿಗಳಿರುವರು. ಬಿಡುಗಡೆ ಹೊಂದಿದವರನ್ನು ಸ್ಥಳಿಕ ಕಾಂಗ್ರೆಸ ಸಮಿತಿಯು ಸ್ವಾಗತಿಸಿ ಅಲ್ಪೋಪಹಾರವಿತ್ತಿತು.

ಮದ್ರಾಸ ಪ್ರಾಂತದ ನಾಗರಿಕ ಪೂರೈಕೆ ಖಾತೆಯ ಕಮೀಶನರರಾದ ಶ್ರೀ ಡಿಕ್ಸನ್‌ರವರು ೨೮ಕ್ಕೆ ಬಳ್ಳಾರಿಗೆ ಬಂದರು. ಸಹಕಾರ ಸಂಘದ ಅಧ್ಯಕ್ಷ ಶ್ರೀ ಎಲ್. ಲಿಂಗಾರೆಡ್ಡಿಯವರೂ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಜಿ. ನಾಗಭೂಷಣರವರೂ ಅವರನ್ನು ಕಲೆಕ್ಟರ ಕಚೇರಿಯಲ್ಲಿ ಕಂಡು ಆಹಾರ ಪರಿಸ್ಥಿತಿಯನ್ನು ತಿಳಿಸಿದರು. ಹುಣಸಿಹಣ್ಣು ಮೆಣಸಿನಕಾಯಿ ಹತ್ತಿಕಾಳು ಜಿಲ್ಲೆಯಿಂದ ಹೊರಗೆ ಹೋಗಬಾರದು. ಹಳ್ಳಿಗಳಲ್ಲಿ ಆಹಾರ ಸಾಮಗ್ರಿಗಳು ಕಡಮೆ ಇದ್ದುದರಿಂದ ಧಾನ್ಯ ಸಂಗ್ರಹ ನಿಲ್ಲಿಸಬೇಕು ಮೊದಲಾದ ಬೇಡಿಕೆಗಳನ್ನು ಕೇಳಿಕೊಂಡರು. ಸಹಾನುಭೂತಿ ಪೂರ್ವಕ ವಿಚಾರ ಮಾಡಿದರು.

ಕಂಪ್ಲಿ ಬೋರ್ಡ ಹಾಯಸ್ಕೂಲ ಸಾಹಿತ್ಯ ಸಂಘದಲ್ಲಿ ಕಳೆದ ಗುರುವಾರ ಸಾಯಂಕಾಲ ಮುಖ್ಯೋಪಾಧ್ಯಾಯ ಶ್ರೀ ವೀರನಗೌಡರ ಅಧ್ಯಕ್ಷತೆಯಲ್ಲಿ ಟಿ ಬಿ ಕೇಶವರಾಯರು ಆಧುನಿಕ ಯುದ್ಧ ಮತ್ತು ವಿಜ್ಞಾನ ಪ್ರಗತಿ ಮೇಲೆ ಭಾಷಣ ಮಾಡಿದರು.

ಉತ್ತರ ಕನ್ನಡ

ಕಾರವಾರ ತಾಲೂಕ ರೈತ ಸಂಘದವರು ಕಯ್ಯೂರ ಹುತಾತ್ಮರದಿನಾಚರಣೆಯನ್ನು ಜರುಗಿಸಿದರು. ರೈತರು ತಮ್ಮ ಸಂಘಟನಾ ಶಕ್ತಿಯ ದುರುಪಯೋಗ ಮಾಡಬಾರದು. ಈಗ ಕಾಂಗ್ರೆಸ ಮಂತ್ರಿಮಂಡಳವು ಬೇಗನೆ ಅಧಿಕಾರಾರೂಢವಾದ ಕೂಡಲೆ ಟೆನನ್ಸಿ ಕಾಯದೆ ಈ ಜಿಲ್ಲೆಗೂ ಅನ್ವಯಿಸಲಾಗುವದು. ಆದುದರಿಂದ ರೈತರ ಕಷ್ಟನಷ್ಟಗಳು ಬೇಗನೆ ಸರಿಪಡಿಸಲಾಗುವವು ಎಂದು ಮುಂತಾಗಿ ಶ್ರೀ. ಮಾವಿನಕುರ್ವೆಯವರು ಉಪದೇಶ ಮಾಡಿ ಶಾಂತ ರೀತಿಯಿಂದ ಸಂಘಟನೆ ಮಾಡಿಕೊಳ್ಳಬೇಕೆಂದು ಹೇಳಿದರು.

ಮೋಟರ ಕಾರ ಆಕಾರದ ಟಾಯರ ಹಾಗ ಟ್ಯೂಬುಗಳ ಮೇಲಿನ ನಿಯಂತ್ರಣವನ್ನು ರದ್ದುಪಡಿಸಲಾಗಿದೆಂದೂ ಅವುಗಳನ್ನು ಕೊಳ್ಳಲು ಇನ್ನು ಅಪ್ಪಣೆ ಪಡೆಯುವ ಅವಶ್ಯವಿಲ್ಲೆಂದೂ ಕರ್ನಾಟಕ ಪ್ರಾದೇಶಿಕ ಸೀದಾಧಿಕಾರಿಗಳು ಪ್ರಸಿದ್ಧಿಸುತ್ತಾರೆ.

ಉತ್ತರಕನ್ನಡ ಜಿಲ್ಲಾ ಬೋರ್ಡಿನವರು ಡಿ ಎಲ್ ಬಿ ಕಚೇರಿ ಎದುರಿಗೆ ರಾಷ್ಟ್ರಧ್ವಜ ಏರಿಸಲು ಒಂದು ಧ್ವಜಸ್ತಂಭಕಟ್ಟಲು ದರಾವು ಮಾಡಿರುವರು.

ಕನ್ನಡಸಂಸ್ಥಾನ

ಚಿತ್ರದುರ್ಗ ಜಿಲ್ಲೆಯಲ್ಲಿನ ಕ್ಷಾಮಪೀಡಿತ ಪ್ರದೇಶಗಳಿಗೆ ಸೂಕ್ತ ಸಲಹೆ ಸೂಚನೆ ಕೊಡಲು ಶ್ರೀ ಮೋತಿ ದೊಡ್ಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಿಯಮಿಸಲ್ಪಟ್ಟಿತು. ಡಾ. ಕೆ. ಪ್ರಲ್ಹಾದರಾಯರು ಕಾರ್ಯದರ್ಶಿಗಳು ಶ್ರೀ ಕಾಸಲ ನಾರಾಯಣ ಶೆಟ್ಟರು ಜತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಬಾದಾಮಿ ನಂಜುಂಡಪ್ಪನವರು ಕೋಶಾಧ್ಯಕ್ಷರಾಗಿರುವರು.

ರಾಯಚೂರ ಜಿಲ್ಲೆಯಲ್ಲಿ ಧಾನ್ಯ ವಸೂಲಿಯು ಜೋರಿನಿಂದ ನಡೆದಿದೆ. ಈ ಬಗ್ಗೆ ಪ್ರಜಾಹಿತ ಸಂಘದವರು ತಾಲೂಕದಾರರನ್ನು ಭೆಟ್ಟಿಯಾಗಿ ದೂರುಗಳನ್ನು ಹೇಳಿಕೊಂಡರು. ತಾಲೂಕದಾರರು ಶಾಂತರೀತಿಯಿಂದ ಕೇಳಿಕೊಂಡು ಪ್ರಜಾಜನರಿಗೆ ಕೊಡಲಾಗುವ ಪರಿಹಾರ ಯೋಜನೆಗಳನ್ನು ತಿಳಿಸಿದರು.

ಕಟಕೋಳದಲ್ಲಿ ಕೊಲ್ಹಾಪುರ ದರಬಾರದವರು ತಳೆದ ಧೋರಣದ ನಿಷೇಧಾರ್ಥವಾಗಿ ಕೊಲ್ಹಾಪುರ ಪ್ರ ಪ. ಕಾರ್ಯದರ್ಶಿ ಶ್ರೀ ವಿರಕ್ತಮಠರು ಉಪವಾಸ ಆರಂಭಿಸಿರುವರಷ್ಟೆ. ಅವರಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಮತ್ತು ದರಬಾರದ ಕೃತಿ ನಿಷೇಧಿಸುವದಕ್ಕಾಗಿ ೫ ದಿನಗಳ ವರೆಗೆ ಹರತಾಳ ಆಚರಿಸಿದರು. ವಿರಕ್ತಮಠರು ಈಗ ಬಹಳ ಅಶಕ್ತರಾಗಿರುವರು.

ಹೈದ್ರಾಬಾದ ಕರ್ನಾಟಕ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆ ಚಟ್ನಾಳ ವೀರಣ್ಣನವರ ಮನೆಯಲ್ಲಿ ಸೇರಿತ್ತು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕಕ್ಕೇರಿ ಹಣಮಂತರಾಯರು ಅಧ್ಯಕ್ಷರಾಗಿದ್ದರು. ಪರಿಷತ್ತಿನ ಅಧಿವೇಶನವನ್ನು ಯಾದಗಿರಿಯಲ್ಲಿ ೨೫-೨೬-೨೭ ದಿನಗಳಲ್ಲಿ ಕೂಡಿಸಬೇಕೆಂದು ಗೊತ್ತಾಯಿತು.

ಮದುವೆಯಿದ್ದವರ ಮನೆಗಾಗಿ ೧೦೦ ಜನರಿಗೆ ಸಾಲುವಷ್ಟು ಉಪನಯನವಿದ್ದವರ ಮನೆಗಾಗಿ ೫೦ ಜನರಿಗೆ ಸಾಲುವಷ್ಟು ಸೀದಾ ಕೊಡಲಾಗುವದೆಂದು ಮಿರಜ ಸರಕಾರದವರು ನಿರ್ಧರಿಸಿದ್ದಾರೆ.

ಶಿವಮೊಗ್ಗೆ ನಗರ ಮತ್ತು ಸಮೀಪದ ಭಾಗವು ಸಮೃದ್ಧ ದೇಶವಾಗಿದ್ದರೂ ಆಹಾರ ಪರಿಸ್ಥಿತಿ ದಿನ ದಿನಕ್ಕೆ ಭೀಕರವಾಗುತ್ತ ನಡೆದಿದೆ. ೧೦೦-೧೫೦ ಜನರು ಡೆಪ್ಯುಟಿ ಕಮಿಶನರರ ಬಂಗಲೆಗೆ ಹೋಗಿ ಕಾಳಿನ ಅಭಾವವನ್ನು ತಿಳಿಸಿದರು ಅವರು ಶಕ್ಯವಿದ್ದುದನ್ನು ಮಾಡುವದಾಗಿ ತಿಳಿಸಿದರು.

ಅಜ್ಜಂಪುರದಿಂದ ೩ ಮೈಲು ದೂರದಲ್ಲಿರುವ ಬಗ್ಗವಳ್ಳಿಯಲ್ಲಿ ಅಕಸ್ಮಾತ್ ಬೆಂಕಿ ತಗಲಿ ಒಂದು ಹಂಚಿನ ಮನೆಯೂ ೮ ಹುಲ್ಲಿನ ಮನೆಗಳೂ ಸುಟ್ಟವು. ಆ ಮನೆಗಳಲ್ಲಿದ್ದ ೧೫-೨೦ ಚೀಲ ಆಹಾರ ಧಾನ್ಯ ಸುಟ್ಟವು. ಪ್ರಾಣಾಪಾಯವೇನೂ ಆಗಿಲ್ಲ. ಸಿಂದಿ ಅಂಗಡಿಗೂ ಬೆಂಕಿಹತ್ತಿ ಸುಟ್ಟಿತು. ಮೇವಿನ ಬಣವಿಗಳಿಗೂ ಬೆಂಕಿ ಹತ್ತಿ ಸುಟ್ಟುಹೋದವು

ಶ್ರೀ. ವಿ. ಕೃ. ಗೋಕಾಕರವರು ಬಡೋದೆ ಸಂಸ್ಥಾನದಲ್ಲಿ ಹೊಸದಾಗಿ ಪ್ರಾರಂಭವಾಗುವ ವಿಸನಗರ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿದ್ದರಿಂದ ಪ್ರೊ ಮುಗುಳಿ, ಕುಲಕರ್ಣಿ ಮೊದಲಾದವರು ಮಿರಜ ಸ್ಟೇಶನದಲ್ಲಿ ಸನ್ಮಾನಿಸಿದರು.

ಶ್ರೀ ಎಚ್. ಹನುಮಂತಯ್ಯನವರು ಖಟ್ಲೆಯಲ್ಲಿ ಸೆಶನ್ಸ ಜಜ್ಜರು ಅಪರಾಧವನ್ನು ಸ್ಥಿರಪಡಿಸಿ ಶಿಕ್ಷೆಯನ್ನು ೬ ತಿಂಗಳಿಗೆ ಇಳಿಸಿದರು. ನಾಗರ ಪ್ರಥಮ ಮ್ಯಾಜಿಸ್ಟ್ರೇಟರು ಅವರಿಗೆ ರಾಜದ್ರೋಹಕ್ಕಾಗಿ ೧ ವರ್ಷ ಶಿಕ್ಷೆ ವಿಧಿಸಿದ್ದರು.

ಔಂಧ ಸಂಸ್ಥಾನದಲ್ಲಿ ಕಳೆದ ೬ ವರ್ಷಗಳಿಂದ ಜಾರಿಯಲ್ಲಿದ್ದ ರಾಜ್ಯಘಟನೆಯ ಬಗ್ಗೆ ವಿಚಾರ ಮಾಡಿ ಅವಶ್ಯಕತಿದ್ದುಪಡಿ ಸೂಚಿಸಲು ಔಂಧ ದರಬಾರದ ಎನ್. ಜಿ. ಚಾಫೇಕರರ ಅಧ್ಯಕ್ಷತೆಯಲ್ಲಿ ಸಮಿತಿ ನಿಯಮಿಸಲ್ಪಟ್ಟಿತು. ಬಿ. ಎಂ. ಗುಪ್ತೆ, ರಾವಸಾಹೇಬ ಪಟವರ್ಧನ ಹಾಗು ಪಂಡಿತ ಸಾತವಳೇಕರ ಇವರು ಸದಸ್ಯರಾಗಿರುವರು.

ಹಿಂದುಸ್ಥಾನ

ಮುಂಬಯಿ

ಮುಂಬಯಿ ಪ್ರಾಂತಿಕ ಸರಕಾರ ಮಾನ್ಯ ವೈದ್ಯರ ಪರಿಷತ್ತು ಇದೇ ೧೫ ನೇ ತಾರೀಕು ಪುಣೆಯಲ್ಲಿ ಸೇರುವದು. ಡಾ. ಬಿ ಸಿ ಲಾಗು ಇವರು ಅಧ್ಯಕ್ಷತೆ ವಹಿಸುವರು. ಶ್ರೀ ಖೇರರು. ಉದ್ಘಾಟನ ಮಾಡುವರು.

ಮುಂಬಯಿಗೆ ಬಂದಿರುವ ಉಡುಪಿ ಯಕ್ಷಗಾನ ಕಲಾಮಂಡಲದ ಪ್ರಯೋಗಗಳು ಯಶಸ್ವಿಯಾಗಿ ಜರುಗಿ ಜನಾದರಕ್ಕೆ ಪಾತ್ರವಾಗಿವೆ. ಶ್ರೀಕೃಷ್ಣ ದಾಮುಖಾರ ಮೊದಲಾದ ಪ್ರಯೋಗಗಳು ಒಳ್ಳೆ ಯಶಸ್ವಿಯಾಗಿದ್ದವು.

ಶ್ರೀ ಮಹಮ್ಮದಭಾಯಿ ರಾವಜಿಯವರು ಮುಂಬಯಿ ಕಾರ್ಪೋರೇಶನದ ಹೊಸಮೇಯರರಾಗಿ ಆರಿಸಲ್ಪಟ್ಟರು. ಎಂ. ಆರ್ ರಾವಜಿಯವರಿಗೆ ೩೮ ಮತಗಳು ಹಾಗು ಎ ಎಚ್ ಮಿರ್ಜಾ ಮತ್ತು ಕಿಲ್ಲೇದಾರರಿಗೆ ಕ್ರಮವಾಗಿ ೧೬ ಮತ್ತು ೮ ಮತ ಬಿದ್ದವು. ರಾವಜಿಯವರಿಗೆ ಕಾಂಗ್ರೆಸ್ಸಿನ ಬೆಂಬಲ ಮತ್ತು ಉಳಿದವರಿಗೆ ಲೀಗಿನ ಬೆಂಬಲವಿದ್ದಿತು.

ವಾಶಿಂಗಟನ್ ಆಹಾರ ಸಮಿತಿಯು ಹಿಂದುಸ್ಥಾನಕ್ಕೆ ಕೊಡಲು ಗೊತ್ತುಮಾಡಿದ ಆಹಾರವಸ್ತುಗಳನ್ನು ಇದೇ ಎಪ್ರಿಲ ಒಂದನೇ ತಾರೀಕಿನಿಂದ ಹಿಂದುಸ್ಥಾನಕ್ಕೆ ನಿರ್ಯಾತ ಮಾಡಲಾಗುವದು ಗೋದಿ ಗೋವಿನಜೋಳಗಳನ್ನು ಕಾನಡಾ ಆಸ್ಟ್ರೇಲಿಯ ಮತ್ತು ಅಮೇರಿಕೆಗಳಿಂದಲೂ ಅಕ್ಕಿಯನ್ನು ಥಾಯಿಲಂಡದಿಂದಲೂ ಕಳಿಸಲಾಗುವದು. ಈ ವರುಷದ ಮೊದಲಿನ ಆರು ತಿಂಗಳಗಳಿಗೆ ೧೪೫೦೦೦ ಟನ್ ಅಕ್ಕಿ ಮತ್ತು ೧೪ ಲಕ್ಷ ಟನ್ ಗೋದಿ ಮತ್ತು ಗೋವಿನಜೋಳ ಕೊಡಲು ವಾಶಿಂಗಟನ ಆಹಾರ ಸಮಿತಿ ಒಪ್ಪಿದೆ.

ಸಾತಾರಾ ಜಿಲ್ಹೆಯಲ್ಲಿ ಫೆಬ್ರುಅರಿ ಹಾಗು ಮಾರ್ಚ ತಿಂಗಳಲ್ಲಿ ಪುನಃ ಗೊಂದಲ ಹಾಕಿದ ಸುದ್ದಿ ಬಂದಿದೆ. ಫೆಬ್ರುಅರಿಯಲ್ಲಿ ಅವರು ಸಾಳ್ವೆ ಹಾಗೂ ಬಿಚಾಡದಲ್ಲಿಯ ಬಂದೂಕುಗಳನ್ನು ಅಪಹರಿಸಿಕೊಂಡು ಹೋಗಿರುವರು. ಮಾರ್ಚದಲ್ಲಿ ತಂಡುಲ ಮಾಡಿ ಕುಲಕರ್ಣಿಯ ಹಪ್ತೆ ವಸೂಲ ಮಾಡಿಕೊಂಡು ತಿರುಗಿ ಬರುತ್ತಿರುವಾಗ ಮೂವರು ಅವನ ಮೇಲೆ ದಾಳಿ ಮಾಡಿ ೮೭೫ ರೂ. ತೆಗೆದುಕೊಂಡು ಹೋಗಿರುವರು. ಕಾಲಗಾವದಲ್ಲಿ ಒಬ್ಬರ ಮನೆಹೊಕ್ಕು ಬಂದೂಕು ಅಪಹರಿಸಿದ್ದಾರೆ. ಸಾತಾರೆಯ ಹತ್ತರ ಒಬ್ಬ ಗವಳಿಗನ ಕಾಲು ಕೈಕಟ್ಟಿ ಅವನು ತೆಗೆದುಕೊಂಡು ಹೋಗುತಿದ್ದ ೬೫ ರೂ. ಹಾಲನ್ನು ಹಳ್ಳಿಗರಿಗೆ ಹಂಚಿರುವರೆಂದು ಮುಂತಾಗಿ ಪ್ರಕಟನೆ ಹೊರಟಿದೆ.

ಮುಂಬಯಿ ವಿಶ್ವವಿದ್ಯಾಲಯದವರು ಸುರತದಲ್ಲಿ ವ್ಯಾಪಾರಿ ಕಾಲೇಜ ಹೊರಡಿಸಲು ಅಪ್ಪಣೆ ಕೊಡುತ್ತಿದ್ದಾರೆ. ಸರ್ ಕೀಕಾಭಾಯಿ ಪ್ರೇಮಚಂದರು ೧ ಲಕ್ಷ ರೂ. ಕೊಟ್ಟದ್ದು ಜೂನದಿಂದ ಕಾಲೇಜ ಪ್ರಾರಂಭವಾಗುವದು.

ಖಡಕೀ ಮದ್ದಿನ ಕಾರಖಾನೆಯಲ್ಲಿ ಕೋ-ಅಪರೇಟಿವ್ಹ ಸ್ಟೋರ್ಸದ ಮತ್ತು ಆರ್ಥಿಕ ಸಮಿತಿ ನೇಮಿಸಲಾಗಿತ್ತಷ್ಟೆ. ಅದರ ವರದಿಯಿದೀಗ ಪ್ರಸಿದ್ಧವಾಗಿದ್ದು ಅದರಿಂದ ೯೮ ಸಾವಿರ ರೂ. ಹಾನಿಯಾಗಿದೆಂದು ತಿಳಿಯುತ್ತದೆ. ಇದರಿಂದ ಪಾಲುಗಾರರಲ್ಲಿ ಒಳ್ಳೆ ಗಡಿಬಿಡಿಯುಂಟಾಗಿದೆ. ಮುಂಬಯಿ ಸರಕಾರದ ಕೇಂದ್ರ ಮುದ್ರಣಾಲಯದಲ್ಲಿಯ ೮೦೦ ಜನ ಕೆಲಸಗಾರರು ಸಂಪು ಹೂಡಿದ್ದರಷ್ಟೆ ಅವರು ೧ ನೇ ತಾರೀಕಿನಿಂದ ಕೆಲಸಕ್ಕೆ ಪುನಃ ಹೋಗಿರುವರು. ಸರಕಾರದವರು ಅವರ ಕೇಂದ್ರ ಬೇಡಿಕೆಗಳನ್ನು ಮನ್ನಿಸಿದ್ದರಿಂದ ಮತ್ತೆ ಕೆಲಸ ಪ್ರಾರಂಭಿಸಿರುವರು.

ಪುಣೆ ಜಿಲ್ಲೆಯ ೨೪೯ ಹಳ್ಳಿಗಳಲ್ಲಿ ಬರಗಾಲ ಸಾರಿದ್ದು ಈ ವರೆಗೆ ೨೯೧೯ ಜನರಿಗೆ ಹಣದ ಮತ್ತು ಧಾನ್ಯದ ಸಹಾಯ ಮಾಡಲಾಗಿದೆ. ಜಿಲ್ಹೆಯಲ್ಲಿ ಇನ್ನೂ ಬರಗಾಲ ಕೆಲಸ ಪ್ರಾರಂಭಿಸಿಲ್ಲ. ಒಕ್ಕಲಿಗರು ಸರಕಾರದ ಕೇಂದ್ರಗಳಿಗೆ ದನಗಳನ್ನು ಕಳಿಸಲು ಸಿದ್ಧರಿಲ್ಲೆಂದು ತಿಳಿಯುತ್ತದೆ. ೫೪ ಹಳ್ಳಿಗಳಿಗೆ ಮೋಟರ ಲಾರಿಗಳಲ್ಲಿ ನೀರು ಪೂರೈಸುತಿರುವರು.

ಮುಂಬಯಿ ಸರಕಾರದವರು ಎಪ್ರಿಲ ೧ ರಿಂದ ಪೋಲೀಸ ಸಬ್ ಇನಸ್ಪೆಕ್ಟರರ ಮತ್ತು ಇನಸ್ಪೆಕ್ಟರರ ಸಂಬಳವನ್ನು ಹೆಚ್ಚಿಸಲು ನಿರ್ಧರಿಸಿದ್ದಾರೆ ೧೨೫ ರೂಪಾಯಿ ಪ್ರಾರಂಭದ ಸಂಬಳ ಪಡೆಯುತಿದ್ದ ಸಬ್ ಇನಸ್ಪೆಕ್ಟರರಿಗೆ ಇನ್ನು ಮುಂದೆ ೧೭೫ ರೂಪಾಯಿ ಸಂಬಳ ಸಿಕ್ಕುವದು. ಇನಸ್ಪೆಕ್ಟರರಿಗೆ ೩೦೦ ರೂಪಾಯಿ ಸ್ಥಳದಲ್ಲಿ ೩೫೦ ರೂಪಾಯಿ ದೊರೆಯುವದು. ಯುರೋಪಿಯನ್ ಸಬ್ ಇನಸ್ಪೆಕ್ಟರರಿಗೆ ೧೭೫ ರಿಂದ ೨೫೦ ರೂಪಾಯಿ ಸಂಬಳ ಕೊಡಲಾಗುವದು.

ಕೈದಿಗಳ ದಿನದ ಭತ್ತೆಯನ್ನು ೧೦ ಆಣೆಯಿಂದ ೧ ರೂಪಾಯಿಗೇರಿಸಲಾಗಿದೆ. ದಿನಾಲು ೧ ರೂಪಾಯಿ ಎಂಟಾಣೆ ಪಡೆಯುತ್ತಿದ್ದ ಯುರೋಪಿಯನ್ ಕೈದಿಗಳು ೨॥ ರೂಪಾಯಿ ಪಡೆವರು.

ಇನ್ನು ಮುಂದೆ ದಕ್ಷಿಣ ಆಫ್ರಿಕದ ಬಿಳಿಜನರು ಯಾರೂ ಮುಂಬಯಿಯ ವೆಲಿಂಗ್ಡನ್ ಸ್ಪೋರ್ಟ್ಸ ಕ್ಲಬ್ಬಿನ ಸದಸ್ಯರು ಅಥವಾ ಅತಿಥಿಗಳಾಗದಂತೆ ನಿರ್ಬಂಧಿಸಲಾಗಿದೆ. ಈ ಕ್ಲಬ್ಬಿನ ಸದಸ್ಯರ ಸಾಧಾರಣ ಸಭೆಯಲ್ಲಿ ಕಾಂಜಿ ದ್ವಾರಕಾದಾಸರ ಮೇಲಿನ ಗೊತ್ತುವಳಿಯನ್ನು ಮುಂಡಿಸಿದರು ಮತ್ತು ಅದು ಸ್ವೀಕೃತವಾಯಿತು.

ಹೊಸದಿಲ್ಲಿ

ಅಹರಾರ ಹಾಗು ಜಮಾಯತ ಉಲ್‌ಉಲೇಮಾ ಧುರೀಣರು ದಿಲ್ಲಿಯಲ್ಲಿ ಸಭೆಸೇರಿ ಲೀಗೇತರ ಸಮ್ಮುಖ ರಚಿಸುವ ನಿರ್ಧಾರ ಮಾಡಿರುವರು.

ನಾನು ಹಿಂದೀಯನೆಂದು ತಿಳಿದುಕೊಂಡಿಲ್ಲ. ಹಿಂದುಸ್ಥಾನದೊಳಗೆ ಎರಡು ಜನಾಂಗಗಳಿವೆ. ನಮಗೆ ಪ್ರತ್ಯೇಕ ರಾಷ್ಟ್ರಬೇಕು ಅವರೊಂದಿಗಿರುವದು ನಮಗೆ ಬೇಡ ನಾವು ಐಕ್ಯದಿಂದಿರಲ ಬ್ರಿಟನ ಯತ್ನಿಸುವದೇಕೆ. ಐಕ್ಯದಿಂದಿರಲು ಬಲಾತ್ಕರಿಸಿದರೆ ಬ್ರಿಟಿಶ್ ಸೈನಿಕರನ್ನು ಭದ್ರಪಡಿಸಿಡಬೇಕಾಗುವದು. ಎಂದು ಮುಂತಾಗಿ ಬ್ಯಾ. ಜಿನ್ನಾರವರು ನ್ಯೂಜ ಕ್ರಾನಿಕಲ್ ಪತ್ರಿಕೆಯ ಸುದ್ದಿಗಾರನಿಗೆ ಹೇಳಿದ್ದು ಆ ಪತ್ರಿಕೆಯಲ್ಲಿ ಪ್ರಸಿದ್ದವಾಗಿದೆ.

ಆ. ಭಾ. ರೇಲ್ವೆ ಮಹಾಮಂಡಳದವರ ಸಂಕಷ್ಟಗಳನ್ನು ಈಗಿನ ಕೂಲಿಕಾರ ಖಾತೆಯವರೂ ಮಾಡುವಂತೆ ತೋರುವದಿಲ್ಲ. ಕೂಲಿಕಾರ ಖಾತೆಯ ಉತ್ತರವು ಇನ್ನೊಂದು ವಾರದಲ್ಲಿ ಹೊರಬೀಳುವದು. ಇದೇ ಮೇ ೧೧ ನೇ ತಾರೀಖಿಗೆ ಮುಂಬಯಿಯಲ್ಲಿ ರೇಲ್ವೆ ಅಧಿವೇಶನ ನಡೆಯುವದು. ಆಕಾಲಕ್ಕೆ ಸಂಪಿನ ನೋಟೀಸನ್ನು ಕೊಡಬಹುದು. ಈ ಬಗ್ಗೆ ಈಗಾಗಲೇ ಗೋಪ್ಯರೀತಿಯಿಂದ ಮಾತು ತೆಗೆದುಕೊಳ್ಳಹತ್ತಿರುವರಂತೆ.

ಬ್ರಿಟಿಶ್ ಮಂತ್ರಿತ್ರಯರನ್ನು ಲೀಗದ ಪರವಾಗಿ ಭೆಟ್ಟಿಯಾಗಲು ಬ್ಯಾ. ಜಿನ್ನಾರವರಿಗೆ ಸರ್ವಾಧಿಕಾರ ಕೊಡಲಾಗಿದೆ.

ದಿಲ್ಲಿಯಲ್ಲಿ ಸಂಪು ಹೂಡಿದ ಗವಳಿಗರು ಶಾಸನಸಭೆಯ ಮುಂದೆ ನಿರೋಧನ ಮಾಡಿ ಹಾಲಿನ ದರ ಏರಿಸಬೇಕೆಂದು ಅಭಿಪ್ರಾಯ ವ್ಯಕ್ತಗೊಳಿಸಿದರು.

ಕಮ್ಯುನಿಸ್ಟ ಧುರೀಣರಾದ ರಜನಿ ಪಾಮದತ್ತರು ವಿಮಾನದಿಂದ ದಿಲ್ಲಿಗೆ ಬಂದಿರುವರು. ಪಾಮದತ್ತರು ಕಳೆದ ೩೦ ವರ್ಷಗಳಿಂದ ಹಿಂದುಸ್ಥಾನಕ್ಕೆ ಬರಬೇಕೆಂದು ಇಚ್ಛಿಸಿದರೂ ಪಾಸಪೋರ್ಟ ಸಿಕ್ಕಿರಲಿಲ್ಲ. ಅವರು ಬಂದ ಕೂಡಲೆ ಮಹಾತ್ಮಾ ಗಾಂಧಿ ಮತ್ತು ಜವಾಹರರಿಗೆ ತಮ್ಮ ಆಗಮನದ ಸುದ್ದಿ ತಿಳಿಸಿರುವರು.

ಇತ್ತೀಚೆಗೆ ನಡೆದ ಹಿಂದೀ ನಾವಿಕರ ದಂಗೆಯ ಸಂಬಂಧದಲ್ಲಿ ವಿಚಾರಣೆ ನಡೆಸಲು ವಿಚಾರಣಾ ಸಮಿತಿಯನ್ನು ನೇಮಿಸಲಾಗಿದೆ. ಪಾಟಣಾ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶ ಸರ್ ಸಯ್ಯದ ಫಜಲುಲ್ ಅಲ್ಲಿಯವರು ಅದರ ಅಧ್ಯಕ್ಷರು ಜಸ್ಟಿಸ್ ಕೆ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ (ಕೋಚೀನ) ಜ. ಮಹಾಜನ (ಲಾಹೋರ) ಹಾಗು ಇನ್ನಿತರ ಸೇನಾಧಿಕಾರಿಗಳ ಈ ಸಮಿತಿಯಲ್ಲಿರುವರು.

ಪಂಡಿತ ಜವಾಹರಲಾಲ ನೆಹರು ಇವರು ೨ನೇ ತಾರೀಕು ದಿಲ್ಲಿಗೆ ಬಂದಕೂಡಲೆ ಸರ್ ತೇಜಬಹಾದ್ದೂರ ಸಪ್ರು ಇವರನ್ನು ಭೆಟ್ಟಿಯಾಗಿ ವಿಚಾರ ವಿನಿಮಯ ಮಾಡಿದರು. ಅನಂತರ ಅವರು ಸರದಾರ ವಲ್ಲಭಬಾಯಿಯವರೊಡನೆ ಮಾತುಕತೆಯಾಡಿರದು.

ಮದ್ರಾಸ

ಕಡಪಾ ಜಿಲ್ಹೆಯಲ್ಲಿ ಜುಲೈ ೧ ರಿಂದ ಮದ್ಯ ಪ್ರತಿಬಂಧವನ್ನು ಪುನಃ ಜಾರಿಯಲ್ಲಿ ತರಬೇಕೆಂದು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಹಾ ಪರಿಷತ್ತಿನಲ್ಲಿ ನಿರ್ಣಯ ಮಾಡಿ ಸರಕಾರಕ್ಕೆ ಕಳಿಸಲಾಗಿರುವದು.

ತ್ರಿಚನಾಪಳ್ಳಿ ಜಿಲ್ಹೆಯ ಒಮಾಂಡಿ ಹಳ್ಳಿಯ ಜನರು ತಮ್ಮಲ್ಲಿ ಹರಿಗೆ ಮಂದಿರ ಹಾಗು ವೈದ್ಯಕೀಯ ಕೇಂದ್ರ ತೆರೆಯಲು ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಸಂಸ್ಥೆಗೆ ಒಂದು ಲಕ್ಷ ರೂಪಾಯಿ ಕೂಡಿಸಿ ಕೊಟ್ಟಿದ್ದಾರೆ.

ಮದ್ರಾಸ ಇಲಾಖೆಯಲ್ಲಿ ೧೨ ಸಾವಿರ ಸ್ಥಳಗಳು ಯುದ್ಧ ನೋಕರಿಗಳಿಂದ ವಿಸರ್ಜಿತರಾದವರಿಗೆ ಕಾದಿಡಲ್ಪಟ್ಟವೆ.

ತ್ರಿಚನಾಪಳ್ಳಿಯ ಪೋಲಿಯೂರ ಬಜಾರ ಭಾಗದಲ್ಲಿ ಸಿಂಗಾರವೇಲು ಎಂಬ ನೇಕಾರನೊಬ್ಬನ ಮೇಲೆ ಕೆಲವರು ಏರಿ ಹೋಗಿ ಅವನನ್ನು ಗಾಯಗೊಳಿಸಿರುವರು. ಅವರ ಮನೆಯ ಮೇಲಿನ ಕಮ್ಯುನಿಸ್ಟ ಧ್ವಜ ತೆಗೆದದ್ದೇ ಹೊಡೆದಾಟಕ್ಕೆ ಕಾರಣವಾಯಿತು. ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರು ಸಭಾ ಪ್ರತಿಬಂಧಕ ಹುಕುಮನ್ನು ಹೊರಡಿಸಿರುವರು.

ಸಂಯುಕ್ತಪ್ರಾಂತ--ಬಿಹಾರ

೧೯೪೨ ನೇ ಅಗಸ್ಟದಿಂದ ಕಾಣೆಯಾಗಿದ್ದ ಏ. ಆಯ. ಸಿ. ಸಿ. ವಿದೇಶ ಖಾತೆಯ ಅಧಿಕಾರಿಗಳಾದ ಡಾ. ಬಿ. ಬಿ. ಕೇಸಕರರು ಲಖನೌಕ್ಕೆ ಬರಲಿರುವರೆಂದೂ ಅವರ ಮೇಲಿನ ವಾರಂಟನ್ನು ಪ್ರಾಂತಿಕ ಸರಕಾರದವರು ರದ್ದುಪಡಿಸಿರುವರೆಂದೂ ತಿಳಿಯುತ್ತದೆ.

ಸಂಯುಕ್ತಪ್ರಾಂತ ಕಾಂಗ್ರೆಸ ಸಮಿತಿಯ ಸಭೆ ಶ್ರೀ ಪಾಲೀವಾಲರ ಅಧ್ಯಕ್ಷತೆಯಲ್ಲಿ ಸೇರಿ ಮುಸಲ್ಮಾನ ಜನತಾ ಸಂಬಂಧವನ್ನು ಪ್ರಸ್ಥಾಪಿಸುವದಕ್ಕಾಗಿ ಒಂದು ಸಮಿತಿ ನೇಮಿಸಲಾಯಿತು. ಶ್ರೀ ರಫಿ ಅಹಮ್ಮದ ಕಿಡ್ವಾಯಿ ಇವರು ಈ ಸಮಿತಿಯ ಅಧ್ಯಕ್ಷರಿರುವರು.

ಸಂಯುಕ್ತಪ್ರಾಂತದ ಬಲರಾಮಪುರದಲ್ಲಿ ಟ್ರೇಡ ಯೂನಿಯನ್ ಸ್ಥಳದ ಚುನಾವಣೆಯ ಕಾಲಕ್ಕೆ ಕಾಂಗ್ರೆಸ ಹಾಗು ಕಮ್ಯುನಿಸ್ಟ ಅನುಯಾಯಿಗಳಲ್ಲಿ ಹೊಡೆದಾಟ ಸಂಭವಿಸಿ ೧೪ ಜನರಿಗೆ ಗಾಯಗಳಾಗಿವೆ.

ಓಡಿಸಾ

ಲಾರ್ಡ ಸಿಂಹರ ನಂತರ ಗವರ್ನರರ ಹುದ್ದೆಗೆ ನೇಮಿಸಲ್ಪಟ್ಟ ಹಿಂದೀಯರಾದ ಸರ್ ಚಂದುಲಾಲ ತ್ರಿವೇದಿಯವರು ೧ ನೇ ತಾರೀಖಿನಿಂದ ಓಡಿಸಾದ ಗವರ್ನರರ ಅಧಿಕಾರವನ್ನು ವಹಿಸಿಕೊಂಡರು. ಚಂದೂಲಾಲರು ಜನತೆಯ ಆಶೋತ್ತರಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ನಿವೃತ್ತ ಗವರ್ನರ ಸರ್ ಹಾಥಾರ್ನರು ಸಪತ್ನೀಕರಾಗಿ ಮುಂಬಯಿ ಮಾರ್ಗವಾಗಿ ಇಂಗ್ಲಂಡಿಗೆ ತೆರಳಿದರು.

ಬಂಗಾಲ--ಆಸಾಮ

ಮಾರ್ಚ ತಿಂಗಳಲ್ಲಿ ಬಂಗಾಲ ಸರಕಾರ ಒಟ್ಟು ೮೮ ಸೆಕ್ಯುರಿಟಿ ಕೈದಿಗಳನ್ನು ಬಿಡುಗಡೆ ಮಾಡಿದೆ. ಈ ವರುಷದ ಆರಂಭದಿಂದ ಇಷ್ಟರ ವರೆಗೆ ಒಟ್ಟು ೨೮೩ ಸೆಕ್ಯುರಿಟಿ ಕೈದಿಗಳನ್ನು ಬಂಧಮುಕ್ತಗೊಳಿಸಿದಂತಾಯಿತು. ೧೯೪೫ರಲ್ಲಿ ೧೧೦೫ ಸೆಕ್ಯುರಿಟಿ ಕೈದಿಗಳನ್ನು ಬಿಡುಗಡೆ ಮಾಡಿದರು.

ಕಲಕತ್ತೆಯಲ್ಲಿ ಮಿಲಿಟರಿ ಮಾದರಿಯ ಲಾರಿಯೊಂದು ಓರ್ವ ಸಾಯಕಲ್ ಸ್ವಾರನಿಗೆ ಹಾಯ್ದದ್ದರಿಂದ ಅವನು ಆಗಿಂದಾಗ್ಗೆ ಸತ್ತನು. ಕೂಡಲೆ ಜನ ರೊಚ್ಚಿಗೆದ್ದು ಲಾರಿಗೆ ಬೆಂಕಿ ಹಚ್ಚಿ ಅದನ್ನು ಸುಟ್ಟರು. ಪೋಲೀಸರಿಗೆ ಸುದ್ದಿ ತಿಳಿದ ಕೂಡಲೆ ಅವರು ಬಂದು ಜನರನ್ನು ಚದುರಿಸಿದರು.

ಬಂಗಾಲದ ೧೯೪೬-೪೭ ಇಸ್ವಿ ಮುಂಗಡ ಪತ್ರಿಕೆಯು ಗವರ್ನರರ ಅಧಿಕಾರದಲ್ಲಿ ಪ್ರಸಿದ್ಧಿಸಲ್ಪಟ್ಟದ್ದು ಅದರಲ್ಲಿ ೯೪೮ ಲಕ್ಷ ರೂಪಾಯಿ ಕೊರತೆ ಕಂಡುಬಂದಿದೆ. ಉತ್ಪನ್ನ ೪೧,೦೧೮ ಕೋಟಿ ರೂ. ವೆಚ್ಚ ೫೦,೬೫ ಕೋಟಿ ರೂಪಾಯಿ ಹಿಡಿದಿದ್ದು ಹೊಸ ಕರವನ್ನೇನೂ ಸೂಚಿಸಲಾಗಿಲ್ಲ. ಕೊರತೆಯನ್ನು ಸಾಲದಿಂದ ತುಂಬಲಾಗುವದು.

ಫರೀದಪುರದಲ್ಲಿ ಕಳೆದ ಶನಿವಾರ ರಾತ್ರಿ ಬಿಟ್ಟ ಬಿರುಗಾಳಿಯಿಂದ ಬಹಳ ಹಾನಿಯಾಗಿದೆಂದು ಸುದ್ದಿ ಬಂದಿದೆ. ಇದರಿಂದ ಸರಕಾರದ ಅನಾಥಾಲಯಕ್ಕೆ ಬೆಂಕಿಹತ್ತಿ ಇಬ್ಬರು ಸತ್ತರು. ಸುಮಾರು ೨ ಲಕ್ಷ ರೂಪಾಯಿಗಳ ಹಾನಿಯಾಗಿದೆ. ಅನೇಕ ಗಿಡಗಳು ನೆಲಕ್ಕುರುಳಿ ಬಿದ್ದುದರಿಂದಲೂ ಹಾನಿಯಾಗಿದೆ. ೮ ಜನರು ಕಾಣೆಯಾಗಿರುವರು.

ಬಂಗಾಲದಲ್ಲಿ ಮುಸ್ಲಿಂ ಲೀಗಿನ ಧುರೀಣರಾದ ಎಚ್. ಎಸ್. ಸುರವರ್ದಿಯವರನ್ನು ಮಂತ್ರಿಮಂಡಳ ರಚನೆಯಲ್ಲಿ ಸಹಾಯ ಮಾಡಲು ಗವರ್ನರ ಸಾಹೇಬರು ಆಮಂತ್ರಿಸಿದ್ದಾರೆ. ಕಾಯದೇ ಮಂಡಳದಲ್ಲಿ ಮಾಡತಕ್ಕ ಕಾರ್ಯಕ್ರಮವನ್ನು ಗೊತ್ತುಪಡಿಸಲು ಲೀಗಿನವರು ಒಂದು ಉಪಸಮಿತಿಯನ್ನು ನೇಮಿಸಿದ್ದಾರೆ.

ಸಿಂಧ--ಪಂಜಾಬ--ಸರಹದ್ದ

ಸಿಂಧದಲ್ಲಿ ಹಿದಾಯತುಲ್ಲಾ ಮಂತ್ರಿಮಂಡಳದಲ್ಲಿ ಅಬ್ದುಲ್ ಸತಾರರನ್ನು ಆರನೇ ಮಂತ್ರಿಯನ್ನಾಗಿ ನೇಮಿಸಿಕೊಳ್ಳಲಾಗಿದೆ. ಲೋಕೋಪಯೋಗಿ ಖಾತೆಯನ್ನು ಅವರಿಗೆ ಕೊಡಲಾಗಿದೆ.

ಪಂಜಾಬ ಮುಸ್ಲಿಂ ಲೀಗ ಪಕ್ಷದವರು ಮುಖ್ಯ ಮಂತ್ರಿಗಳಿಗೆ ಪತ್ರಕಳಿಸಿ ಅನರರಿ ಮ್ಯಾಜಿಸ್ಟ್ರೇಟ ಮೊದಲಾದ ಸ್ಥಳಗಳ ರದ್ದತಿ ಬಗ್ಗೆ ವಿಚಾರ ಮಾಡಲು ಶಾಸನ ಸಭೆ ಕರೆಯಬೇಕೆಂದು ಬಿನ್ನವಿಸಿದ್ದಾರೆ.

ಪಂಜಾಬ ಸರಕಾರದವರು ಅಪರಾಧಿಗಳ ಪತ್ತೆಗಾಗಿ ೮ ನಾಯಿಗಳನ್ನು ತರಬೇತು ಮಾಡಲಿರುವರು,

ಸಿಂಧದ ಹಿಂದಿದ ಮುಖ್ಯ ಮುಂತ್ರಿ ಅಲ್ಲಾಬಕ್ಷರ ಕೊಲೆಮಾಡಿದ ಹೂರರ ಮುಖ್ಯಸ್ಥ ಮೊಹಬತ ಬೆಹಾನರಿಗೆ ಗಲ್ಲಿನ ಶಿಕ್ಷೆ ವಿಧಿಸಲಾಯಿತು. ಕೊಲೆಗೆ ಸಂಬಂಧಿಸಿದ ಇನ್ನೂ ನಾಲ್ಕು ಜನ ಹೂರರು ಕಾಣೆಯಾಗಿರುವರು.

ಪಂಜಾಬದ ಆಹಾರ ಪರಿಸ್ಥಿತಿಯನ್ನೆದುರಿಸಲು ಸರಕಾರ ಎಲ್ಲ ಪಕ್ಷಗಳ ಪ್ರಾತಿನಿಧ್ಯವಿದ್ದ ಕೇಂದ್ರ ಆಹಾರ ಸಮಿತಿಯೊಂದನ್ನು ನೇಮಿಸಿ ಅದಕ್ಕೆ ಎಲ್ಲ ಅಧಿಕಾರಗಳನ್ನು ಕೊಟ್ಟರೆ ಮುಸ್ಲಿಂ ಲೀಗ ಪಕ್ಷವು ಆಹಾರ ಪರಿಸ್ಥಿತಿಯನ್ನೆದುರಿಸಲು ಸರಕಾರದೊಡನೆ ಸಹಕರಿಸುವದು ಎಂದು ರಾಜಾ ಗಜಫರಅಲಿಯವರು ಪಂಜಾಬ ಶಾಸನ ಸಭೆಯ ಅಧಿವೇಶನದಲ್ಲಿ ಹೇಳಿದರು.

ಜೋಗದಲ್ಲಿ ೫೦೦ ಗುಡಿಸಲುಗಳು ಬೆಂಕಿಗೆ ಆಹುತಿಯಾಗಿರುವವು. ಸುಮಾರು ೧ ಲಕ್ಷ ರೂಪಾಯಿ ಹಾನಿಯಾಗಿದೆಂದು ತರ್ಕಿಸಲಾಗಿದೆ.

“ಹಳೆಯ ಹೇಳಿಕೆ, ಘೋಷಣೆಗಳು ಈಗ ಅನ್ವಯಿಸುವದಿಲ್ಲ” ಬ್ರಿಟಿಶ ಧೋರಣೆಯ ಬಗ್ಗೆ ಸರ್ ಸ್ಟಾಫರ್ಡರ ಹೇಳಿಕೆ; ಮಂತ್ರಿಗಳು ಯಾವದೇ ಸಿದ್ಧಯೋಜನೆಯನ್ನು ತಂದಿಲ್ಲ, ಜಿನ್ನಾಸಾಹೇಬರ ಪ್ರಚಂಡ ಕ್ರೋಧ

ಬ್ರಿಟಿಶ ಮಂತ್ರಿಗಳ ಶಿಷ್ಟಮಂಡಲದವರು ತಮ್ಮ ಮಾತುಕತೆಗಳನ್ನು ತಾ. ೧ರಿಂದ ಪ್ರಾರಂಭಿಸಿ ಭರದಿಂದ ಸಾಗಿಸಿದ್ದಾರೆ. ಈಗಾಗಲೆ ಡಾ. ಖಾನಸಾಹೇಬ, ಗೋಪೀನಾಥ ಬಾರ್ಡೋಲಾಯ, ಗುಲಾಮಹುಸೇನ ಹಿದಾಯತುಲ್ಲಾ ಈ ಮುಖ್ಯ ಮಂತ್ರಿಗಳನ್ನೂ ವಿರೋಧಿ ಪಕ್ಷದ ಧುರೀಣರಲ್ಲಿ ಜಿ. ಎಂ. ಸೈಯ್ಯದ, ಸಾದುಲ್ಲಾ, ಮಮದೋತ ನವಾಬ, ಅಬ್ದುಲ ಕ್ವಾಯುಮರನ್ನೂ ಅ. ಭಾ. ಮುಂದಾಳುಗಳಲ್ಲಿ ಅಧ್ಯಕ್ಷ ಅಝಾದ, ಮಹಾತ್ಮಾ ಗಾಂಧಿ, ಜಿನ್ನಾಸಾಹೇಬ, ಸರ್ ತೇಜಬಹಾದ್ದೂರ ಸಪ್ರೂ ಅವರನ್ನೂ ಭೋಪಾಲದ ನವಾಬರನ್ನೂ ಅವರು ಇಷ್ಟರಲ್ಲೆ ಕಂಡಿದ್ದಾರೆ. ನಡೆದ ಚರ್ಚೆಗಳು ಸ್ವಾಭಾವಿಕವಾಗಿ ಗೋಪ್ಯವಾಗಿವೆ. ಆದರೆ ಊಹಕರ ಕಲ್ಪನೆಯ ಕೆಲವಂಶಗಳನ್ನು ತುಡುಕಿವೆ. ಕೆಲವಂಶವನ್ನು ಬ್ರಿಟಿಶ ಮಂತ್ರಿಗಳನ್ನು ಭೆಟ್ಟಿಯಾಗಿ ಬಂದ ಮುಂದಾಳುಗಳ ಹಾವಭಾವ, ಮುಖಮುದ್ರೆ, ನುಡಿಗಳಿಂದ ತರ್ಕಿಸಿಕೊಳ್ಳಬಹುದಾಗಿದೆ.

ಸಿದ್ಧ ಯೋಜನೆಯಿಲ್ಲ

ಬ್ರಿಟಿಶ ಮಂತ್ರಿಗಳು ಹಿಂದುಸ್ತಾನದ ಸಲುವಾಗಿ ಯಾವುದೊಂದು ಸಿದ್ಧವಾದ ಯೋಜನೆಯನ್ನು ತಂದಿಲ್ಲವೆಂಬ ಮಾತನ್ನು ಹಿಂದುಸ್ತಾನದ ಜನರಿಗೆ ಮನವರಿಕೆ ಮಾಡಿಕೊಡಲು ಬಹಳವಾಗಿ ಹೆಣಗುತ್ತಿದ್ದಾರೆ. ಸರ್ ಕೂಪ್ಲಂಡರ ಸಪ್ತವಲಯ ಅಥವಾ ಚತುರ್ವಲಯ ಯೋಜನೆಯನ್ನು ಹೋಲುವದೇನನ್ನೊ ಅವರು ಜೇಬಿನಲ್ಲಿ ಹಾಕಿಕೊಂಡು ಬಂದಿದ್ದಾರೆಂದು ಲಂಡನದ ಕಮ್ಯುನಿಸ್ಟ ತಾರ್ಕಿಕರು ಹಾರಿಸಿಬಿಟ್ಟ ಊಹೆಯೊಂದು ಕಡೆ, ಮಹಾತ್ಮಾ ಗಾಂಧಿಯವರು ಬಂಗಾಲದಲ್ಲಿದ್ದಾಗ ಗವ್ಹರ್ನರ ಕೇಸಿಯವರೊಡನೆ ಮಾಡಿದ ಚರ್ಚೆಯ ಫಲವಾಗಿ ಸಿದ್ಧವಾದ ಯೋಜನೆಯನ್ನು ತಂದಿದ್ದಾರೆಂದು ಇತರರ ತರ್ಕವೊಂದೆಡೆ, ಜನರ ತಲೆಯಲ್ಲಿ ತಿರುಗುತ್ತಿವೆ. ಇವನ್ನು ನಿವಾರಿಸಲು ಮಂತ್ರಿಗಳು ಹೆಣಗುವದರಲ್ಲಿ ಅರ್ಥವಿಲ್ಲದಿಲ್ಲ. ಈ ಎರಡು ಸುದ್ದಿಗಳೂ ದೇಶದಲ್ಲಿನ ಎರಡು ಪ್ರಮುಖ ವಿಚಾರಧಾರೆಯ ಜನರಲ್ಲಿ ಸಂದೇಹ ಕುಶಂಕೆಗಳನ್ನು ಹುಟ್ಟಿಸುವಂತಿದ್ದು ಮಾತುಕತೆಯಲ್ಲಿ ವಿಷ ಬೆರೆಸಲು ಸಮರ್ಥವಾಗುವಂತಿವೆ. ಆದುದರಿಂದಲೇ ಈ ತಿಳಿವಳಿಕೆಯನ್ನು ಹೋಗಲಾಡಿಸುವ ಆತುರದಲ್ಲಿ ಸರ್ ಸ್ಟಾಫರ್ಡರು ತಾ. ೧ಕ್ಕೆ ಒಂದು ಪತ್ರಿಕಾ ಪರಿಷತ್ತನ್ನೇ ಕರೆದರೆನ್ನಬಹುದು. “ನಮ್ಮ ಕೈಯಲ್ಲಿ ಯಾವದೋ ಸಿದ್ಧ ಯೋಜನೆಯಿದೆಯೆಂಬ ತರ್ಕದ ತಳಹದಿಯನ್ನಿಟ್ಟುಕೊಂಡು ಅದನ್ನು ಹೊರಬಿಚ್ಚುವದಿಲ್ಲವೆಂದು ಆರೋಪಿಸುವದರಲ್ಲಿ ಅರ್ಥವಿಲ್ಲ. ಯೋಜನೆಯೇ ಇಲ್ಲ, ಅದನ್ನು ಹೊರಗೆ ತರುವದೇನು ಬಂತು?” ಎಂದು ಕೇಳಿದರು. ಆದರೆ ಅದೇ ಉಸಿರಿಗೆ “ನಾನು ಬಹಳ ಪಳಗಿದ ವಕೀಲ, ನನ್ನನ್ನು ಪಾಟೀಸವಾಲಿನಿಂದ ಬಾಯಿಬಿಚ್ಚಿಸಲಾರಿರಿ” ಎಂದೂ ಹೇಳಿ ಅವರು ಬಿಗಿಬಾಯಿಯ ಗೋಪ್ಯವೊಂದುಂಟೆಂಬ ಭಾವವನ್ನು ಕುರಿತು ಮಂತ್ರಿಶಿಷ್ಟರ ಅಭಿಪ್ರಾಯವೇನೆಂದು ತಿಳಿದುಕೊಳ್ಳಲು ಪತ್ರಿಕಾ ಪ್ರತಿನಿಧಿಗಳು ಮಾಡಿದ ಪ್ರಯತ್ನವೆಲ್ಲ ನಿರರ್ಥಕವಾಯಿತೆಂದು ಹೇಳಬಹುದು. “ಸರ್ ಸ್ಟಾಫರ್ಡ ಕ್ರಿಪ್ಸರು ಒಳ್ಳೆ ಚಾಣಾಕ್ಷರು” ಎಂದು ಅಸಾಧಾರಣ ಸುದ್ದಿಗಳೂ ಒಪ್ಪುವಂತಾಗಿದೆ.

ಅಂತರರಾಷ್ಟ್ರೀಯ ಮಧ್ಯಸ್ಥಿಕೆ

ಸರ್ವಸಮ್ಮತವಾದ ಯಾವುದೊಂದು ಒಪ್ಪಂದ ಸಾಧ್ಯವಾಗದೆ ಹೋದರೆ ಏನು ಮಾಡುವಿರಿ? ಎಂಬ ಕಾಲ್ಪನಿಕ ಪ್ರಶ್ನೆಗೆ ಉತ್ತರ ಕೊಡಲು ನಿರಾಕರಿಸಿ, ಶಿಷ್ಟಾಯಿಯ ಕಾರ್ಯ ಪೂರ್ಣವಾದಾಗ ಒಂದು ಉಪಾಯ ಸಿದ್ಧವಾಗಿಯೆ ತೀರುವದೆಂದು ಕ್ರಿಪ್ಸರು ಹಟ ಹಿಡಿದರು. ಈ ದೇಶದಲ್ಲಿ ಮಹಾ ಮುತ್ಸದ್ದಿಗಳಿರುವರು. ಅವರಿಗೆ ಈ ಕಠಿನ ಪ್ರಶ್ನೆಗಳನ್ನು ಬಿಡಿಸಗೊಡುವುದು ಒಳಿತು, ಎಂದರವರು. ಆದರೆ, ಸರ್ವಸಮ್ಮತಿಯಿಂದ ಒಪ್ಪಂದವಾಗದಿದ್ದ ಪಕ್ಷದಲ್ಲಿ ಅಂತರ್‌ರಾಷ್ಟ್ರೀಯ ಮಧ್ಯಸ್ಥಿಕೆಯೂ “ಸಮಸ್ಯೆಯನ್ನು ಬಿಡಿಸುವಲ್ಲಿ ಒಂದು ಉತ್ತಮ ಸಾಧನವಾಗಬಹುದು” ಎಂದು ಕ್ರಿಪ್ಸರು ಹೇಳಿದರು. ಈ ಸೂಚನೆಯನ್ನು ಮಹಾತ್ಮಾ ಗಾಂಧಿಯವರು ಹಿಂದೆ ಕೊಟ್ಟಿದ್ದರೆಂಬುದನ್ನು ಇಲ್ಲಿ ನೆನಸಿಕೊಳ್ಳಬಹುದು. ಹೇಗಾದರೂ ಒಪ್ಪಂದ ಮಾಡಿಸಬೇಕೆಂಬುದೇ ಬ್ರಿಟಿಶ ಉದ್ದೇಶವಾಗಿದೆಯೆಂಬುದನ್ನು ಮನವರಿಕೆ ಮಾಡಿಕೊಡಲು ಅವರು ಯತ್ನಿಸುತ್ತಿದ್ದಾರೆ. ಪಂ. ಜವಾಹರಲಾಲರು ಈ ಬಗ್ಗೆ ಮೊನ್ನೆ ಹೇಳಿದಂತೆ, ಪಾಕಿಸ್ತಾನ ದೊರೆಯದಿದ್ದರೆ ಜಿನ್ನಾಸಾಹೇಬರು ತೊಂದರೆಯುಂಟುಮಾಡುವ ಬೆದರಿಕೆ ಹಾಕಿದ್ದಾರೆ. ಅವರೆ ಹಿಂದೀ ಸಮಸ್ಯೆಯನ್ನು ಬಿಡಿಸುವದನ್ನು ಆ ಕಾರಣದಿಂದ ಮುಂದೆ ಹಾಕಿದರೆ ಈ ದೇಶದಲ್ಲಿ ಅಕ್ಕಿತಲೂಭಯಂಕರವಾದ ಗೊಂದಲವುಂಟಾಗುವುದು ನಿಶ್ಚಯ. ಬ್ರಿಟಿಶಮಂತ್ರಿಶಿಷ್ಟರು ಚಿಕ್ಕ ಮತ್ತು ದೊಡ್ಡ ತೊಂದರೆಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ.

ಗವರ್ನರರು ಕಾರ್ಯಕಾರಿಗಳು

ಎಲ್ಲ ಪ್ರಾಂತಗಳ ಗವ್ಹರ್ನರರೊಡನೆಯೂ ವ್ಹಾಯಿಸರಾಯರ ಕಾರ್ಯಕಾರಿ ಮಂಡಲದ ಸದಸ್ಯರೊಡನೆಯೂ ಶಿಷ್ಟರ ಮಾತುಕತೆ ಮಾರ್ಚ ೩೧ಕ್ಕೆ ಮೊದಲೇ ಮುಗಿದು ಹೋಗಿತ್ತು. ಗವ್ಹರ್ನರರು ಏನು ಹೇಳಿದರು ಎಂಬುದು ಯಾರಿಗೂ ಗೊತ್ತಿಲ್ಲ. ಆದರೆ ಸಿಂಧ ಗವ್ಹರ್ನರರಾದ ಸರ್ ಫ್ರಾನ್ಸಿಸ ಮುಡಿಯವರೊಬ್ಬರಾದರೂ ಪಾಕಿಸ್ತಾನಕ್ಕೆ ಬೆಂಬಲ ಕೊಟ್ಟಿರುವರೆಂದು ತಿಳಿದುಬಂದಿದೆ. ವ್ಹಾಯಿಸರಾಯರ ಕಾರ್ಯಕಾರಿ ಮಂಡಲದ ಸದಸ್ಯರ ಹೇಳಿಕೆಗಳು ಸ್ವಾಭಾವಿಕವಾಗಿ ವೈವಿಧ್ಯಪೂರ್ಣವಾಗಿರಬೇಕು. ಅವರೆಲ್ಲರೂ ತಾವು ಈ ವರೆಗೆ ಅನುಭವಿಸಿದ ಸ್ಥಾನಮಾನಗಳಿಂದ ಹೊರಬಿದ್ದು ಹೋಗಲು ಮನಸ್ಸಿಲ್ಲದವರಾಗಿರುವರೆಂದು ಹೇಳಲಾಗಿದೆ. ಕೆಲವರಂತೂ ಇರಾಣದಲ್ಲಿಯ ರಶಿಯನ್ ಭಯ ಇದೀಗ ಕಡಿಮೆಯಾಗಿರುವದರಿಂದ ಮತ್ತೆ ಬ್ರಿಟಿಶ ಸರಕಾರ “ಇದ್ದಂತಿರೋ ಸಿದ್ದೇಶ್ವರಾ” ಧೋರಣೆಗೇ ಮರಳಬೇಕೆಂದು ಒತ್ತಾಯಗೊಳಿಸಿದರಂತೆ. ಸ್ವಾಭಾವಿಕವಾಗಿ ಹಿಂದೂ ಸದಸ್ಯರು ಪಾಕಿಸ್ತಾನಕ್ಕೆ ವಿರೋಧಿಗಳೂ ಮುಸ್ಲಿಮರು ಅನುಕೂಲರು ಇದ್ದರೆಂದು ಹೇಳಲಾಗಿದೆ. ಏನೇ ಆದರೂ ಅಲ್ಪಸಂಖ್ಯಾಕರಿಗೆ ಪ್ರಗತಿ ತಡೆಯುವ ಅಧಿಕಾರವೀಯಲ್ಪಡದಿದ್ದರೂ ಬಹುಸಂಖ್ಯಾಕರಿಗೆ ಸರ್ವಾಧಿಕಾರವನ್ನೂ ಕೊಡಬಾರದು. ತಮಗೆ ಯಾವ ಬಗೆಯ ಘಟನಾತ್ಮಕ ರಕ್ಷಣೆಗಳು ಬೇಕೆಂಬುದನ್ನು ನಿರ್ಣಯಿಸುವ ಹಕ್ಕ ಅಲ್ಪಸಂಖ್ಯಾಕರಿಗೆ ಇರಬೇಕೆಂದೂ ಸದಸ್ಯ ಮಹಾಶಯರು ತಿಳಿಸಿದರಂತೆ.

ಕಾಂಗ್ರೆಸ್ ಮತ್ತು ಮಂತ್ರಿಶಿಷ್ಟರು

ಅಧ್ಯಕ್ಷ ಅಝಾದರು ಕಾಂಗ್ರೆಸ್ಸಿನ ಅಧಿಕೃತ ಪ್ರತಿನಿಧಿಯಾಗಿ ಮಂತ್ರಿಶಿಷ್ಟಾಯಿಯೊಡನೆ ಮಾತುಕತೆ ನಡೆಸುತ್ತಿದ್ದರೆ ಮಹಾತ್ಮಾ ಗಾಂಧಿಯವರು ಸಿಮಲಾ ಪರಿಷತ್ತಿನ ಕಾಲದಲ್ಲಿ ಇದ್ದಂತೆ, ಮಂತ್ರಿಗಳಿಗೆ ಬರಿ “ಸಲಹೆಗಾರ”ರಾಗಿ ವರ್ತಿಸುವರು. ಸರ್ ಸ್ಟಾಫರ್ಡ ಕ್ರಿಪ್ಸರು ಮಹಾತ್ಮಾ ಗಾಂಧಿಯವರು ಹರಿಜನ ಕೇರಿಯ ತಮ್ಮ ವಸತಿಯಲ್ಲಿ ಪ್ರಾರ್ಥನೆ ಜರುಗಿಸಿದ್ದಾಗ ಅಲ್ಲಿಗೆ ಬಂದಿದ್ದರು. ಮುಂದೆ ಗಾಂಧೀಜಿಯವರನ್ನು ಅವರ ಮಾತುಕತೆಯ ನಿರ್ದಿಷ್ಟ ದಿನಕ್ಕೆ ಮೊದಲೇ ತಮ್ಮ ಕಚೇರಿಗೆ ಅವರು ಒಯ್ದು ತಾಸಿಗೆ ಮೇಲ್ಪಟ್ಟು ಮಾತುಕತೆ ನಡೆಸಿದರು. ಗಾಂಧೀಜಿಯವರು ತಮ್ಮ ನಿರ್ದಿಷ್ಟದಿನವಾದ ತಾ ೩ನೆ ದಿನವೂ ತಮಗೆ ಕೊಟ್ಟಿದ್ದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಂಡು ಮಾತುಕತೆ ನಡೆಸಿದರು. ಅದೂ ಅಲ್ಲದೆ ಗಾಂಧೀಜಿಗೂ ಮಂತ್ರಿಶಿಷ್ಟರಿಗೂ ನಡುವೆ ಪತ್ರವ್ಯವಹಾರ ಬೇರೆ ನಡೆಯುತ್ತಿದೆ. ಮಹಾತ್ಮರು ಪುನಃ ಪುನಃ “ಮಂತ್ರಿಶಿಷ್ಟರ ಸದುದ್ದೇಶವನ್ನು ಶಂಕಾಕುಶಲತೆಯಿಂದ ನೋಡಬೇಡಿರಿ” ಎಂದು ಉಪದೇಶಿಸುತಿದ್ದಾರೆ. ಮೌಲಾನಾ ಅಝಾದರು ನಿರ್ದಿಷ್ಟ ದಿನದಲ್ಲಿ ಮಂತ್ರಿಗಳನ್ನು ಭೆಟ್ಟಿಯಾಗಿ ತಮ್ಮ ಸಮಯಕ್ಕೆ ಮೊದಲೇ ಮಾತುಕತೆ ತೀರಿಸಿ ಹೊರಗೆ ಬಂದರು. “ಮಾತುಕತೆಯ ಪ್ರಗತಿ ಮತ್ತು ಒಲವು ತೃಪ್ತಿಕರವಾಗಿದೆ” ಎಂದು ಅವರು ಹೇಳಿದರು. ಅಝಾದರು ಹಿಂದುಸ್ತಾನದ ವಿಭಜನೆಗೆ ಕಾಂಗ್ರೆಸಿನ ಬದ್ಧ ವಿರೋಧವನ್ನು ಸ್ಪಷ್ಟವಾಗಿ ಅಂದು ತೋರಿಸಿದರು. “ಎರಡು ಘಟನಾಸಮಿತಿಗಳಿಗೆ ಕಾಂಗ್ರೆಸ್ಸು ಎಂದೆಂದೂ ಒಪ್ಪಲಾರದು” ಎಂದಿದ್ದಾರೆ. ಅವರು “ಅಟ್ಲಿಯವರ ಹೇಳಿಕೆಯ ಜೀವಾಳವನ್ನು ಅನುಸರಿಸಿದರೆ ಮಂತ್ರಿವರ್ಯರು ಯಶಸ್ವಿಯಾಗುವದರಲ್ಲಿ ಸಂದೇಹವಿಲ್ಲ” ಎಂದೂ ಅವರು ಹೇಳಿದರು.

ಗಡಿನಾಡಿನ ಪ್ರಧಾನ ಮಂತ್ರಿ ಡಾ. ಖಾನಸಾಹೇಬರೂ ಹಿಂದುಸ್ತಾನದ ಐಕ್ಯವನ್ನು ಬೆಂಬಲಿಸಿ ಮಾತಾಡಿದ್ದಲ್ಲದೆ ಗಡಿನಾಡಿನ ರಕ್ಷಣೆಯ ಸಮಸ್ಯೆಗಳನ್ನು ಚರ್ಚಿಸಿದರು.

ಜಿನ್ನಾಸಾಹೇಬರ ಸಿಟ್ಟು

ಜಿನ್ನಾಸಾಹೇಬರೊಬ್ಬರೇ ಇದರಲ್ಲಿ ಬಹಳ ಉದ್ವಿಗ್ನರಾಗಿರುವದು ಕಾಣುತ್ತದೆ. ಅಟ್ಲಿಯವರು ಅಲ್ಪಸಂಖ್ಯಾಕರ ವಿಷಯದಲ್ಲಿ ಆಡಿದ ಮಾತುಗಳೇ, ಅವುಗಳು ತಮಗೆ ಅನ್ವಯಿಸುವದಿಲ್ಲೆಂದು ನಟಿಸಲು ಅವರು ಹೆಣಗಿದರೂ ಜಿನ್ನಾಸಾಹೇಬರನ್ನು ಎದೆಗೆಡಿಸಿತ್ತು. ಕಾಂಗ್ರೆಸ್ಸು ಹಿಂದುಸ್ತಾನದ ಐಕ್ಯವನ್ನು ಹಟದಿಂದ ಸಾಧಿಸುವದೆಂಬುದೂ ಸ್ಪಷ್ಟವಾಗಿದೆ. ಸರ್ ಸಿ ಪಿ. ಯವರಂಥ ಸಂಸ್ಥಾನಿಕ ಪ್ರತಿನಿಧಿಗಳು ಯಾವವೇ ಯುದ್ಧವಾದರೂ ಚಿಂತೆಯಿಲ್ಲ ಹಿಂದುಸ್ತಾನವನ್ನು ಅಖಂಡವಾಗಿಡಬೇಕೆಂದು ಹೇಳಿದ್ದು ಜಿನ್ನಾರ ಧೃತಿಯನ್ನು ಬೆಳೆಸುವ ಮಾತಾಗಿರಲಿಲ್ಲ. ಆದುದರಿಂದ ಅವರು “ಹಿಂದೀಯನೆಂದು ನನ್ನನ್ನು ನಾನು ತಿಳಿದುಕೊಳ್ಳುವದಿಲ್ಲ”ವೆಂದು ಹೇಳಿ ತಮ್ಮ ತೀವ್ರ ಆಗ್ರಹವನ್ನು ತೋರ್ಪಡಿಸಿದರು. ಹಿಂದೀಯರೆಂದರೆ ಒಂದು ರಾಷ್ಟ್ರವಲ್ಲ, ಅನೇಕ ರಾಷ್ಟ್ರಗಳು. ನಾವು ಮುಸ್ಲಿಂ ರಾಷ್ಟ್ರ, ಎಂದರವರು. ಅಂತರ್‌ರಾಷ್ಟ್ರೀಯ ಮಧ್ಯಸ್ಥಿಕೆಯೂ ಅವರಿಗೆ ರುಚಿಸಲಿಲ್ಲ. ಪಾಕಿಸ್ತಾನ ಮೂಲಭೂತ ಪ್ರಶ್ನೆ. ಅದರಲ್ಲಿ ಮಧ್ಯಸ್ಥಿಕೆಗೆ ಅವಕಾಶವಿಲ್ಲ. ಇನ್ನು ಚಿಲ್ಲರೆ ವಿವರಗಳ ವಿಷಯ ಮತಭೇದವಾದರೆ ಮಧ್ಯಸ್ಥಿಕೆಗೊಪ್ಪಿಸಬಹುದು ಎಂದು ಅವರ ವಾದ. “ಹಿಂದೂಗಳೂ ಮುಸ್ಲಿಮರು ಒಂದೆಡೆ ಇರಲಾರರು. ಅವರು ಬೇರೆ ಮಾತ್ರವಲ್ಲ, ಪರಸ್ಪರ ವೈರಿಗಳು.” ಆದರೆ ಸರ್ ಸ್ಟಾಫರ್ಡ ಕ್ರಿಪ್ಸರು ತಾ. ೧ರ ಪತ್ರಿಕಾ ಪರಿಷತ್ತಿನಲ್ಲಿ ಆರು ವರ್ಷಗಳ ಕೆಳಗೆ ಲಾರ್ಡ ಲಿನಲಿಥಗೋ ಅವರು ಅಲ್ಪಸಂಖ್ಯಾಕರಿಗೆ ಕೊಟ್ಟ ಆಶ್ವಾಸನಗಳು ಪರಿಸ್ಥಿತಿ ಬದಲಿಸಿದಂತೆ ಈಗ ಬದಲಾಗಬಹುದು. ವಿಕ್ಟೋರಿಯಾ ರಾಣಿಯ ಘೋಷಣೆಯಿಂದಾರಂಭಿಸಿ ಇಂದಿನ ವರೆಗೆ ಆಶ್ವಾಸನಗಳನ್ನೆಲ್ಲ ಈಗ ವಿಚಾರಕ್ಕೆ ತೆಗೆದುಕೊಂಡರೆ ನಾವು ಎಲ್ಲಿಲ್ಲದ ಗೊಂದಲದಲ್ಲಿ ಬಿದ್ದೇವು, ಎಂಬುದೂ ಜಿನ್ನಾರಿಗೆ ಆಶ್ವಾಸನಕರವಾಗಿಲ್ಲ. ಸೀಖರಂತೂ ತಾವು ಅಖಂಡ ಹಿಂದುಸ್ತಾನಕ್ಕಾಗಿಯೇ ಹೋರಾಡುವದಾಗಿ ಶಪಥ ತೊಟ್ಟಿದ್ದಾರೆ. ಒಂದು ವೇಳೆ ಪಾಕಿಸ್ತಾನ ಕೊಟ್ಟದ್ದಾದರೆ ಸ್ವತಂತ್ರ ಸಾರ್ವಭೌಮ ಸೀಖ ರಾಷ್ಟ್ರವೊಂದನ್ನು ತಾವು ಬೇಡುವದಾಗಿಯೂ ಹೇಳಿದ್ದಾರೆ.

ನರೇಂದ್ರರು

ನರೇಂದ್ರರು, ಮುಖ್ಯವಾಗಿ ಭೋಪಾಲದ ನವಾಬರು, ಕಾಂಗ್ರೆಸ್ ಮುಸ್ಲಿಂ ಲೀಗಗಳ ನಡುವೆ ಸಂಧಿದೂತರಾಗಿ ಕೆಲಸ ಮಾಡುತ್ತಿದ್ದಾರೆ. ಭೋಪಾಲ ನವಾಬರು ಕೆಲ ದಿನಗಳ ಹಿಂದೆ ಗಾಂಧೀಜಿಯವರನ್ನು ಭೆಟ್ಟಿಯಾದವರು ಈಗ ಜಿನ್ನಾಸಾಹೇಬರನ್ನು ಭೆಟ್ಟಿಯಾಗಿರುವರು. ಅವರೆ ತಮ್ಮ ಮಟ್ಟಿಗೆ ನರೇಂದ್ರರು ಹೊಸ ರಾಜ್ಯಘಟನೆಯಲ್ಲಿ ಸೇರಬೇಕಾದರೆ ಕೆಲ ಕರಾರುಗಳನ್ನು ಹಾಕುವರು: ಸಂಸ್ಥಾನಗಳು ಅದರಲ್ಲಿ ಸೇರಬೇಕಾದರೆ ಅದಕ್ಕೆ ಎಲ್ಲ ಸಂಸ್ಥಾನಗಳ ಮಾನ್ಯತೆ ದೊರೆಯಬೇಕು. ನರೇಂದ್ರರ ವಂಶಪರಂಪರಾಗತ ಹಕ್ಕು ಮತ್ತು ಅವರ ಏಕಛತ್ರಾಧಿಪತ್ಯವನ್ನು ಚರ್ಚಿಸಬಾರದು ಅವರ ಒಪ್ಪಿಗೆಯಿಲ್ಲದೆ ಸನದುಗಳನ್ನೂ ಒಡಂಬಡಿಕೆಗಳನ್ನೂ ತಿದ್ದಬಾರದು. ಈಗಿದ್ದ ಸಂಸ್ಥಾನಗಳ ಮೇರೆಗಳನ್ನು ಬದಲಿಸತಕ್ಕದ್ದಲ್ಲ, ಈಗಿನ ರಾಜವಂಶಗಳೆ ಬಾಳಬೇಕು, ಈಗಿನ ಸಂಸ್ಥಾನದ ಆಡಳಿತ ಸ್ವರೂಪವನ್ನು ಬದಲಿಸತಕ್ಕದ್ದಲ್ಲ, ಇತ್ಯಾದಿಯಾಗಿ ಅವರು ತಮ್ಮ ರಕ್ಷಣೆಗೆ ಸಾಕಷ್ಟು ಕರಾರುಗಳನ್ನು ಮುಂದೊಡ್ಡುವರು.

ಇದೀಗ ಸಂಸ್ಥಾನಿ ಪ್ರಜಾಪ್ರತಿನಿಧಿಗಳು ಹೂಡಿರುವ ಚಳವಳಿಯ ನಂತರ ಅವರನ್ನು ಕೂಡ ಕಾಣಲು ಮಂತ್ರಿಶಿಷ್ಟರು ನಿರ್ಧರಿಸಿರುವರು.

ಮುಂಬಯಿ ಶಾಸನ ಸಭೆ

ಇನ್ನುಳಿದ ಸದಸ್ಯರ ಆಯ್ಕೆ

ಮುಂಬಯಿ ಶಾಸನ ಸಭೆಗೆ ಆರಿಸಿ ಬಂದ ಇನ್ನುಳಿದ ಸದಸ್ಯರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ. (ಕಳೆದ ಸಲ ೧೧೬ ಜನರ ಹೆಸರು ಪ್ರಸಿದ್ಧಿಸಿತ್ತು) ೧೧೭] ಶ್ರೀ ಬಿ. ಜಿ. ಖೇರ ಮುಂಬಯಿ ವಿಶ್ವವಿದ್ಯಾಲಯ ೧೧೮] ಗುಲಜಾರಿಲಾಲ ನಂದಾ ಅಹಮ್ಮದಾಬಾದ (ಕೂಲಿಕಾರ) ೧೧೯] ಖಂಡೂಭಾಯಿ ದೇಸಾಯಿ (ಅಹಮ್ಮದಾಬಾದ ಕೂಲಿಕಾರ) ೧೨೦] ಛನ್ನೂಸಿಂಗ (ಸೊಲ್ಲಾಪುರ ಕೂಲಿಕಾರ) ೧೨೧] ಎಸ್. ಎ. ಡಾಂಗೆ [ಕಮ್ಯುನಿಸ್ಟ ಮುಂಬೈ ಜವಳಿ ಕೂಲಿಕಾರ] ೧೨೨] ಮಿರ್ಜಾ ಅಖ್ತರ ಹುಸೇನ [ನಾವಿಕ ಧಕ್ಕೆಕೆಲಸಗಾರ ಮುಸ್ಲಿಂಲೀಗ]

ಮುಸಲ್ಮಾನ ಸ್ಥಳಗಳ ಆಯ್ಕೆ

ಮುಸ್ಲಿಂ ಲೀಗಿನವರು ನಿಲ್ಲಿಸಿದ ಎಲ್ಲ ೩೦ ಮುಸಲ್ಮಾನರು ಆರಿಸಿ ಬಂದಿರುವರು. ೧೨೩) ಎ. ಎ. ಕಿತ್ತೂರ ೧೨೪) ಆರ್. ಎಚ್. ಗುಡವಾಲಾ ಧಾರವಾಡ ೧೨೫) ಎ. ಎ. ಖೀವಾಲಾ ಬೆಳಗಾವಿ ೧೨೬) ಹಾಜೀಸಾಹೇಬ ಹತ್ತಿವಾಲೆ ೧೨೭) ಅಯಿನ್ ಇಲಕಲ್ ವಿಜಾಪುರ ೧೨೮) ಅಬ್ದುಲ್ ಸತ್ತಾರ ಮುಹಮ್ಮದಹುಸೇನ ಸೊಲ್ಲಾಪುರ ೧೨೯) ಶಮುಸುದ್ದೀನ ಚಿಕ್ಕಾಗೊ ಉತ್ತರಕನ್ನಡ, ೧೩೦) ಎಚ್ ಎಂ. ಇಸ್ಮಾಯಿಲ್ ಅಹಮ್ಮದನಗರ ೧೩೧) ಚುಂದ್ರಿಗಾರ ಅಹಮ್ಮದಾಬಾದ ೧೩೨) ಹಾಜಿಹುಸನಅಲ್ಲಿ ಬೇಗಮುಹಮ್ಮದ ೧೩೩) ಹುಸೇನ ಅಬೂಬೇಗ ಮುಂಬಯಿ ೧೩೪) ಮುಹಮ್ಮದ ಉಮ್ಮರ ರಜಬ ೧೩೫) ಹಾಜೀಮುಹಮ್ಮದ ಅಹಮ್ಮದ ಮುಂಬಯಿ ೧೩೬) ಖಾ. ಸಾ. ಅಬ್ದುಲ್‌ರಹಿಮಾನ ಹಾಜಿಬಾಬು ಹಕಿಮ ನಾಸಿಕ ೧೩೭) ಕೆ. ಬಿ ಕಾಜಿ ಧುಳೆ ೧೩೮) ಮಹಮ್ಮದ ಭಾಯಿಜಿ ಕುಲಾಬಾ ೧೩೯) ಬೋಖಾರಿ ೧೪೦) ಹಸನ್ ಪೂರ್ವಖಾನದೇಶ ೧೪೧) ಅಬ್ದುಲ್‌ಕಾದಿರ ಅಬ್ದುಲ್ ಹಾಜೀಜಖಾನ ಪುಣೆ ೧೪೨) ಅಬ್ದುಲ್ ಕಾದರಶೇಖ ಸುರತ ೧೪೩) ಅಬ್ದುಲ್‌ರಜಬ ಕುವಾರೆ ಠಾಣೆ ೧೪೪) ಸಯ್ಯದ ದಾದಾಮಿಯಾ ಜಕಾತೆ ಸಾತಾರಾ ೧೪೫) ಖಾ. ಸಾ. ಅಬ್ದುಲ್ಲಾ ಹಾಜಿ ಇಸಫ ಸಾದ್ವಾ ಗೋಧ್ರಾ

ಉಡುಪಿಯಲ್ಲಿ ಮುದ್ರಣ ಕೆಲಸಗಾರರನ್ನು ಸುಸಂಘಟಿತರಾಗಿ ಮಾಡುವಗೋಸ್ಕರ ಶ್ರೀ ಎಂ. ವಿಠಲ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಮುದ್ರಣ ಕೆಲಸಗಾರರ ಸಂಘವೊಂದನ್ನು ಸ್ಥಾಪಿಸುವ ನಿರ್ಣಯವಾಯಿತು.

ಬೆಂಗಳೂರು-ಮೈಸೂರು

ಮೈಸೂರಲ್ಲಿ ತಾ. ೧ಕ್ಕೆ ನಡೆದ ಮೈಸೂರು ಕಾಂಗ್ರೆಸ ಕಾರ್ಯಸಮಿತಿಯ ಸಭೆಯಲ್ಲಿ ಆಹಾರ ಪರಿಸ್ಥಿತಿಯನ್ನು ಲಕ್ಷಿಸಿ ಹಾಸನದಲ್ಲಿ ಜರಗಬೇಕೆಂದಿದ್ದ ಕಾಂಗ್ರೆಸ ಮಹಾಅಧಿವೇಶನವನ್ನು ಮುಂದೆ ಹಾಕಬೇಕೆಂದು ನಿರ್ಣಯಿಸಲಾಯಿತು. ಬ್ರಿಟಿಶ ಮಂತ್ರಿಶಿಷ್ಟಾಯಿಯನ್ನು ಕಾಣಲು ಅಧ್ಯಕ್ಷ ನಿಜಲಿಂಗಪ್ಪನವರು ದಿಲ್ಲಿಗೆ ಹೋಗಬಹುದೆಂದು ತೀರ್ಮಾನವಾಯಿತು.

ತಾ. ೩೦—೩೧ ದಿನಗಳಲ್ಲಿ ಮೈಸೂರಲ್ಲಿ ದಕ್ಷಿಣ ಭಾರತ ಪ್ರಜಾಸಂಸ್ಥೆಗಳ ಸಲಹೆ ಸಮಿತಿ ತಿರ್ವಾಂಕೂರಿನ ಶ್ರೀ ಪಟ್ಟಂ ತನ್ನು ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಸೇರಿತು. ತಿರ್ವಾಂಕೂರು, ಪುದುಕೋಟೆ, ಕೊಚ್ಚಿ, ಮೈಸೂರು ಸಂಸ್ಥಾನಗಳ ಕಾಂಗ್ರೆಸ್ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಕೊಡುವಡಿದ್ದರೆ ಬ್ರಿಟಿಶ ಸರಕಾರ ನರೇಂದ್ರರೊಡನೆ ಒಪ್ಪಂದ ಮಾಡಿಕೊಳ್ಳದೆ ನಿಜವಾದ ಪ್ರಜಾಪ್ರಮುಖರೊಡನೆ ಮಾಡಿಕೊಳ್ಳಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು. ದಿಲ್ಲಿಯಲ್ಲಿ ಮಂತ್ರಿ ಶಿಷ್ಟರೊಡನೆ ಮಾತುಕತೆ ನಡೆಸಲು ಸಂಸ್ಥಾನಿ ಪ್ರಜಾ ಸಮ್ಮೇಲನಾಧ್ಯಕ್ಷರಿಗೆ ಸಲಹೆ ಕೊಡಲು ಶ್ರೀ ವೀರಣ್ಣಗೌಡ, ವರ್ಗೀಸ, ಇಕಂಡ, ವಾರಿಯರ್, ಪಟ್ಟಂ ತನ್ನು ಪಿಳ್ಳೆ, ನಿಜಲಿಂಗಪ್ಪ ಇವರು ದಿಲ್ಲಿಯಲ್ಲಿದ್ದು ಸಹಕರಿಸಬೇಕೆಂದು ನಿರ್ಣಯಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿನ ಪೋಲಿಸರ ಮತ್ತು ಕೆಳದರ್ಜೆಯ ಪೋಲೀಸ ಅಧಿಕಾರಿಗಳ ಸಂಬಳವನ್ನು ಹೆಚ್ಚಿಸುವ ಮತ್ತು ಅವರಿಗೆ ಇತರ ಸೌಕರ್ಯಗಳನ್ನೊದಗಿಸುವ ಪ್ರಶ್ನೆ ಸರಕಾರದ ವಿಚಾರದಲ್ಲಿದೆಯೆಂದೂ ಈ ಬಗ್ಗೆ ಪೋಲೀಸ ಇಲಾಖೆಯ ಮುಖ್ಯಾಧಿಕಾರಿಗಳು ಒಂದು ಯೋಜನೆ ಸೂಚಿಸಿರುವರೆಂದೂ ತಿಳಿಯುತ್ತದೆ.

ಮೈಸೂರು ಪೋಲೀಸದಲ್ಲಿ ೧೯ ವರ್ಷಗಳಿಂದ ಕೆಲಸಮಾಡಿದ ಶ್ರೀ ಆರ್. ಮುತ್ತೋಜಿರಾವ ಸಿಂಧೆ ಇವರು ತಮ್ಮ ಡಿ. ಎಸ್. ಪಿ. ಪದವಿಗೆ ರಾಜೀನಾಮೆಯಿತ್ತಿರುವರೆಂದೂ ಅದು ಅಂಗೀಕೃತವಾಗಿದೆಯೆಂದೂ ತಿಳಿಯುತ್ತದೆ.

ತಾ. ೧ಕ್ಕೆ ಬೆಂಗಳೂರಲ್ಲಿ ಸೇರಿದ ಮೈಸೂರು ಸಂಸ್ಥಾನದ ಮುಸ್ಲಿಮರ ಸಭೆಯಲ್ಲಿ ಮೈಸೂರಿನ ಮುಸ್ಲಿಮರ ತೊಂದರೆಗಳನ್ನು ಅ. ಭಾ. ಮುಸ್ಲಿಂ ಲೀಗ, ಬ್ರಿಟಿಶ ಮಂತ್ರಿ ಶಿಷ್ಟಾಯಿಗಳಲ್ಲಿ ನಿವೇದಿಸುವದಕ್ಕಾಗಿ ೯ ಜನ ಪ್ರಮುಖರ ಶಿಷ್ಟಮಂಡಲವೊಂದನ್ನು ಕಳಿಸುವ ನಿರ್ಣಯವಾಯಿತು. ಖಾ. ಸಾ. ಅಹಮದ ಶರೀಫ್, ಕಲೀಮ ಉಲ್‌ಮುಲ್ಕ ಗೌಸಮೋಹಿಯುದ್ದೀನ, ಮುಷೀರ ಉಲ್ ಮುಲ್ಕ ಜೆ. ಮಹಮ್ಮದ ಇಮಾಂ ಮುಂತಾದವರು ಶಿಷ್ಟಮಂಡಲದಲ್ಲಿರುವರು.

ಬೆಂಗಳೂರಿನ ಶಿರಸಿ ರೋಡಿನಲ್ಲಿ ಪ್ರಣಯ ಪ್ರಪಂಚದಲ್ಲಿ ಹತಾಶನಾದ ಯುವಕನೊಬ್ಬನು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿದುಬಂದಿದೆ. ಪೋಲೀಸರ ವಿಚಾರಣೆ ನಡೆದಿದೆ.

ಮೈಸೂರು ಸಂಸ್ಥಾನದ ಚನ್ನಪಟ್ಟಣ, ಕಾಡಕಾನಹಳ್ಳಿ, ಕೋಲಾರಪೇಟೆ, ನಾಗಮಂಗಲ, ಶ್ರೀರಂಗಪಟ್ಟಣ, ಹೊಳೆನರಸೀಪುರ, ತರೀಕೆರೆ, ಪಾವಗಡ ಪ್ರದೇಶಗಳ ಒಟ್ಟು ೧೫ ಪ್ರಜಾಪ್ರತಿನಿಧಿ ಸಭಾಸ್ಥಾನಗಳಿಗೆ ಚುನಾವಣೆ ಮೇ ೬ನೆ ತಾರೀಕಿಗೆ ಜರಗುವವೆಂದು ಸರಕಾರ ಆಜ್ಞಾಪಿಸಿದೆ. ಇವುಗಳಿಗೆ ಉಮೇದವಾರಿಕೆಯ ಅರ್ಜಿ ಸಲ್ಲಿಸುವ ಕೊನೆಯ ದಿನ ಎಪ್ರಿಲ ೧೫.

ಬೆಂಗಳೂರು ನಗರದಲ್ಲಿರುವ ವಸತಿ ಮನೆಗಳ ಕೊರತೆ ಮತ್ತು ತಜ್ಜನ್ಯವಾದ ವಿಪರೀತ ಬಾಡಿಗೆ ದರಗಳನ್ನು ಸ್ಥಿಮಿತಕ್ಕೆ ತರುವ ಸಲುವಾಗಿ ಮನೆ ಕಟ್ಟುವ ಅನುಕೂಲವುಳ್ಳವರಿಗೆ ೮೦೦೦ ನಿವೇಶನಗಳನ್ನು ಒದಗಿಸಬೇಕೆಂದು ಬೆಂಗಳೂರು ನಗರ ಸುಧಾರಣೆ ಟ್ರಸ್ಟಿನವರು ನಿರ್ಣಯಿಸಿದ್ದಾರೆ.

ಮೈಸೂರು ಸಂಸ್ಥಾನದಲ್ಲಿಯೂ ಅಡಿಕೆ ಸುಂಕವನ್ನು ಇಳಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲು ಮಲೆನಾಡ ಅಡಿಕೆ ಸಿಂಡಿಕೇಟಿನ ಪ್ರತಿನಿಧಿಗಳು ಆಹಾರ ಸಚಿವರನ್ನು ಭೆಟ್ಟಿಯಾದಾಗ ಬ್ರಿಟಿಶ ಹಿಂದುಸ್ತಾನದಂತೆ ಸಂಸ್ಥಾನದಲ್ಲಿಯೂ ಸುಂಕವನ್ನು ೧ ಆಣೆಗಿಳಿಸಲಾಗುವದೆಂದು ಮಂತ್ರಿ ಹರೀಹರು ಉತ್ತರವಿತ್ತರು.



ಮುಂಬಯಿ ಶೇರಪೇಟೆ

೩-೪-೪೬

ಮುಂಬಯಿ ಶೇರಪೇಟೆಯಲ್ಲಿ ಈ ವಾರ ತೇಜಿ ವ್ಯಾಪಾರಸ್ಥರಿಗೆ ಅಧಿಕ ಲಾಭದ ತೆರಿಗೆಯನ್ನು ಕಿತ್ತಿಹಾಕಿದ್ದರಿಂದ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ತಾತಾ ಸ್ಟೀಲ ಡೆಫರ್ಡ ಪಾಲು ಪುನಃ ಇಂದು ೩೦೦೦ ದ ರೇಖೆಯನ್ನು ದಾಟಿ ೩೦೦೫-೧-೦ ಕ್ಕೇರಿತು. ಡಾಯಿಂಗ ಸಾಲುಗಳು ಕೂಡ ಬಹಳ ಬೆಂಬಲ ಪಡೆದು ೨೪೨೭-೮-೦ ಕ್ಕೆ ಏರಿದವು. ಸ್ವದೇಶಿ ಗಿರಣಿ ಪಾಲುಗಳು ೭೪೯-೦-೦ ಕ್ಕೂ ಗೋಕಾಕ ೩೬೫-೮-೦ ಕ್ಕೂ ಸೆಂಚೂರಿ ೧೦೩೭-೮-೦ಗೂ ಸೆಂಟ್ರಲ್ ಇಂಡಿಯಾ ೪೭೨-೮-೦ ಕ್ಕೂ ಏರಿದವು. ಕೋಹಿನೂರು ಪಾಲುಗಳಿಗೆ ಎಲ್ಲಕ್ಕಿಂತ ಹೆಚ್ಚು ಬೆಂಬಲ ದೊರಕಿತು. ಅದು ೮೨೩-೦-೦ ಕ್ಕೆ ಏರಿದೆ. ಕಳೆದ ವಾರಾಂತ್ಯದಲ್ಲಿ (ತಾ. ೨೯) ಅದು ೭೮೮ ರಲ್ಲಿತ್ತು. ಬೇಲಾಪುರ ಪಾಲು ೨೮೬-೦-೦ ಕ್ಕೇರಿದೆ. ಅಸೋಸಿಯೇಟೆಡ್ ಸಿಮೆಂಟ್ಸ ೨೫೮-೪-೦ ಕ್ಕೇರಿದೆ. ಬ್ಯಾಂಕುಗಳಲ್ಲಿ ಸೆಂಟ್ರಲ ಬ್ಯಾಂಕು ತುಸು ಹೆಚ್ಚಿಕೊಂಡು ೧೨೩-೧೨-೦ ಕ್ಕೂ ಇಂಪೀರಿಯಲ್ ಎಫ್. ಸಿ. ೨೪೮೫-೦-೦ ಕ್ಕೂ ರಿಝರ್ವ ಬ್ಯಾಂಕು ೧೫೯-೦-೦ ಕ್ಕೂ ಏರಿದೆ.

ಜಿ. ಪಿ. ನೋಟುಗಳು ಕಳೆದ ವಾರಕ್ಕಿಂತ ಎಷ್ಟೋ ಸುಧಾರಿಸಿ ೧೦೩-೮-೦ ಕ್ಕೇರಿದರೆ ೩॥% (೧೯೪೫-೫೦)ರ ಸಾಲ ೧೦೩-೬-೦ ರಲ್ಲಿ ಯಥಾಸ್ಥಿತಿಯಾಗಿದೆ.

ಚಿನ್ನ ಬೆಳ್ಳಿ

ಚಿನ್ನದ ಪೇಟೆಯಲ್ಲಿ ಹಿಂದಿನವಾರ ಕಂಡುಬಂದ ಏರಿಕೆಯ ಧೋರಣೆ ಏನೂ ಬದಲಾದಂತಿಲ್ಲ. ಕೇವು ಆಣೆಗಳ ಇಳಿತವನ್ನು ಅದು ಆ ಮೇಲೆ ತೋರಿದರೂ ಪುನಃ ಸುಧಾರಿಸಿಕೊಂಡು ತಾ. ೩ಕ್ಕೆ ರೂ. ೯೮-೮-೦ ಕ್ಕೆ, ಪರಮಾವಧಿಗೇರಿದೆ. ಸಾವರೀನುಗಳ ಬೆಲೆ (ಅಧಿಕೃತವಲ್ಲ) ರೂ. ೬೯-೮-. ಬೆಳ್ಳಿಯ ಧಾರಣೆಯೂ ಏರಿಕೊಂಡು ರೂಪಾಯಿ ೧೬೨-೦-೦ ಕ್ಕೆ (ತಯಾರಿ) ಹೋಯಿತು. ಅದು ೧೬೪-೦-೦ ರ ವರೆಗೂ ಒಮ್ಮೆ ಏರಿತ್ತು. ಚಿನ್ನ ಬೆಳ್ಳಿಗಳ ಪೂರೈಕೆ ಪೇಟೆಯಲ್ಲಿ ಬಹಳ ಕಡಿಮೆಯಿರುವದು.

ಅರಳೆ

ಅರಳೆ ಪೇಟೆ ಈ ವಾರದಲ್ಲಿ ಬಹಳವಾಗಿ ಇಳಿದುಹೋಯಿತು. ಖಂಡಿಗೆ ೯ ರೂಪಾಯಿಯಷ್ಟು ಅದು ಇಳಿದು ಹೋಯಿತು. ಅರಳೆ ನಿಯಂತ್ರಣಾಜ್ಞೆಯನ್ನು ಸರಿಯಾಗಿ ಜಾರಿಯಲ್ಲಿ ತರಲು ಸರಕಾರ ನಿರ್ಧರಿಸಿದೆ. ಅದಕ್ಕಾಗಿ ಅರಳೆ ಕಮೀಶನರರಿಗೆ ಅಧಿಕಾರಗಳನ್ನೀಯಲಾಗಿದೆ. ಸರಕಾರ ಏರಿಕೆಯ ಧೋರಣೆಗೆ ವಿರೋಧಿಯಾಗಿದೆ. ಆದರೂ ವಿದೇಶಿ ಅರಳೆ ಧಾರಣೆ ಹಿಂದೀ ಧಾರಣೆಗಿಂತ ಏರಿಕೆಯಲ್ಲಿರುವದಲ್ಲದೆ ಪೇಟೆಯಲ್ಲಿ ಅರಳೆಯ ಕೊರತೆಯಿದೆ. ಆದ್ದರಿಂದ ಇನ್ನು ಪೇಟೆ ಬಹಳ ಇಳಿಯಲಾರದು. ಮೇ ವಾಯಿದೆ ರೂ. ೪೫೩-೬-೦ ಜುಲೈ ರೂ. ೪೬೩-೧೨-೦, ಸೆಪ್ಟೆಂಬರ ೪೭೦-೮-೦.

ಎಣ್ಣೆಕಾಳು

ಶೇಂಗಾ	ರೂ.	೧೧೧—೦—೦
ಅಗಸಿ	,,	೨೫-೨—೦
ಅಗಸಿಎಣ್ಣೆ	,,	೧೩-೧೩-೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿಮಣ	ರೂ.	೧೪—೧೬
ಅರಿಸಿಣ ಹೇರು	,,	೬೭—೭೮
ಮೆಣಸಿನಕಾಯಿ ಹೇರು	,,	೧೫೦—೧೯೦
ಶೇಂಗಾ (ಖಂಡಿ)	,,	೯೪—೯೬
ಮಿರಜಿ ತಂಬಾಕು (ಹೇರು)		೧೦೦—೨೧೫

ಶಿವಮೊಗ್ಗ

ದೇಶಾವರ ಅಡಿಕೆ ನಂ. ೧ (ಮಣ) ರೂ.	೨೦—೨೫
,, ,, ೨	೧೮-೨೩
ಕೊಪ್ಪ ಶೃಂಗೇರಿ	೧೮-೨೩
ರಾಜ ಅಲವು	೨೦-೨೫
ಬೆಟ್ಟೆ	೧೨॥-೧೩॥
ವಂತಿ	೧೩॥-೧೪॥

ಪೇಟೆ ಒಂದೇ ತರ ಇದೆ.

ಹುಬ್ಬಳ್ಳಿ ಪೇಟೆ

ಅರಳೆ ವ್ಯಾಪಾರಸ್ಥರ ಸಂಪು ಇನ್ನೂ ಸಾಗಿದ್ದರಿಂದ ಪೇಟೆ ಮುಚ್ಚಿದೆ.

ಇಂಗ್ಲಂಡ, ಅಮೇರಿಕೆಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯಲು ಹಿಂದೀ ವಿದ್ಯಾರ್ಥಿಗಳನ್ನು ಕಳಿಸುವ ಹಿಂದುಸ್ತಾನ ಸರಕಾರದ ಏರ್ಪಾಡಿನನ್ವಯ ಮೈಸೂರಿನ ಪರವಾಗಿ ೪೦ ಜನರನ್ನು ಕಳಿಸಲು ನಿರ್ಣಯಿಸಿ ಸರಕಾರದವರು ಅವರ ಹೆಸರುಗಳನ್ನಾರಿಸಿ ತಿಳಿಸಿದ್ದಾರೆಂದೂ ಅವರಲ್ಲಿ ಒಬ್ಬಾಕೆ ಮಹಿಳೆಯೂ ಇರುವಳೆಂದೂ ಗೊತ್ತಾಗಿದೆ.

ಮೈಸೂರು ದಿವಾಣರು ವಾಶಿಂಗಟನ್ನಿನಲ್ಲಿ ಸಂಯುಕ್ತ ಆಹಾರ ಮಂಡಲದ ಸಭೆಯಿಂದ ಮರಳಿಬಂದವರು ದಿಲ್ಲಿಯಲ್ಲಿ ಬೆಂಗಳೂರಿನ "ತಾಯಿನಾಡು" ಪ್ರತಿನಿಧಿಗೆ ಕೊಟ್ಟ ಭೆಟ್ಟಿಯೊಂದರಲ್ಲಿ ತಾವು ಮಂಡಲದ ಮುಂದೆ ಮೈಸೂರಿನ ಬೇಡಿಕೆಯನ್ನು ಪ್ರತ್ಯೇಕವಾಗಿ ಮಂಡಿಸಿಲ್ಲವೆಂದು ಹೇಳಿದರು. ಮೈಸೂರಿನ ಜನರು ಹೆಚ್ಚು ಗೋದಿ ಬಳಸಬೇಕೆಂದೂ ಗೋದಿ ಮತ್ತು ಕಡಲೆ ಸೇರಿಸಿದರೆ ಉತ್ತಮ ಆಹಾರವಾಗುತ್ತದೆಯೆಂದೂ ಅವರು ಅಭಿಪ್ರಾಯಪಟ್ಟರೆಂದು ಪ್ರಕಟವಾಗಿದೆ.

ನಾನ್ ಗಜೆಟೆಡ್ ಸರಕಾರಿ ನೌಕರರ ಸಭೆಯೊಂದು ಬೆಂಗಳೂರಲ್ಲಿ ತಾ. ೨೯ಕ್ಕೆ ಸೇರಿ ತಮ್ಮ ಸಂಬಳದಲ್ಲಿ, ಸದ್ಯದ ಜೀವನ ವೆಚ್ಚವನ್ನು ಲಕ್ಷಿಸಿ, ಕಡಿಮೆಯೆಂದರೆ ನೂರಕ್ಕೆ ೩೦ ರಷ್ಟಾದರೂ ಹೆಚ್ಚಳ ಮಾಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಂಡಿತು.

ಮೈಸೂರು ಸಂಸ್ಥಾನದಲ್ಲಿ ಈಗಿರುವ ಆಹಾರ ಸಂಗ್ರಹ ಜೂನ್ ತಿಂಗಳ ಕೊನೆಯ ವರೆಗೆ ಮಾತ್ರ ಸಾಲುವದೆಂದೂ ಅದರೊಳಗೆ ಹೆಚ್ಚಿನ ಪೂರೈಕೆ ಬಾರದಿದ್ದರೆ ಪರಿಸ್ಥಿತಿಯನ್ನು ಎದುರಿಸುವದು ಕಠಿನವಾಗುವದೆಂದೂ ತಿಳಿಸಲಾಗಿದೆ.

ಸಂಸ್ಥಾನದಲ್ಲಿ ಉಂಟಾದ ಕ್ಷಾಮವನ್ನು ನಿವಾರಿಸಲು ದೈವೀ ಕರುಣೆಯನ್ನೊಲಿಸಬೇಕೆಂದು ವೈದಿಕ ಪರ್ಜನ್ಯ ಯಜ್ಞವನ್ನು ನಡೆಸಬೇಕೆಂದು ವೇದ ಪ್ರಚಾರ ಮಂಡಲಿಯವರು ನಿರ್ಧರಿಸಿ ಸಾರ್ವಜನಿಕ ಸಹಾಯ ಕೋರಿದ್ದಾರೆ.

ನ್ಯಾಯ ಸಚಿವ ಶ್ರೀ ಹರೀಹರ ಅಧ್ಯಕ್ಷತೆಯಲ್ಲಿ ಜರಗಿದ ಮೈಸೂರು ಸರಕಾರದ ಚಿನ್ನದ ಗಣಿ ಸಮಿತಿಯ ಸಭೆಯಲ್ಲಿ ಗಣಿ ಕಂಪನಿಗೆ ೮ ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದು ನಿರ್ಣಯಿಸಿರುವದಾಗಿ ತಿಳಿದು ಬಂದಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ ಪಕ್ಷದ ಮುಂದಾಳಾದ ಶ್ರೀ ಕೆ ಹನುಮಂತಯ್ಯನವರಿಗೆ ಸಾಗರದ ಪ್ರಥಮ ನ್ಯಾಯಾಧೀಶರು ಒಂದು ಭಾಷಣದ ಸಂಬಂಧದಲ್ಲಿ ವಿಧಿಸಿದ್ದ ಒಂದು ವರ್ಷದ ಶಿಕ್ಷೆಯನ್ನು ಅಪೀಲಿನಲ್ಲಿ ಶಿವಮೊಗ್ಗೆಯ ಸೆಶನ್ಸ ನ್ಯಾಯಾಧೀಶರು ಆರು ತಿಂಗಳಿಗಿಳಿಸಿರುವರು.

ದಕ್ಷಿಣ ಕನ್ನಡ

ತಾ. ೨೫ಕ್ಕೆ ಜರಗಿದ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗಡೆಯವರ ಸೂಚನೆಯಂತೆ, ಮಲಬಾರ ಜಿಲ್ಹೆಗೆ ಹೋಗಲಿರುವ ೮ ಸಾವಿರ ಟನ್ ಅಕ್ಕಿಯನ್ನು ಕಳಿಸಿದ್ದಾದರೆ ಜುಲೈ ತಿಂಗಳ ಸುಮಾರಿಗೆ ದಕ್ಷಿಣ ಕನ್ನಡದಲ್ಲಿರುವ ಅಕ್ಕಿ ಸಂಗ್ರಹವೆಲ್ಲ ಮುಗಿದು ಹೋಗಿ ಉಪವಾಸವನ್ನು ಎದುರಿಸುವ ಪ್ರಸಂಗ ಬರಬಹುದಾದುದರಿಂದ ಅಕ್ಕಿಯನ್ನು ಕಳಿಸಬಾರ ದ್ದಲ್ಲವೆಂಬ ಗೊತ್ತುವಳಿಯಾಯಿತು. ಸೀದಾದಲ್ಲಿ ಗೋದಿಯನ್ನು ಕೇವಲ ೨ ಟನ್ನಿನಷ್ಟು ಕಡ್ಡಾಯವಾಗಿ ಕೊಡಕೂಡದೆಂದೂ ಗೇಣಿಗನ ನಿರ್ಯಾತದ ಮೇಲಿನ ಪ್ರತಿಬಂಧವನ್ನು ಹಾಗೆಯೆ ಇಡಬೇಕೆಂದೂ ನಿರ್ಣಯವಾಯಿತು.

ಕಾಸರಗೋಡಿನ ತಳಂಗಲೆಯ ಹತ್ತಿರ ಆರೇಳು ವರ್ಷದ ಮುಸ್ಲಿಮ ಹುಡುಗಿಯೊಬ್ಬಳು ಡಾ. ಪಿ. ವಿಠಲ ಭಂಡಾರಿಯವರ ಕಾರಿನಡಿಗೆ ಬಿದ್ದು ತಕ್ಷಣ ಮೃತಳಾದಳೆಂದು ತಿಳಿಯುತ್ತದೆ.

ದಕ್ಷಿಣ ಕನ್ನಡ ಜಿಲ್ಹೆಯ ಎಲ್ಲ (ಮದ್ರಾಸ) ನ್ಯಾಯವಿಧಾಯಕ ಸದಸ್ಯರಿಗೂ ಮಂಗಳೂರಿನ ಕ್ರೈಸ್ತ ಬಂಧುಗಳು ಸೆಯಿಂಟ್ ಮಿಲಾಗ್ರೆ ಹಾಯಸ್ಕೂಲಿನ ಆವಾರದಲ್ಲಿ ಸತ್ಕಾರಕೂಟವೊಂದನ್ನು ತಾ. ೨೬ ಕ್ಕೆ ಏರ್ಪಡಿಸಿದ್ದರು. ಜಸ್ಟಿಸ ಪಕ್ಷದ ಪ್ರಮುಖ ಸದಸ್ಯರಲ್ಲೊಬ್ಬರಾದ ಮಂಗಳೂರಿನ ಶ್ರೀ ಎಂ. ಎಸ್. ಶ್ರೀಷ್ಟರು ಶ.ಭ್ರ ಖಾದಿಯಿಂದ ಅಚ್ಛಾದಿತರಾಗಿ ಸಮಾರಂಭದ ವ್ಯವಸ್ಥೆಯನ್ನು ನಡೆಸುತಿದ್ದುದು ಪ್ರೇಕ್ಷಣೀಯವೂ ಮಂಗಳೂರಿನ ಕ್ರೈಸ್ತ ಸಮಾಜದ ವಿಚಾರಧಾರೆಯಲ್ಲಿ ಪ್ರಚಂಡ ರಾಷ್ಟ್ರೀಯ ಪರಿವರ್ತನೆಯ ದ್ಯೋತಕವೂ ಆಗಿತ್ತು. ಹಲವು ಕ್ರೈಸ್ತ ಪ್ರಮುಖರು ಭಾಷಣ ಮಾಡಿದರು. ಶ್ರೀ ಎ. ಬಿ. ಶೆಟ್ಟಿ, ಶ್ರೀ ಚಮ್ನಾಡ (ಲೀಗ), ಡಾ. ಮಲ್ಯ ಮೊದಲಾದ ಮಾನ್ಯ ಶಾಸನಸಭಾ ಸದಸ್ಯರು ಸಂದರ್ಭೋಚಿತ ಉತ್ತರಗಳನ್ನು ಕೊಟ್ಟರು.

ಈಗ ಕೆಲದಿನಗಳಿಂದ ತುಟ್ಟಿಭತ್ತೆ ಬೋನಸ್ ಮುಂತಾದವುಗಳ ಬೇಡಿಕೆಯನ್ನು ಮುಂದೊಡ್ಡಿ ಮಂಗಳೂರಿನ ನೇಕಾರರು ಹೂಡಿದ ಸಂಪು ಮಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಮಲ್ಯರ ಮಧ್ಯಸ್ತಿಕೆಯಿಂದ ಇದೀಗ ನಿಲ್ಲಿಸಲ್ಪಟ್ಟಿದೆ. ಕೂಲಿಕಾರರ ಕ್ರಿಯಾ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿಗಳಾದ ಶ್ರೀ ಎಸ್. ಎನ್. ಹೊಳ್ಳ ಮತ್ತು ಬಿ. ವಿ. ಕಕ್ಕಿಲ್ಲಾಯರೂ ಕೈಮಗ್ಗಗಳ ಒಡೆಯರ ಸಂಘದ ಅಧ್ಯಕ್ಷ ಶ್ರೀ ಎ. ಶ್ರೀನಿವಾಸರಾಯರೂ ಶ್ರೀ ಮಲ್ಯರ ತೀರ್ಪನ್ನು ಅಂಗೀಕರಿಸಲು ಒಪ್ಪಿದ್ದಾರೆ. ಶ್ರೀನಿವಾಸ ಮಲ್ಯರು ಬೇಗನೆ ಉಭಯ ಪಕ್ಷಗಳ ಹೇಳಿಕೆಗಳನ್ನು ಕೇಳಿಕೊಂಡು ನಿರ್ಣಯ ಕೊಡುವವರಿದ್ದಾರೆ.

ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಮಿಲಿಟರಿಯವರು ವಶಪಡಿಸಿಕೊಂಡಿದ್ದು ಈಗ ತಿರುಗಿ ಕೊಟ್ಟಿರುವ ಸ್ಥಳಗಳಲ್ಲಿ ಅವರು ಬಿಟ್ಟುಹೋಗಿರುವ ಕೆಲ ವಸ್ತುಗಳ ಸ್ಪರ್ಶದಿಂದ ಕೆಲವರು ವಿಚಿತ್ರ ಬೇನೆಗಳಿಗೊಳಗಾಗಿರುವರೆಂದು ತಿಳಿಯುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ ಶಿಸ್ತನ್ನು ಮೀರಿ ನಡೆದ ಕೆಲವರ ಮೇಲೆ ಕೈಕೊಳ್ಳಬೇಕಾದ ಉಪಾಯಗಳನ್ನು ನಿರ್ಣಯಿಸುವದಕ್ಕಾಗಿ ಶ್ರೀ ಎಂ. ಎಸ್. ಅಧಿಕಾರಿ ಮೊದಲಾದವರನ್ನೊಳಗೊಂಡ ಸಮಿತಿಯೊಂದನ್ನು ಜಿಲ್ಲಾ ಕಾಂಗ್ರೆಸ್ಸು ನೇಮಿಸಿದೆ. ರಚನಾತ್ಮಕ ಕಾರ್ಯಗಳ ಸಂಬಂಧದಲ್ಲಿಯೂ ಒಂದು ಉಪಸಮಿತಿಯನ್ನು ನೇಮಿಸಲಾಗಿದೆ.

ವರ್ಗವಾಗಿ ಹೋಗಲಿರುವ ಜಿಲ್ಲಾ ಕಲೆಕ್ಟರ ಶ್ರೀ ರಾಮದಾಸರನ್ನು ಬೀಳ್ಕೊಡುವ ಮತ್ತು ಹೊಸ ಕಲೆಕ್ಟರ ಶ್ರೀ ರಾಮವರ್ಮ ಅವರನ್ನು ಸ್ವಾಗತಿಸುವ ಸಲುವಾಗಿ ತಾ ೨೪ ಕ್ಕೆ ಮಂಗಳೂರು ಸೆಂಟ್ರಲ್ ಕೋ-ಆಪರೇಟಿವ ಸೊಸಾಯಿಟಿಯ ನಿರ್ದೇಶಕರು ಒಂದು ಸತ್ಕಾರ ಕೂಟ ಏರ್ಪಡಿಸಿದ್ದರು.

ಪುತ್ತೂರಿನ ನೆಟ್ಲ ಎಂಬಲ್ಲಿ ರಥೋತ್ಸವ ಕಾಲದಲ್ಲಿ ರಥದ ಗಾಲಿಯ ಕೆಳಗೆ ಸಿಕ್ಕು ೧೩ ವರ್ಷದ ಹುಡುಗನೊಬ್ಬನು ತಕ್ಷಣ ಮೃತನಾದ ಸುದ್ದಿ ಬಂದಿದೆ.

ಚಿತ್ರ ಕಥೆ

ನೆಳಲ-ಅಳಲು

[ಬರಹಗಾರ:— ಶ್ರೀರಾಮ ಪಾಟೀಲ, ವಿಜಯಪುರ]

"ಅವ್ವಾ ನೀಡಿರಿ."

ಹೊರಗೆ ದನಿ ಕೇಳಿತು. ಶಾಮನು ಕತ್ತೆತ್ತಿ ಕಿಡಕಿಯೊಳಗಿಂದ ಇಣಿಕಿ ನೋಡಿದನು. ಹರ[ಿದ] ಬಟ್ಟೆ, ಮಾಸಿದ ಮೈ, ಕೆದರಿದ ಕೂದಲು, [ಮು]ದುಡಿದ ಮುಖ, ಕೈಯಲ್ಲಿ ಒಂದು ಪಾತ್ರೆ ಹಿಡಿದ ಒಬ್ಬ ತಿರುಕನು ಹೊರಗೆ ಅಂಗಳದಲ್ಲಿ ನಿಂತಿದ್ದನು.

"ಮುಂದಿನ ಮನೆಗೆ!" ಶಾಮ ನುಡಿದನು.

"ಇದೇನು ಸಣ್ಣ ಹುಡುಗರ ಉಪ್ಪಿನ ಆಟ ವಾಯಿತಲ್ಲಾ 'ಮುಂದಿನ ಮನೆಗೆ' ಎನ್ನಲು!" ತೀರ ಪಿಸುಮಾತಿನಲ್ಲಿ ಅಂದರೂ ತಿರುಕನ ಈ ಮಾತು ಶಾಮನಿಗೆ ಕೇಳಿಸದಿರಲಿಲ್ಲ. ಅವನು ಕುರ್ಚಿಯಲ್ಲಿ ಸೆಟೆದು ಕುಳಿತನು. ಆ ತಿರುಕನ ಮುಖ ನೋಡಿದನು. ಹುಟ್ಟುತಿರುಕನ ಹಾಗೆ ತೋರಲಿಲ್ಲ. ಆ ಮುದುಡಿದ ಮೋರೆಯ ಹಿಂದೆ ಅದಾವುದೋ ಒಂದು ಗೋಳುಬಾಳ ಕತೆ ಅಡಗಿರುವಂತೆ ಅವನಿಗೆ ಭಾಸವಾಯಿತು.

"ಮುಂದೆ ಹೋಗು," ಶಾಮ ಗದರಿಸಿದನು.

ತಿರುಕನು ಅಳುಕಿದಂತೆ ಕಾಣಲಿಲ್ಲ "ಹೊಟ್ಟೆ, ತಂದೇ." ಅವನು ಹೊಟ್ಟೆ ತೋರಿಸಿದನು.

"ಏನಾಗಿದೆ ?"

"ನೋಡಿ ಒಳಸೇರಿದೆ."

"ಕೈಹಿಡಿದು ಹೊರಕ್ಕೆಳೆ."

"ಹಾಗೆ ಅದು ಬರೋದಿಲ್ಲ ತಂದೆ."

"ಹೇಗೆ ಬರುತ್ತದೆ ?"

"ಅದನ್ನು ಹೊರಗಿನಿಂದ ಎಳೆದರೆ ಬರೋದಿಲ್ಲ. ಅದನ್ನು ಒಳಗಿನಿಂದ ನೂಕಲಿಕ್ಕೆ ಬೇಕು"

"ಹಾಗೆಯೆ ಮಾಡು."

"ಹಾಗೆ ಮಾಡಲು ಕೈಲಿಂದ ಸಾಧ್ಯವಿಲ್ಲ."

"ಏತರಿಂದ ಸಾಧ್ಯವಿದೆ ?"

"ಅದನ್ನು ಒಳಗಿನಿಂದ ನೂಕಲು ಬಾಯೊಳಗಿಂದ ಅನ್ನ ಕಳುಹಲು ಬೇಕು."

ತಿರುಕನ ಈ ಮಾತಿನಿಂದ ಶಾಮನು ಮನದಣಿ ನಕ್ಕನು. ಅವನ ಆ ವಾಕ್ಯದಲ್ಲಿ ಆ ಒಂದು ನುಡಿಯಲ್ಲಿ ಅವನ ಸ್ವರೂಪ ವಿರೂಪವಾಗಿ ವಿಕಾರವಾಗಿ ವಿಪರೀತವಾಗಿ ಕಂಡಿತು. ಅವನು ತನ್ನ ಮಾತಿನಲ್ಲಿ ಹೊಟ್ಟೆಯು ಹೇಗೆ ಹೊರಕ್ಕೆಬರುವದೆಂಬ ಕಾರಣವನ್ನುಅಷ್ಟೇ ಹೇಳಲಿಲ್ಲ. ಜೊತೆಗೆ ತನಗೆ ಆಹಾರದ ಅವಶ್ಯಕತೆಯೂ ಇದೆಯೆಂದು ವ್ಯಂಗ್ಯವಾಗಿ ಹೇಳಿದನು.

"ನಮ್ಮ ಮನೆಯಲ್ಲಿ ಬಿಕ್ಕೆ ನೀಡುವದನ್ನು ನಿಲ್ಲಿಸಿದ್ದೇವೆ," ಶ್ಯಾಮನು ನುಡಿದನು.

"ಹಾಗಾದರೆ ರೊಕ್ಕ ಕೊಡಿರಿ."

ತಿರುಕನೇನೋ ಹಣಿಯುವಂತೆ ತೋರಲಿಲ್ಲ. ಇವರ ಮನೆಯೊಳಗಿಂದ ಏನಾದರೂ ತಕ್ಕೊಂಡು ಹೋಗಬೇಕೆಂಬ ಪಣಮಾಡಿಕೊಂಡು ಬಂದಂತೆ ಶ್ಯಾಮನಿಗೆನ್ನಿಸಿತು.

"ರೊಕ್ಕ ತಕ್ಕೊಂಡು ಏನು ಮಾಡುತ್ತೀ ?"

ತಿರುಕನು ಒಮ್ಮೆಲೇ ಉತ್ತರವೀಯಲಿಲ್ಲ. ಅವನ ನಾಲಿಗೆಯು ಮೇಲೆ ಏನೋ ಒಂದು ಮಾತು ಕುಣಿಯುತ್ತಿತ್ತು. ಅದನ್ನವನು ಆಡಬೇಕೆಂದು ಮಾಡುತ್ತಿದ್ದನು, ಮತ್ತೆ ತಡೆಯುತ್ತಿದ್ದನು.

"ತಿಕೀಟು ಕೊಳ್ಳುತ್ತೇನೆ" ಅವನು ಕೊನೆಗೆ ಅಂದನು. ಆದರೆ ಅವನ ಮಾತುಗಳಿಂದ ಅವನು ಏನೋ ಮಾಡುತ್ತಿರುವಂತೆ ಕಂಡಿತು.

"ತಿಕೀಟು !" ಶ್ಯಾಮನಿಗೆ ನಿಜವಾಗಿಯೂ ಬೆರಗಾಗಿತ್ತು. "ತಿಕೀಟು ತಗೊಂಡು ಏನು ಮಾಡುತ್ತೀ?"

"ಹೆಂಡತಿಗೆ ಓಲೆ ಬರೆಯುತ್ತೇನೆ."

ಶ್ಯಾಮನಿಗೆ ಇನ್ನೂ ಅಚ್ಚರಿಯಾಯಿತು. ತಿರುಕನು ಹುಚ್ಚನಿರಬೇಕೆಂದು ಅವನಿಗೆನಿಸಿತು. ಆದರೆ ಮುಖದ ಮೇಲೆ ಹುಚ್ಚರ ಕಳೆ ಇರಲಿಲ್ಲ.

"ಹೆಂಡತಿಗೆ ಓಲೆ ಬರೆಯುತ್ತೀಯೋ ? ಏನು ಹೆಂಡ ಕುಡಿಯುತ್ತೀಯೋ ?" ಶಾಮ ಅಂದನು.

ತಿರುಕನ ಮುಖವು ಒಮ್ಮೆ ತಿಳಿಯಾಯಿತು. ಅದರ ಮೇಲೆ ಒಂದು ವಿಧದ ನಿರ್ಧಾರದ ಕಳೆ ತೇಲಿಹೋಯಿತು. ಫಕ್ಕನೇ ಒಮ್ಮೆ ಕಣ್ಣು ಮಿಣುಕಿದವು. ಆ ಮೇಲೆ ಅವನು ಶಾಮನನ್ನು ನೋಡಿದನು. "ನೀನು ನನಗೊಂದು ದಾರೀ ತೋರಿಸಿದೆ. ನಿನಗೆ ನಾನು ಚಿರಋಣಿ." ಎಂಬ ಕೃತಜ್ಞತೆಯ ಭಾವವಿತ್ತು ಆ ಕಣ್ಣುಗಳ ಹೊಳಪಿನಲ್ಲಿ. ಹುಸು ಹೊತ್ತಿನಲ್ಲಿಯೇ ಮತ್ತೆ ಅಲ್ಲಿ ಮುದುಡಿದ ಮುಖ ಕಾಣಿಸಿಕೊಂಡಿತು.

"ಅಹುದು ತಂದೆ" ಎಂದನು ತಿರುಕನು.

ಏನು ತನ್ನ ನಿರ್ಧಾರಕ್ಕೆ ಸಮ್ಮತಿಸಿದನೋ, ಇಲ್ಲವೇ ತಾನು ಹೆಂಡ ಕುಡಿಯುವದು ನಿಜವೆಂದನೋ, ಇಲ್ಲವೇ ತಾನು ಹೆಂಡತಿಗೆ ಓಲೆ ಬರೆಯುವದು ನಿಶ್ಚಿತವೆಂದನೋ ಶ್ಯಾಮನಿಗೆ ಒಂದೂ ತಿಳಿಯಲಿಲ್ಲ. ಅವನಿಗೆ ಆ ತಿರುಕನ ರೀತಿಯೇ ಒಂದು ತೆರನಾಗಿ ಕಂಡಿತು.

"ರೊಕ್ಕ ಏನೂ ಇಲ್ಲ. ಅಕ್ಕಿ ಬೇಕಾದರೆ ಹಾಕುತ್ತೇನೆ ನಿಲ್ಲು" ಎನ್ನುತ್ತ ಶ್ಯಾಮ ಒಳಕ್ಕೆ ಹೋದನು. ಒಳಗೆ ಹೋಗಿ ಅವನು ಹೆಂಡತಿಗೆ "ಅಕ್ಕಿ ಎಲ್ಲಿದೆ ?" ಎಂದು ಕೇಳಿದನು.

"ನನಗೆ ಗೊತ್ತಿಲ್ಲ" ಆಕೆ ನುಡಿದಳು.

ಬೆಳಗಿನ ಮುನಿಸು !

ಶಾಮನು ಅವಳ ಮುನಿಸಿಗೆ ಎಡೆಕೊಡುವ ಪರಿಸ್ಥಿತಿಯಲ್ಲಿ ಆಗ ಇರಲಿಲ್ಲ. ಅವನು ನೇರವಾಗಿ ಉಗ್ರಾಣಕ್ಕೆ ಹೋದನು. ಏಳೆಂಟು ಡಬ್ಬಿಗಳನ್ನು ಹುಡುಕಿ ಕಡೆಗೆ ಅಕ್ಕಿಯ ಡಬ್ಬಿಯನ್ನು ತೆರೆದು ಒಂದು ಹಿಡಿ ಅಕ್ಕಿಯನ್ನು ಕೈಯಲ್ಲಿ ತೆಗೆದುಕೊಂಡು ಡಬ್ಬಿಯ ಬಾಯಿಯನ್ನು ಹಾಗೇ ತೆರೆದು ತಲೆಬಾಕಿಲಕ್ಕೆ ಬಂದನು. ತಿರುಕನು ಹೋಗಿಬಿಟ್ಟಿದ್ದನು. ಶ್ಯಾಮನು ಮೆಟ್ಟಿಲುಗಳನ್ನಿಳಿದು ಬೀದಿಗೆ ಬಂದನು. ಎಡಕ್ಕೂ ಬಲಕ್ಕೂ ನೋಡಿದನು. ಬಲಕ್ಕೆ ದೂರದಲ್ಲಿ ಅವನು ಒತ್ತರದಿಂದ ಸಾಗಿರುವಂತೆ ಕಾಣಿಸಿತು. ಶ್ಯಾಮನು ಅವನನ್ನು ಕೂಗಿದನು. ತಿರುಕನು ಬರಲಿಲ್ಲ. ಬರಿ ಹೊರಳಿ ನೋಡಿ ಒಂದು ನಗೆ ನಕ್ಕನು ಮಾತ್ರ. "ನೀವು ದಾರಿ ತೋರಿಸಿದುದು ಅಕ್ಕಿ ನೀಡುವದಕ್ಕಿಂತ ಹೆಚ್ಚಿದೆ," ಎನ್ನುವ ಭಾವವಿತ್ತೋ ಏನೋ ಆ ನಗೆಯಲ್ಲಿ.

ಶಾಮ ಅವನು ಕಾಣುವ ವರೆಗೂ ನೋಡಿದನು. ಮುಂದೆ ದಾರಿ ಹೊರಳಿತ್ತು. ಶಾಮನು ಒಂದು ನಿಟ್ಟುಸಿರು ಬಿಟ್ಟು ಮೆಲ್ಲಡಿಯಿಡುತ್ತ ಒಳಕ್ಕೆ ಹೋದನು.

ಕೋಣೆಯೊಳಗೆ ಸೇರಿ ಮತ್ತೆ ಕುರ್ಚಿಯ ಮೇಲೆ ಕುಳಿತನು. ಕೈಯಲ್ಲಿ ಇರುವ ಅಕ್ಕಿಯನ್ನು ಎದುರಿಗೆ ಮೇಜಿನ ಮೇಲೆ ಸುರುವಿದನು. ಅಕ್ಕಿ ಅರಕೊಳಿವೆ ಇರಬಹುದು. ಇದರಿಂದ ಒಬ್ಬನ ಹೊಟ್ಟೆ ತುಂಬುವದೇ ? ಆದರೂ ತನ್ನ ಹಾಗೆ ಬಿಕ್ಕೆ ನೀಡುವವರೆಷ್ಟೋ ಜನ. ಹೀಗೆ ದೊರಕಿದ ಅಕ್ಕಿಯಿಂದ ಅವರು ಅನ್ನಮಾಡಿಕೊಳ್ಳಬೇಕಲ್ಲವೇ ? ತನ್ನ ಹಾಗೆ ಅವನ ಹೆಂಡತಿ ಅವನು ತಿರುಪೆ ಬೇಡಿ ಬರುವದರೊಳಗೆ ಅಡಿಗೆ ಮಾಡಿ ಇಡಬಹುದೇ ? ಅವನಿಗೆ ಹೆಂಡತಿ ಇರುವಳೇ ? ಹೆಂಡತಿಗೆ ಓಲೆ ಬರೆಯುವೆನೆಂದು ತಿರುಕ ನುಡಿದನು. ಅವಳು ಎಲ್ಲಿ ಇರಬಹುದು ? ತಿರುಕ ಹಾಕಿದ ಓಲೆ ಆಕೆಗೆ ಹೇಗೆ ಮುಟ್ಟಬಹುದು ? ಹಾಗೆ ಓಲೆ ಹಾಕಿದರೆ ಮುಟ್ಟಲಿಕ್ಕಿಲ್ಲವೆಂದು ಈಗ ತಾನೇ ಕರೆಯಲು ಹೋದನೇ ? ಎಲ್ಲಿಗೆ ಹೋದನು ? ತನ್ನ ಮನೆಗೆ ಬಿಕ್ಕೆ ಬೇಡಲಿಕ್ಕೆ ಬಂದನು. ಬಂದಕೂಡಲೇ ತಾನು ಹಾಕಿದ್ದರೆ ಅವನು ಬಿಕ್ಕೆ ತಕ್ಕೊಳ್ಳುತ್ತಿದ್ದಿಲ್ಲವೆ ? ಅಷ್ಟು ಮಾತನಾಡಿ ಕೊನೆಗೆ ನೀಡಲು ಅಣಿಯಾದೆನು. ಅವನು ತೆಗೆದುಕೊಳ್ಳಲಿಲ್ಲ. ಅಷ್ಟು ಅನ್ನಿಸಿಗೊಂಡು ಇವರ ಕೈಯಿಂದ ಏಕೆ ನೀಡಿಸಿಕೊಳ್ಳಬೇಕು ಎಂದು ಅವನಿಗೆನಿಸಿತೇ ? ನಾನು ಬೈದು ಬಿಕ್ಕೆ ನೀಡಿದರೆ ಅದನ್ನು ತೆಗೆದುಕೊಳ್ಳಲು ಅವನಿಗೆ ಅಭಿಮಾನ ಸಾಲಲಿಲ್ಲವೇ ? ಬಿಕ್ಕೆ ಬೇಡುವವರಿಗೂ ಅಭಿಮಾನ ವಿರುತ್ತದೆಯೇ ? ಅವನು ಏಕೆ ಹೋದ ? ಎಲ್ಲಿ ಹೋದ ? ಏತಕ್ಕೆ ಹೋದ ? ತಾನು ನೀಡದಿದ್ದರೇನಾಯಿತು, ಬೇರೆ ಮನೆಗಳ ಎದುರಿಗಾದರೂ ನಿಂತು ಏಕೆ ಬೇಡಲಿಲ್ಲ? ಅಷ್ಟು ಒತ್ತರದಿಂದ ಅವನು ಎಲ್ಲಿಗೆ ಹೋದನು? ಅವನು ನನ್ನನ್ನು ನೋಡಿ ನಕ್ಕನೇಕೆ ? ಶಾಮನಿಗೆ ಏನೂ ತಿಳಿಯಲಿಲ್ಲ. ಎಲ್ಲವೂ ಕೇಳುಗಳೇ; ಒಂದಕ್ಕೆ ಕೂಡ ನುಡಿ ದೊರಕಲಿಲ್ಲ.

ಅವನ ಮನಸ್ಸು ವ್ಯಗ್ರವಾಗಿತ್ತು. ಆ ದಿನ ನಡೆದ ಘಟನೆಗಳಿಂದ ಅವನ ಮನ ಮಿಡುಕುತಿತ್ತು. ಮುಂಜಾನೆಯ ಘಟನೆ ಕೂಡ ಇದೇ ರೀತಿ ಅವನ ಮನವನ್ನು ಹಿಂಡಕ್ಕಟ್ಟಿತ್ತು, ಹಿಮ್ಮೆಟ್ಟಿಸಿತ್ತು.

ಮುಂಜಾನೆ ಅವನ ಹೆಂಡತಿ "ನಾನು ಊರಿಗೆ ಹೋಗುತ್ತೇನೆ" ಎಂದಳು. ಅದಕ್ಕೆ ಶಾಮನು, "ಈಗ ಮನೆಯಲ್ಲಿ ತಾಯಿ ಕೂಡ ಇಲ್ಲ ಆಕೆ ಬಂದ ಕೂಡಲೆ ನೀನು ಬೇಕಾದಷ್ಟು ದಿನ ಹೋಗಿ ಬಾ" ಎಂದನು. ಆಕೆ ಕೇಳಲಿಲ್ಲ. ಶಾಮನು ಕಳುಹಿಕೊಡಲು ಒಪ್ಪಲಿಲ್ಲ. ಆಕೆ ಅಬಚಿಯ ಮಗಳ ಮದುವೆ, ಹೇಗೆ ನಿಲ್ಲಬೇಕು ಎಂದಳು. ಅವನು ತನ್ನ ಅಣ್ಣನ (ಕಕ್ಕನ ಮಗ) ಮದುವೆಗೆ ಹೋಗದಿದ್ದುದನ್ನು ತೋರಿಸಿದನು. ಆದರೂ ಆಕೆ ಕೇಳಲಿಲ್ಲ ಹೋಗುತ್ತೇನೆ ಎಂದೇ ಹಟ ಹಿಡಿದಳು. ಕಡೆಗೆ ಶಾಮನೇ ಸೋತು ಮೂರು ದಿನ ಹೋಗಲಿಕ್ಕೆ ಒಪ್ಪಿದನು. ಅದಕ್ಕೆ ಆಕೆ ಒಡವೆ ಬೇಡಿದಳು ಸರಿಗೆ ಬಿಟ್ಟು ಎಲ್ಲ ಒಡವೆ ಕೊಟ್ಟನು. ಆಕೆ ಅದೂ ಬೇಕೆಂದಳು. ಏನು ದೊಡ್ಡ ಮದುವೆ, ಬೇಡ ಎಂದನು. ಆಕೆ ಬಿಡಲಿಲ್ಲ. ಅತ ಕೊಡಲಿಲ್ಲ. ಕಡೆಗೆ ರೇಗಿದಳು. ಭುಸುಗುಟ್ಟಿದಳು. ಈ ಒಡವೆಗಳಾದರೂ ಏತಕ್ಕೆ ಬೇಕು ಎಂದು ತೆಗೆದುಕೊಡಹತ್ತಿದಳು. ಶಾಮನು ಸರಿಗೆ ತಂದುಕೊಟ್ಟನು. ಆಕೆ ಅದನ್ನು ದೂರ ಬಿಸುಡಿದಳು. ಅದು ನೆಗ್ಗಿ ಹೋಯಿತು. ಆದರೂ ಆಕೆ ಊರಿಗೆ ಹೋಗುವದನ್ನು ರಹಿತಮಾಡಿರಲಿಲ್ಲ. ಅದೇ ಸಂಜೆಗೇ ಒಂಬತ್ತಕ್ಕೇ ಹೋಗುವವಳಿದ್ದಳು.

ಅವನ ಮನವು ಬರಿದಾಗಿತ್ತು. ಅವನ ಮೆದುಳಿನಲ್ಲಿ ಎಲ್ಲಿಯೋ ಒಂದು ಮುಳ್ಳು ನೆಟ್ಟಂತಾಗಿ ಅದನ್ನಾರೋ ಕೈಹಿಡಿದು ಅಳಕಿಸುವಂತೆ ಅವನ ಮನಸ್ಸು ನಡುಗುತ್ತಿತ್ತು, ಅಳುತ್ತಿತ್ತು. ಅದೇನೋ ಒಂದು ವೇದನೆಯಾದಂತಾಗಿ ಅವನ ಹೃದಯವು ಕೊರಗುತ್ತಿತ್ತು, ನರಳುತ್ತಿತ್ತು.

ಅವನು ಬೇಗನೆದ್ದು ಅರಿವೆ ತೊಟ್ಟುಕೊಂಡು ಹೊರಗೆ ಹೊರಟನು. ಅಗಲೇ ಸಂಜೆಯಾಗಿತ್ತು ಕೆಲಸ ತೀರಿಸಿಕೊಂಡು ಜನರು ತಮ್ಮ ತಮ್ಮ ಮನೆಗೆ ಬರುತ್ತಿದ್ದರೆ, ಕೆಲಸವಿಲ್ಲದಿದ್ದರೂ ಶ್ಯಾಮನು ಮನೆಯಿಂದ ಹೊರಗೆ ಹೋಗುತ್ತಿದ್ದನು. ಪಕ್ಷಿಗಳು ದೂರದಲ್ಲಿ ಉಲಿಯುತ್ತಿದ್ದವು. ಎಷ್ಟೋ ಕಡೆಗೆ ಅವು ತಮ್ಮ ತಮ್ಮ ಗೂಡುಗಳನ್ನು ಅರಸಿಕೊಂಡು ಹೋಗುತಿರುವಂತೆ ಕಾಣಿಸಿತು.

ಅವನು ಹೋಗುತ್ತಿರುವ ದಾರಿಯ ಒಂದು ಬದಿಗೆ ಒಂದು ಹೆಂಡದಂಗಡಿ ಹತ್ತಿತು. ಎಷ್ಟೋ ಜನರು ಒಳಕ್ಕೆ ಹೋಗುತ್ತಿದ್ದರು, ಹೋಗಿ ಹೆಂಡ ಕುಡಿದು ಬಾಯಿ ಹೊಲಸು ನಾರಿಸಿಗೊಳ್ಳುತ್ತ ನಿಂತಲ್ಲಿ ನಿಲ್ಲಲಾರದೇ, ನಡೆಯಲು ಬಾರದೇ ಹುಟ್ಟು ಒಂದು ವರುಷದ ಕೂಸಿನಂತೆ ಜೋಲಿ ಹೊಡೆಯುತ್ತ ಹೊರಕ್ಕೆ ಬರುತ್ತಿದ್ದರು. ನಗುತ್ತ ಕಲೆಯುತ್ತ ಜೇಬಿನೊಳಗಿನ ರೊಕ್ಕ ಬಾರಿಸುತ್ತ ಒಳಕ್ಕೆ ಹೋಗುತ್ತಿದ್ದವರು ಹೊರಗೆ ಬರುವಾಗ್ಗೆ ಜೋಲು ಮುಖ ಹಾಕಿಕೊಂಡು ಜೇಬಿನಲ್ಲಿಯ ರೊಕ್ಕದ ಪರಿವೆಯಿಲ್ಲದೆ ಶಕ್ತಿಹೀನರಾಗಿ ತೊದಲು ನುಡಿಯುತ್ತ ಹೊರಕ್ಕೆ ಬರುತ್ತಿದ್ದರು. ಒಳಗೆ ಹೋಗುವಾಗಿನ ನಗೆ ಅಳಿಸಿ ಹೋಗಿ ಅದರ ಬದಲು ಒಂದು ಹುಚ್ಚುಕಳೆ ತೇಲಿಸಿಕೊಂಡು ಬರುತಿದ್ದರು.

ಶಾಮನು ಒಳಗೆ ನೋಡಿದನು. ಅಗಲೇ ನೋಡಿದ ತಿರುಕನೂ ಅಲ್ಲಿದ್ದಂತೆ ಅವನಿಗೆ ಕಂಡಿತು. ಅವನು ನಿಟ್ಟಿಸಿ ನೋಡಿದನು. ತಿರುಕನ ಹಾಗೆ ಕಾಣುತ್ತಿದ್ದ ವ್ಯಕ್ತಿಯು ಮರೆಯಾಗಿ ಕಾಣವಾದನು. ಅಲ್ಲಿದ್ದ ಜನರೊಳಗೆ ಬೆರೆತು ಹೋದನು. ಶಾಮನು ಅದು ಭಾಸವೇ ಇರಬಹುದೆಂದು ತಿಳಿದುಕೊಂಡನು. ಇನ್ನು ಅಲ್ಲಿ ನಿಲ್ಲುವದು ತರವಲ್ಲವೆಂದು ಬೇಗ ಬೇಗ ಹೆಜ್ಜೆಯಿಡುತ್ತ ಮುಂದೆ ಸಾಗಿದನು.

ಅವನು ಹಾಗೆಯೇ ಮುಂದೆ ಸಾಗಲಾಗಿ ಎದುರಿಗೆ ಗ್ಲೋಬ ಚಿತ್ರಪಟವಿದ್ದಿತು. ಅವನ ಮನಸ್ಸೂ ವ್ಯಗ್ರವಾಗಿತ್ತು. ಅದಕ್ಕೆ ಅವನು ಜೇಬಿನಲ್ಲಿ ಕೈ ಹಾಕಿದನು. ಬರೀ ಎರಡಾಣೆ ಇದ್ದವು. ನಾಳೆ ಹೋದರಾಯಿತೆಂದು ಅವನು ಮುಂದೆ ಸಾಗಿದನು.

ಗ್ಲೋಬ ಚಿತ್ರಗೃಹವನ್ನು ಬಲಕ್ಕೆ ಹಾಕಿಕೊಂಡು ಎದುರಿಗೆ ಹೋದರೆ ಮುಂದೆ ಬಲಕ್ಕೆ ಗಿಡಗಳ ಗುಂಪಿನೊಳಗೆ ಅಸದಖಾನನ ದರ್ಗಾ ಇದೆ. ಅದರ ಎದುರಿಗೇ ಎಡಬದಿಗೆ ಒಂದು ತ್ರಿಕೋಣ ಬೈಲಿದೆ. ಶಾಮ ಅಲ್ಲಿ ಹೋಗಿ ಕುಳಿತನು.

ಬೈಲು ಅಷ್ಟೇನೂ ದೊಡ್ಡದಲ್ಲ. ಆದರೂ ಒಬ್ಬಿಬ್ಬರು ಅಲ್ಲಲ್ಲಿ ವಿರಲವಾಗಿ ಕುಳಿತಿದ್ದರು. ಶಾಮನು ಕುಳಿತ ಹದಿನೈದು ನಿಮಿಷಕ್ಕೆ ಅವರೂ ಎದ್ದು ಹೋದರು. ಆ ಮೇಲೆ ಅಲ್ಲಿ ಶಾಮನೇ ಶಾಮ!

ಕತ್ತಲೆಯು ಕವಿಯಹತ್ತಿತು. ಗಿಡಗಳ ಸಾನ್ನಿಧ್ಯದಿಂದ ಅದು ಮತ್ತಿಷ್ಟು ಭಯಾನಕವಾಗಿತ್ತು. ಜೀರುಂಡೆಗಳ ಜುಯ್ಯೆಂಬ ಅವಿರತರವವು ಸುತ್ತಲಿನ ಶಾಂತತೆಯಲ್ಲಿ ಕಿವಿಯನ್ನು ಗಡಚಿಕ್ಕುವಂತೆ ಭೇದಿಸುತ್ತಿತ್ತು. ಸಮೀಪದಲ್ಲಿಯೇ ಸೈನ್ಯಖಾತೆಯ ಬಿಡಾರದಲ್ಲಿ ಕುಣಿತದ ಮಧುರ ಸಂಗೀತವು ಫಕ್ಕನೇ ಹೊರಡುವ ನಗೆಯ ಬುದ್ಬುದದೊಡನೆ ಹರಿಯುತ್ತಿತ್ತು. ಅಧಿಕಾರಿಗಳ ವಸತಿಗಳೊಳಗಿನ ದೀವಿಗೆಗಳ ವಿರಲವಾದ ಪ್ರಭೆಯು ಭೀಕರ ಕತ್ತಲೆಯ ಮನೆಗೆ ಮಣಿದೀಪದಂತೆ ಬೆಳಗುತ್ತಿದ್ದಿತು.

ಶಾಮನು ಅಲ್ಲಿ ಎಷ್ಟು ಹೊತ್ತು ಕುಳಿತನೋ ತಿಳಿಯದು. ಅವನು ಎದುರಿಗೆ ನೋಡಲು ಒಂದು ಮೂರ್ತಿಯು ಜೋಲಿ ಹೊಡೆಯುತ್ತ ನಡೆದಿತ್ತು. ಹೆಂಡಕುಡಕನಿರಬೇಕೆಂದು ಶಾಮನು ಬಗೆದನು. ಅವನು ಜೋಲಿ ಹೊಡೆಯುತ್ತ ಕಡೆಗೆ ಬದಿಯಲ್ಲಿಯ ಗಟಾರದಲ್ಲಿ ದೊಪ್ಪನೇ ಬಿದ್ದನು. ಶ್ಯಾಮನು ಓಡುತ್ತ ಅಲ್ಲಿಗೆ ಹೋದನು. ಸುತ್ತಲೂ ಗಿಡಗಳಿದ್ದುದರಿಂದ ಕತ್ತಲೆಯು ದಟ್ಟವಾಗಿತ್ತು. ಅವರಲ್ಲಿ ಬಿದ್ದವನ ಬಟ್ಟೆಗಳು ಅದ್ದಿದಂತಾಗಿದ್ದವು. ಶ್ಯಾಮನು ಕಡ್ಡಿ ಕೊರೆದು ಅವನ ಮುಖ ನೋಡಿದನು. ಕೂಡಲೆ ಬೆಚ್ಚಿ ಬೆದರಿ ಒಂದಡಿ ಹಿಂದಕ್ಕೆ ಇಟ್ಟನು.

ಅದು ಆ ತಿರುಕನ ಮುಖವಾಗಿತ್ತು!

ಅವನ ಮುಖದಿಂದ ಹೆಂಡದ ವಾಸನೆ ಇಡುಗಿತ್ತು. ಅವನು ಹಾಗೇ ನೋಡುತ್ತಿರಲು ಅವನ ನಡದಲ್ಲಿ ಒಂದು ಕಾಗದದ ಸುರಳಿ ಕಂಡಿತು. ಅದನ್ನವನು ಹಿರಿದನು. ಅದರಲ್ಲಿ ಎರಡು ಹಾಳೆಗಳಿದ್ದವು. ಒಂದು ಬಂದಿದ್ದು ಇನ್ನೊಂದರ ಮೇಲೆ ಏನೋ ಬರೆದಂತಿತ್ತು. ಕಡ್ಡಿ ಆರಿಹೋಯಿತು. ಅವನು ಇನ್ನೊಂದು ಕಡ್ಡೀ ಕೊರೆದು ಅದರ ಮಂದಪ್ರಕಾಶದಲ್ಲಿ ಬರೆದ ಹಾಳೆಯನ್ನು ನೋಡಿದನು. ಆರಂಭಕ್ಕೆ ದೊಡ್ಡಕ್ಕರಗಳಿಂದ,

"ನೆಳಲ-ಅಳಲು"

ಎಂದು ಬರೆದಂತಿತ್ತು. ಅದನ್ನು ಹಾಗೇ ನೋಡುತ್ತಿರಲು ಅದೊಂದು ಕಿರುಗತೆ ಇರಬೇಕೆಂದು ಅವನಿಗೆನಿಸಿತು. ಶಾಮನು ಅದನ್ನು ಮುದುಡಿಸಿ ಜೇಬಿನಲ್ಲಿ ತುರುಕಿ ಕೆಳಕ್ಕೆ ಬಗ್ಗಿದನು.

ತಿರುಕನ ಹೊಟ್ಟೆಯ ಮೇಲಿರುವ ಅಂಗೀ ತೆರೆದು ನೋಡಲು ಅದು ತಣ್ಣಗಾಗಿತ್ತು. ಶ್ಯಾಮನಿಗೆ ದಿಗಿಲಾಯಿತು. ಅವನಿಗೆ ಏನು ಮಾಡಬೇಕೆಂಬುದೇ ಮೊದಲು ತಿಳಿಯಲಿಲ್ಲ. ಒಂದು ಹನಿ ಕಣ್ಣೀರು ಮಿಡಿದು ಈಚೆಗೆ ಬಂದನು. ಹತ್ತಿರದಲ್ಲಿಯೇ ಇರುವ ಪೋಲೀಸ ಪಡೆಗೆ ಸುದ್ದಿ ತಿಳುಹಿದನು.

* * *


ಅವನು ಮನೆಗೆ ಬರಬೇಕಾದರೆ ತೀರ ಹೊತ್ತಾಯಿತು. ಕೋಣೆಯಲ್ಲಿಯ ದೀವಿಗೆಯು ಮಿಣಿಮಿಣಿಯಾಗಿ ಉರಿಯುತ್ತಿತ್ತು. ಅದನ್ನವನು ಏರಿಸಿದನು. ಅರಿವೆಯನ್ನು ಕಳೆದು ಗೂಟಕ್ಕೆ ನೇತುಹಾಕಿ ಜೇಬಿನಲ್ಲಿಯ ಆ ಕಾಗದದ ಸುರುಳಿಯನ್ನು ತೆಗೆದುಕೊಂಡು ಕುರ್ಚಿಯ ಮೇಲೆ ಕುಳಿತು ಓದಹತ್ತಿದನು.

ನೆಳಲ-ಅಳಲು

"ಅಷ್ಟಷ್ಟೇ ಎತ್ತರದ ಮೇಲೆ ಎರಡು ದೀವಿಗೆಗಳು ಉರಿಯುತ್ತಿದ್ದವು. ಒಂದು ದೀವಿಗೆಯ ಕೆಳಗಿನ ನೆಳಲನ್ನು ಇನ್ನೊಂದು ದೀವಿಗೆಯು ಅಳಿಸುತ್ತಿತ್ತು. ಅದ್ದರಿಂದ ಅಲ್ಲಿ ಕತ್ತಲೆಯ ಸುಳಿವಿರಲಿಲ್ಲ.

ಅದೇನೋ ಕಾರಣದಿಂದ ಒಂದು ದೀವಿಗೆಯ ಎತ್ತರ ತಗ್ಗಿತು. ಅದರ ಕೆಳಗಿನ ನೆಳಲನ್ನು ಅಳಿಸಲು ತಗ್ಗದ ದೀವಿಗೆಯು ಕೈಲಾಗಲಿಲ್ಲ.

(೧೬ ನೇ ಪುಟ ನೋಡಿರಿ)



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಥಿಟೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಏಪ್ರಿಲ ೮ ರಿಂದ ೧೫ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಅನುಕೂಲ. ಆದರೆ ಮಕ್ಕಳದು ಮಾತ್ರ ಕೆಡುವದು. ಬಗೆಬಗೆಯ ಕುತರ್ಕಗಳಿಂದ ಮನಸ್ಸು ಗೊಂದಲದಲ್ಲಿ ಬೀಳುವದು. ಎಲ್ಲ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಕೇವಲ 'ಹೆಸರಿಗೆ' ಮಾತ್ರ. ಬಂಧುವರ್ಗದವರಲ್ಲಿಯ ಒಬ್ಬರು ನಿಮ್ಮ ಮೈಮೇಲಿನ ನೀರು ಇಳಿಸುವರು. ಉದ್ಯೋಗದಲ್ಲಿ ಲಾಭ ಅನುಕೂಲ ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚಿದ್ದರೂ ಯಶಸ್ಸಿನ ಒಲವು ನಿಮ್ಮ ಕಡೆಗೇ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಸ್ವಲ್ಪ ಮಟ್ಟಿಗೆ ಅನುಕೂಲ. ಅಶ್ವಿನಿಯ ಕೊನೆಯ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ. ೮, ೧೨, ೧೩ ಅನುಕೂಲ.

ವೃಷಭ

ಪ್ರಕೃತಿಗೆ ಅಲ್ಪಸ್ವಲ್ಪ ಅಸಮಾಧಾನವೆ. ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಒಂದು ಅನಪೇಕ್ಷಿತ ಕಾರಣಕ್ಕಾಗಿ ಸಹವಾಸದಲ್ಲಿ ಅಂತರ. ಮಕ್ಕಳಲ್ಲಿ ಕೆಲ ಒಳ್ಳೆ ಸಂಗತಿಗಳು. ಗೃಹಸುಖ ಕಡಮೆ ದೊರೆತರೂ ಪ್ರಾಪಂಚಿಕ ಉತ್ಕರ್ಷದ ಒಂದು ಸಂಗತಿ ಸಂಭವಿಸುವದು. ಉದ್ಯೋಗದಲ್ಲಿ ಪ್ರಗತಿ ಮಂದ; ಆದರೆ ಲಾಭ ತುಂಬ ಉಂಟಾಗಿ ಪ್ರತಿಷ್ಠೆ ಬೆಳೆವುದು. ಮಿತ್ರಸುಖ ಉತ್ತಮ. ನಿರರ್ಥಕ ಮತ್ತು ವ್ಯಸನದಲ್ಲಿ ವೆಚ್ಚ ಹೆಚ್ಚು. ಅದರಂತೆ ಕೆಲ ದಾನಶೂರರ ಕೃತ್ಯದಲ್ಲಿಯೂ ಹಣದ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಂದ ಗ್ರಾಮ್ಯ ಇಲ್ಲವೆ ಬೀಭತ್ಸ ಸಂಗತಿಗಳು ವಿಟಂಬನೆ ಮಾಡುವ ಪ್ರಯತ್ನ. ಆದರೆ ಕೊನೆಗೆ ಕಾಯದೆಬದ್ಧ ಯಶಸ್ಸು ನಿಮಗೇ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೧೦, ೧೧, ೧೪ ಅನುಕೂಲ.

ಮಿಥುನ

ಪ್ರಕೃತಿ ಅನುಕೂಲ. ಆದರೆ ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸವಾಗುವ ಸಂಗತಿಗಳು. ರತಿ ಸುಖದ ಹೊರತು ಉಳಿದ ವಿಷಯ'ಗಳಲ್ಲಿ ಪತಿಪತ್ನಿಯರಲ್ಲಿ ತೀವ್ರ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವೆ. ಆದರೆ ಪ್ರತಿಯೊಂದು ಕೆಲಸದಲ್ಲಿ ಬಹಳ ಕಷ್ಟ. ಮತ್ತು ದಗದಗಿ ಮಿತ್ರರಲ್ಲಿ ಕ್ಲೇಶ. ಸ್ಥಾವರದಲ್ಲಿ ಹೆಚ್ಚಳ ಆದರೆ ರೋಖ ಸಂಗ್ರಹದಲ್ಲಿ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಆರಿದ್ರಾದ ಕೊನೆಯ ೨ ಮತ್ತು ಪುನರ್ವಸುವಿನ ಮೊದಲಿನ ೨ ಚರಣಗಳಿಗೆ ಹೆಚ್ಚು ತೊಂದರೆ. ೧೦, ೧೧, ೧೨, ೧೩ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಬಗೆಬಗೆಯ ಮಾನಸಿಕ ತೊಂದರೆ. ಸ್ತ್ರೀ ಸಹವಾಸದ ಸುಖ ಅನುಕೂಲ ಆದರೆ ಉಳಿದ ಅನೇಕ ವಿಷಯುಗಳಲ್ಲಿ ಉಭಯತರಲ್ಲಿ ತೀವ್ರ ಮತಭೇದ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ ಆದರೆ ಲಾಭ ಕಡಿಮೆಯೆ. ವಿಪರೀತ ವೆಚ್ಚ. ಏನೇನೊ ಜಗಳಗಳನ್ನು ಮೈಮೇಲೆ ಹಾಕಿಕೊಳ್ಳುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಪರಾಭವ ಸಂಭವ. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೦, ೧೧, ೧೨ ಅನುಕೂಲ.

ಸಿಂಹ

ಪ್ರಕೃತಿಗೆ ಅಲ್ಪ ಸ್ವಲ್ಪ ಕ್ಲೇಶ. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಆಪ್ತರು ಮತ್ತು ಸಹಾಯಕರಿಂದ ನಿಷ್ಕಾರಣ ಉಪಹಾಸ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯೆ. ಲಾಭ ಸಾಧಾರಣ ಅನುಕೂಲ. ಆದರೆ ಪ್ರತಿಷ್ಠೆಯಲ್ಲಿ ವಿಪರೀತ ವಿಘ್ನಗಳು ಬರುವ ಅಂಜಿಕೆ. ವಾಗದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವಲ್ಪ ಅನುಕೂಲತೆಯೆನಿಸಿದರೂ ತೊಂದರೆ ಮತ್ತು ವೆಚ್ಚ ವಿಪರೀತ. ಸ್ಥಾವರದಲ್ಲಿ ಹಾನಿ. ಪ್ರವಾಸದಲ್ಲಿ ಭಯಂಕರ ಅಡಚಣಿ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೆ ೨ ಚರಣಗಳಿಗೆ ತೋದರೆ ಹೆಚ್ಚು. ತಾ. ೮, ೧೨, ೧೪ ಅನುಕೂಲ.

ಕನ್ಯಾ

ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಬಂಧುವರ್ಗದವರಲ್ಲಿ ಉತ್ಕರ್ಷ. ಆಪ್ತರಲ್ಲಿ ಮಂಗಲ ಕಾರ್ಯಗಳು. ಉದ್ಯೋಗದಲ್ಲಿ ಪ್ರಗತಿ, ಪ್ರಗಷ್ಠೆ ಮತ್ತು ಲಾಭ ಅಂದಾಜಿನಷ್ಟೆ ಆಗುವವು. ಆದರೆ ಆಗುವ ವರೆಗೆ ವಿಪರೀತ ತೋಗರೆ. ಉದ್ಯೋಗಸ್ಥರಿಗಿಂತ ನೋಕರಿಯುವರಿಗೆ ತೊಂದರೆ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾದ ಕೊನೆಯ ೨ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೧೦, ೧೧, ೧೪ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಹಿತದಾಯಕ ಕೆಲ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಕಡಮೆ ಆದರೆ ಪ್ರತಿಷ್ಠೆ ವ್ಯವಸ್ಥಿತ. ಮಿತ್ರರು ಸುಳ್ಳು ಸುಳ್ಳೇ ಥಾಪು ಹೊಡೆದು ಹೇತು ಪುರಸ್ಸರವಾಗಿ ಇಲ್ಲವೆ ಕೇವಲ ಚೇಷ್ಟೆಗಾಗಿ ಚಿರಡಿಗೆಬ್ಬಿಸುವ ಉದ್ಯೋಗ ನಡೆಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಸ್ವಲ್ಪ ಅನುಕೂಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ, ತಾ. ೧೦, ೧೧, ೧೨ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ ಆದರೆ ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ತುಂಬ. ಪ್ರತಿಯೊಂದು ಕೆಲಸದಲ್ಲಿ ಎರಡನೆಯುವರ ಆರ್ಜವಮಾಡುವ ಪ್ರಸಂಗ ಮಾತ್ರ ಪರಸ್ತ್ರೀ ಬಗ್ಗೆ ಕುಬುದ್ಧಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೩, ೧೪ ಅನುಕೂಲ.

ಧನು

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಪ್ರಾಯಶಃ ಅನುಕೂಲ ಆದರೆ ಅಪ್ರಿಯ ಜನರ ಸಹವಾಸಮಾಡುವ ಕೆಲವೊಂದು ವ್ಯವಹಾರ. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಪ್ರತಿಯೊಂದು ಕೆಲಸದಲ್ಲಿ ನಡುವೇ ವಿರಸವಾಗಿ ಅನಂತರ ಅದು ಮನಸ್ಸಿನಂತೆ ಆಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯ ಅನುಕೂಲತೆ. ಮಿತ್ರತ್ವದಲ್ಲಿ ವಿಶೇಷ ರಹಸ್ಯ ಬೆಳೆಯುವದು. ಪ್ರವಾಸ ತೊಂದರೆಯದು; ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೧೨, ೧೩, ೧೪ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖವೂ ಅಲ್ಪ ಸ್ವಲ್ಪ ಸುಧಾರಿಸುವ ಮಾರ್ಗದಲ್ಲಿ. ಆದರೆ ಹೆಂಡತಿಯೊಡನೆ ಅಲ್ಪ ಸ್ವಲ್ಪ ಮತಭೇದ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಬಹುತರ ಎಲ್ಲ ಕಾರ್ಯಗಳಲ್ಲಿ ಎರಡನೆಯವರ ಬೊಗಸೆಯಲ್ಲಿ ನೀರು ಕುಡಿಯಬೇಕಾದ ಪ್ರಸಂಗ ಮತ್ತು ಅದರಿಂದ ಪ್ರತಿಷ್ಠೆ ಮತ್ತು ಅಲಕ್ಷ ಮಾಡಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವವಾದರೂ ಕೊನೆಗೆ ಬಹಳ ಅನುಕೂಲತೆ ಇದ್ದಂತೆ ಗೊತ್ತಾಗುವದು. ಮಿತ್ರ ಮತ್ತು ವಾಹನ ಸುಖ ಅನುಕೂಲ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಷಾಢಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೪ ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಉತ್ತಮ, ಲಾಭ ತುಂಬ, ಆದರೆ ಪ್ರತಿಷ್ಠೆ ಸಾಧಾರಣ ಕುಂದುತ್ತಲೆ ನಡೆಯುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರವೂ ಅನುಕೂಲ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಕೊನೆಯ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೧೨, ೧೩ ಅನುಕೂಲ.

ಮೀನ

ಪ್ರಕೃತಿ ಮತ್ತು ಪ್ರಾಪಂಚಿಕ ಗುಖ ಬಹಳ ಉತ್ತಮ. ಆದರೆ ಆಪ್ತರು ಬಹಳ ದ್ವೇಷಮಾಡುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಜೋರಿನಲ್ಲಿ ಮತ್ತು ಲಾಭ ಅಂದಾಜಿನಷ್ಟೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಸಂಗ್ರಹದಲ್ಲಿ ಹೆಚ್ಚಳ ಪ್ರವಾಸಾದಿ ಕೆಲಸ ಸುಖಕರ ಆದರೆ ಉತ್ತರಾ ಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೪ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು.

ಚಿಕ್ಕ ಕತೆ

(೧೫ ನೇ ಪುಟದಿಂದ ಮುಂದರಿದುದು)

ಹಿರಿ ದೀವಿಗೆಯ ಕೆಳಗಿನ ನೆಳಲು ಮಾತ್ರ ಕಿರಿ ದೀವಿಗೆಯ ಬೆಳಕಿನಿಂದ ಅಳಿಸಿಹೋಗಿತ್ತು.

ಮುಂದೆ ಹಿರಿದೀವಿಗೆ ಕೂಡ ಕಿರಿದೀವಿಗೆಯಷ್ಟೇ ಕೆಳಕ್ಕಿಳಿಯಿತು. ಆದರೆ ಅವರ ಬೆಳಕು ಉಡುಗಿತ್ತು. ತನ್ನ ಕೆಳಗೆ ನೆಳಲಿರದಿದ್ದರೂ ಇನ್ನೊಂದರ ನೆಳಲನ್ನು ಅಳಿಸಲಿಕ್ಕೆ ಅದಕ್ಕಾಗಲಿಲ್ಲ. ಇಷ್ಟಕ್ಕೆ ಅದು ಮುಗಿದಿತ್ತು. ಅದರ ಮುಂದೆ ಒಂದೆರಡು ಚಿಕ್ಕೆಗಳಿದ್ದವು. ಶಾಮನು ಟಾಕನ್ನು ದೋತಿಯೊಳಗೆ ಅದ್ದಿ ಆ ತೆರವಾದ ಎಡೆಯಲ್ಲಿ,

"ಹಿಂದುಗಡೆ ಕಿರಿದಾದ ದೀವಿಗೆ ಆರಿಹೋಯಿತು. ಮತ್ತು ಇದ್ದ ದೀವಿಗೆಯ ಕೆಳಗಿನ ನೆಳಲು ದಟ್ಟವಾಯಿತು."

ಎಂದು ಸೇರಿಸಿದನು. ಅವನು ಆ ಕಿರುಗತೆಯನ್ನು ಇನ್ನೊಮ್ಮೆ ಓದಿ ಹಾಳೆಯನ್ನು ಮಡಿಚುತ್ತ ಜಡ ಮನಸ್ಸಿನಿಂದ ಭಾರವಾದ ಕಣ್ಣುಗಳನ್ನು ಮೇಲಕ್ಕೆತ್ತಿದನು. ಬಾಕಿಲದ ಸುಳಿಕೆಯಲ್ಲಿ ಗಾಡಿಗೆ ಹೋದಡುವ ಸಿದ್ಧತೆಯಿಂದ ಸಿಂಗಾರಾದ ಅವನ ಹೆಂಡತಿಯು ಬೆರಗು ಗಣ್ಣಿನಿಂದ ಅವನನ್ನೇ ಸಿಟ್ಟಿಸಿ ನೋಡುತ್ತ,

"ಕತೆ ಬರೆಯಬೇಕಾದರೆ ನನ್ನ ಮೇಲೆ ಸಿಟ್ಟೇಕೋ?" ಎಂದು ನುಡಿದು ತನ್ನ ಕೋಮಲವಾದ ಮೊಗವನ್ನು ಅರಳಿಸಿದಳು.

ಅವಳ ನಗೆಗೆ ಮರುನಗದಿದ್ದರೆ ವಿರಸವಾದೀತೆಂದು ಶ್ಯಾಮನೂ ಮುಖವನ್ನು ಹಿಗ್ಗಿಸಿದನು.

ಆದರೆ ಅವನ ಮೋರೆಯ ಮೇಲೆ ನಗೆಯು ಒತ್ತಾಯದ ಶಿಕ್ಷಣದಂತೆ ಒಡಮೂಡಿತ್ತು.